(ಸದನವು 4.00 ಘಂಟೆಗೆ ಪುನರ್ ಸಮಾವೇಶಗೊಂಡಿತು. ಮಾನ್ಯ ಸಭಾಧ್ಯಕ್ಷರು (ಶ್ರೀ ಎಂವಿ. ವೆಂಕಟಪ್ಪನವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಅಧ್ಯಕ್ಷರು : ಈಗ ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು.

4 ಸಭೆಯ ಮುಂದಿಡಲಾದ ಕಾಗದ ಪತ್ರಗಳು:

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ, ಭಾರತದ ಲೆಕ್ಕಾ ನಿಯಂತ್ರಕರು ಮತ್ತು ಮಹಾಲೆಕ್ಕಾ ಪರಿಶೋಧಕರು, ನಗರ ಸ್ಥಳೀಯ ಸಂಸ್ಥೆಗಳು, ಬೆಂಗಳೂರು (ನಗರ) ಜಿಲ್ಲೆಯ 1998–99 ರಿಂದ 2001–2002 ವರ್ಷಗಳಿಗೆ ನೀಡಿರುವ ಕರ್ನಾಟಕ ಸರ್ಕಾರದ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇವೆ.

ಅಧ್ಯಕ್ಷರು : ಮಂಡಿಸಲಾಯಿತು

5 ಪ್ರಕಟಣೆ

ಅಧ್ಯಕ್ಷರು : ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಗಳಿಂದ ಈ ಕೆಳಕಂಡ ಸಂದೇಶ ಬಂದಿರುತ್ತದೆ.

'ಕರ್ನಾಟಕ ವಿಧಾನಪರಿಷತ್ತು ಕಾರ್ಯವಿಧಾನ ಮತ್ತು ನಡವಳಿಕೆ ನಿಯಮ 118 ರ ಮೇರೆಗೆ ವಿಧಾನಪರಿಷತ್ತಿನಿಂದ ಈ ಕೆಳಕಂಡ ವಿಧಾನಸಭೆಯ ವಿಧೇಯಕಗಳನ್ನು ದಿನಾಂಕ : 11ನೇ ಫೆಬ್ರವರಿ 2004ರಂದು ಯಾವುದೇ ತಿದ್ದುಪಡಿ ಇಲ್ಲದೆ ಅಂಗೀಕರಿಸಲಾಯಿತು ಎಂದು ತಿಳಿಸಿರುತ್ತಾರೆ.'

1. ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ ವಿಧೇಯಕ, 2004
2. ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಹೊರಹಾಕುವ) (ತಿದ್ದುಪಡಿ) ವಿಧೇಯಕ, 2003
3. ಕರ್ನಾಟಕ ಪಶು ವೈದ್ಯಕೀಯ ಹಾಗು ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ವಿಧೇಯಕ, 2004
4. ಕರ್ನಾಟಕ ಕೃಷಿ ಉತ್ಪನ್ನ ಮರುಕಟ್ಟೆ ವ್ಯವಹಾರ (ನಿಯಂತ್ರಣ) (ತಿದ್ದುಪಡಿ) ವಿಧೇಯಕ, 2004
5. ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ (ತಿದ್ದುಪಡಿ) ವಿಧೇಯಕ, 2004

6 ಶಾಸನ ರಚನೆ

ಬೆಂಗಳೂರು ಮಾಹಿತಿ ತಂತ್ರಜ್ಞಾನ ವಿಕಾಸ ವಲಯ ಪ್ರಾಧಿಕಾರ ವಿಧೇಯಕ, 2004

ಪರ್ಯಾಲೋಚನಾ ಪ್ರಸ್ತಾವ

†ಶ್ರೀ ಡಿ.ಬಿ. ಇನಾಂದಾರ್ (ಮಾಹಿತಿ, ತಂತ್ರಜ್ಞಾನ ಮತ್ತು ಜೈವಿಕೆ ತಂತ್ರಜ್ಞಾನ ಸಚಿವರು) : ಮಾನ್ಯ ಅಧ್ಯಕ್ಷರೆ, " 2004ರ ಕರ್ನಾಟಕ ಮಾಹಿತಿ ತಂತ್ರಜ್ಞಾನ ವಿಕಾಸ ವಲಯ ಪ್ರಾಧಿಕಾರ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಡಿ.ಬಿ. ಇನಾಂದಾರ್ (ಮಾಹಿತಿ, ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು) : ಮಾನ್ಯ ಅಧ್ಯಕ್ಷರು, ಬೆಂಗಳೂರು ಮಾಹಿತಿ ತಂತ್ರಜ್ಞಾನ ವಿಕಾಸ ವಲಯ ಪ್ರಾಧಿಕಾರ ವಿಧೇಯಕವನ್ನು ಸಭೆಯಲ್ಲಿ ಮಂಡಿಸಿದ್ದು, ಇದರ ಉದ್ದೇಶ ಏನೆಂದರೆ ಅನ್‌ಪ್ಲಾನ್ಡ್ ಡೆವಲಪ್‌ಮೆಂಟ್ ಆಗಬಾರದು ಎನ್ನುವ ದೃಷ್ಟಿಯಿಂದ ಬಹಳಷ್ಟು ಜನ ಇಲ್ಲಿ ಐ.ಟಿ ಕಂಪನಿಗಳು ಇಂಟರ್‌ನ್ಯಾಷನ್ ಮತ್ತು ನಮ್ಮ

ದೇಶದಲ್ಲಿ ಇರುವಂತಹವರಿಗೆ ಒಂದು ಹೊಸದಾದಂತಹ ವ್ಯವಸ್ಥೆಯನ್ನು ಮಾಡಬೇಕು. ಎಲೆಕ್ಟ್ರಾನಿಕ್ ಸಿಟಿಯಿಂದ ನಮ್ಮ ವೈಟ್‌ಫೀಲ್ಡ್‌ವರೆಗೂ ಒಂದು ಐ.ಟಿ ಕಾರಿಡಾರ್ ಅನ್ನು ಮಾಡಬೇಕೆನ್ನುವ ವಿಚಾರ ಇದೆ. ಅದೆಲ್ಲವನ್ನೂ ಒಂದು ಅಥಾರಿಟಿಯಲ್ಲಿ ತಂದು, ಮಾಡಬೇಕು. ಇದರಲ್ಲಿ ಅವರು ಕೆಲಸ ಮಾಡತಕ್ಕಂಥ ಸ್ಥಳಗಳಾಗಬಹುದು ಅಥವಾ ಅವರು ಇರಲಿಕ್ಕೆ ಕಮರ್ಷಿಯಲ್ ಸ್ಥಳಗಳನ್ನು ಮಾಡತಕ್ಕಂಥ ಒಂದು ಪ್ಲಾನ್ ಮಾಡಿದೆ. ಇದನ್ನು ನಡೆಸಿಕೊಂಡು ಹೋಗುವುದಕ್ಕೆ ಒಂದು ಅಥಾರಿಟಿಯನ್ನು ಕ್ರಿಯೇಟ್ ಮಾಡುತ್ತಿದ್ದೇವೆ. ಅದಕ್ಕೆ ಹೊಸದಾಗಿ ಈ ಬಿಲ್ ಅನ್ನು ತಂದಿದ್ದೇವೆ.

ಶ್ರೀ ಎಸ್.ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಬಿಲ್ ಪಾಸ್ ಮಾಡಲು ಬಹಳ ಅವಸರದಲ್ಲಿದ್ದಾರೆಂದು ಮಾನ್ಯ ಸಿಂಧ್ಯರವರು ಹೇಳಿದರು. ಬೆಂಗಳೂರು ಮಾಹಿತಿ ತಂತ್ರಜ್ಞಾನ ವಿಕಾಸ ವಲಯ ಪ್ರಾಧಿಕಾರ ವಿಧೇಯಕವನ್ನು ಇಂದು ಸಭೆಯ ಮುಂದಿಟ್ಟಿದ್ದೀರಿ, The Bangalore Information Technology Corridor Authority Bill, 2004.ಪ್ರಾಯಶ: ತಮ್ಮ Aims & objectನಲ್ಲಿ ನೋಡಿದರೆ, ಬೆಂಗಳೂರು ಬೆಳೆಯುತ್ತಿರುವ ಭರದಲ್ಲಿ ನಮಗೆ ಸಿಕ್ಕಿರುವ prominanceಅನ್ನು ನೋಡಿದರೆ, ಈ ಬಿಲ್ ಬಹಳ ಮುಂಚೆಯೇ ಬರಬೇಕಾಗಿತ್ತು. ಅಂದರೆ 2002ಕ್ಕೆ 2003ರಲ್ಲಿಯೇ ಬರಬೇಕಾಗಿತ್ತು, ಆದರೆ ತಾವು ಬಹಳ ತಡವಾಗಿ ಈ ಬಿಲ್ ಅನ್ನು ಸದನದಲ್ಲಿ ತಂದಿದ್ದೀರಿ, ಅದು ತಡವಾಗಿಯೂ ಅಲ್ಲ, ಲಾಸ್ಟ್‌ಡೇ, ಲಾಸ್ಟ್ ಓವರ್ ಆಫ್ ದಿ ಇನಿಂಗ್ಸ್ ಎಂದು ಕರೆಯುತ್ತಿರೋ, ಏನಂಥ ಕರೆಯುತ್ತಿರೋ, ಆ ಲಾಸ್ಟ್ ಬಾಲ್, ಆ ಟೈಮ್‌ನಲ್ಲಿ ಈ ಬಿಲ್ ಅನ್ನು ಸಭೆಗೆ ತಂದು, ನಮ್ಮ ಮುಂದಿಟ್ಟು, ಇದನ್ನು ಒಪ್ಪಬೇಕೆಂದು ಹೇಳುತ್ತಿದ್ದೀರಿ, ಇದು 11ನೇ ವಿಧಾನಸಭೆಯ ಕೊನೆಯ ದಿವಸವಾಗಿದೆ, ಮಾನ್ಯ ಅಧ್ಯಕ್ಷರೆ, ನಾವು ಈ ಬಿಲ್ ಅನ್ನು ಸ್ವಾಗತಿಸುತ್ತೇವೆ; ಇದು ಆಗಬೇಕು, ಆದರೆ, ತಾವು ಈ ವಿಧೇಯಕವನ್ನು ತರುವ ಭರದಲ್ಲಿ, ಕೆಲವು ವಿಚಾರಗಳು You have over-looked ಎಂದು ನಮಗೆ ಅನ್ನಿಸುತ್ತಿದೆ, ಆ ಕೆಲವೊಂದು ವಿಚಾರಗಳನ್ನು, ನಾನು ಈಗ ಸಭೆಯ ಮುಂದಿಡುತ್ತೇನೆ, ಅದಕ್ಕೆ ಮಾನ್ಯ ಸಚಿವರು ಉತ್ತರವನ್ನು ಕೊಡಬೇಕೆಂದು ಹೇಳುತ್ತೇನೆ. ಈ ವಿಧೇಯಕದಲ್ಲಿ ಸೆಕ್ಷನ್ ನಂ. 10 ಒಂದಿದೆ, ಇದರಲ್ಲಿ Powers and Functions of the Authority. Functions of the Authority: (b) to undertake preparation of a Master Development Plan containing such particulars and details as may be prescribed for the development of the Corridor and to carry out or cause to be carried out such work as are comteplated by the Master Development Plan;ಮಾನ್ಯ ಅಧ್ಯಕ್ಷರೆ, ಈಗಾಗಲೇ "ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿ" ಎಂದು ಒಂದು ಇದೆ, ಅವರು Comprehensive Development Plan ಒಂದು ಮಾಡಿದ್ದಾರೆ

ಸಿಡಿಪಿ, ನೀವು ಮಾಸ್ಟರ್ ಡೆವಲಪ್‌ಮೆಂಟ್ ಪ್ಲಾನ್ ಎಂದು ಏನು ಮಡುವುದಕ್ಕೆ ಹೊರಟಿದ್ದೀರಿ ಇದನ್ನೂ ಸಿಡಿಪಿಗೆ ಪರ್ಯಾಯವಾಗಿ ಮಾಡುತ್ತಿರಾ ಅಥವಾ ಸಿಡಿಪಿ ಬಿಟ್ಟು ಮಾಡುತ್ತಿರಾ? ಈ ಮಾಸ್ಟರ್ ಡೆವಲಪ್‌ಮೆಂಟ್ ಪ್ಲಾನ್ ಮತ್ತು ಸಿಡಿಪಿಗೆ ಏನು ಸಂಬಂಧ ಇದೆ. ಇದರ ಬಗ್ಗೆ ಮಾನ್ಯ ಮಂತ್ರಿಯವರು ಖಚಿತವಾದ ಉತ್ತರವನ್ನು ಕೊಡಬೇಕು. ನಿಮ್ಮ institutionsಗಳು ಏನಿದೆ, ಬಿಡಿಎಂದು, ಮತ್ತೆ ಹೊಸ ಅಥಾರಿಟಿದು, functions ಮತ್ತು ಆ ಜವಾಬ್ದಾರಿ ಓವರ್ ಲ್ಯಾಪ್ ಆಗಬಾರದು. ಇದು ಒಂದು ಮೊದಲ ಸಂದೇಹವಾಗಿದೆ; ಎರಡನೆಯದು ಸೆಕ್ಷನ್ 11, ಜನರಲ್ ಪವರ್ ಆಫ್ ಅಥಾರಿಟಿ,

ಇದೂ ಕೂಡ ಅಷ್ಟೆ, ಏನು ಸಬ್ ಸೆಕ್ಷನ್ (i) To acquire and hold such movable and immovable property as it may deem necessary ಎಂದು ಹೇಳಿ ಭೂಮಿಯನ್ನು ಸ್ವಾಧೀನ ಮಾಡಿಕೊಳ್ಳುವುದು, ಅದನ್ನು ಇಟ್ಟು ಕೊಳ್ಳುವಂಥಾದ್ದು ಮಾಡುಳ್ಳುವ ಈ ವಿಚಾರಕ್ಕೆ ನಮ್ಮಲ್ಲಿ ಕೆ ಐ ಎ ಡಿ ಬಿ ಇದೆ, ಅದಕ್ಕೋಸ್ಕರ ಇವರು ಮಾಡಿದ್ದಾರೆ, ಇವರು ಭೂ ಸ್ವಾಧೀನ ಮಾಡಿಕೊಂಡು ವಿಚಾರದಲ್ಲಿ ಬಹಳ ನಿಸ್ಸಿಮರು, ಈ ರೀತಿ ಭೂ ಸ್ವಾಧೀನ ಮಾಡಿಕೊಂಡು "ನೈಸ್ ಕಂಪೆನಿ" ಯವರಿಗೆ ಕೊಟ್ಟಿದ್ದಾರೆ. ಇದಕ್ಕೆ ಕೆ.ಐ.ಎ.ಬಿ ಇರುವಾಗ, ಅವರ ಒಂದು ಆ್ಯಕ್ಟ್ ಇರುವಾಗ, ಅದು ಒಂದು ಬೋರ್ಡ್ ಎಂದು ಇದ್ದು, ಭೂ ಸ್ವಾಧೀನ ಮಾಡಿಕೊಳ್ಳುವ ಪರ್ಪಸ್‌ಗೆ ಇರುವಾಗ, ಈಗ ನೀವು ಐ.ಟಿ.ಕಾರ್ಡ್‌ರ್ ಅಥಾರಿಟಿ ಮಾಡುತ್ತಿದ್ದಿರಿ, ಇದಕ್ಕೂ ಅದಕ್ಕೂ ಏನು ಸಂಬಂಧ? will they compete with each other? or they overlap?ಏನೆಂಬುದನ್ನು ಈ ಸಂದರ್ಭದಲ್ಲಿ ತಿಳಿಸಬೇಕು. ನಮಗೆ ಏನು ಭಯವೆಂದರೆ,ಇನ್‌ಕ್ಲೂಡಿಂಗ್ ಕೆ.ಐ.ಎ.ಡಿ.ಬಿ. ಎಲ್ಲಾ ಇನ್ಸಿಟ್ಯೂಶನ್‌ಗಳು ಬಹಳ ಒಳ್ಳೆಯ ವಿಚಾರಗಳಿಂದ, ಒಳ್ಳೆಯ ಮನಸ್ಸಿನಿಂದ ಪ್ರಾರಂಭವಾಗುತ್ತದೆ, ಲೇಟೆಸ್ಟ್ ಸ್ಟೇಜ್‌ನಲ್ಲಿ They will become real estate agents. ಭೂಮಿಯನ್ನು ಸ್ವಾಧೀನ ಮಾಡಿಕೊಂಡು, ಅದನ್ನು ಲಾಭದಾಯಕವಾಗಿ ಮಾರುವಂಥಾದಕ್ಕೆ ಈ ಅಥಾರಿಟಿಗಳು ಒಂದು ದಂಧೆಯಾಗಿ ಬಿಡುತ್ತವೆ. ಅದಕ್ಕೋಸ್ಕರ ಈ ಸೆಕ್ಷನ್ 11 ಏನಿದೆ, ಭೂ ಸ್ವಾಧೀನ ಮಾಡಿಕೊಳ್ಳಲು ಕೆ.ಐ.ಎ.ಡಿ.ಬಿ. ಇರುವಾಗ ಇದರ ಬಗ್ಗೆ ಸರ್ಕಾರದ ನಿಲುವು ಏನು? ಇದನ್ನೂ ತಿಳಿಸಬೇಕು, ಹಾಗೆ ಸೆಕ್ಷನ್ 12ರಲ್ಲಿ Development of the Corridor and matters connected therewith,-(2) (i) The Authority shall prepare a Master Development Plan ಮತ್ತೆ ಅದನ್ನೇ ಹೇಳಿದ್ದೀರಿ, ನೀವು for the development of the Corridor containing such particulars and details as it may consider necessary and as may be prescribed ಅದಕ್ಕಿಂತ ಮುಂಚೆ ಒಂದು ವಿಚಾರವನ್ನು ಹೇಳಿದ್ದೀರಿ, The Authority shall notwithstanding anything contained in the Karnataka Country and Town Planning Act, ನಮ್ಮಲ್ಲಿ Karnataka Town and Country Planning Act ಒಂದು ಇದೆ. ಅದು ಇರುವಾಗ ನೀವು ಹೇಳುತ್ತೀರಿ notwithstanding anything contained in the Karnataka Country and Town Planning Act and the Bangalore Development Authority Act, 1976 or any other law for the time being in force, be the Planning Authority for the Corridor. ಈಗ ಈ ರೀತಿ Town and Country Planning Act ಇರುವಾಗ ಈಗ ನೀವು ಹೊಸದಾಗಿ ಒಂದು ಬಿಲ್ ಏನು ತರುತ್ತಿದ್ದೀರಿ Will it supercede the Town and Country Planning Act? ಅದು ಪ್ರಶ್ನೆ, ಇದೆ, ಇದಕ್ಕೆ ನೀವು ಉತ್ತರವನ್ನು ಕೊಡುವಾಗ ಇದಕ್ಕು ಉತ್ತರವನ್ನು ಕೊಡಿ, ಏಕೆಂದರೆ ಐ.ಟಿ.ಯಲ್ಲಿರುವವರು ಬಹಳ ಬುದ್ಧಿವಂತರೂ ಇರುತ್ತಾರೆ. ಇದು ಮೊದಲನೆಯದು, ಅದೇ ರೀತಿಯಲ್ಲಿ ಸೆಕ್ಷನ್ 24ಕ್ಕೆ ಹೋದಾಗಲೂ ಅದೇ ರೀತಿಯಾಗುತ್ತದೆ. Acquisition of land for the Authority, ನಮ್ಮಲ್ಲಿ ಬಿ.ಡಿ.ಐ, ಇದೆ, ಕೆ.ಐ.ಐ.ಡಿ.ಬಿ. ಇದೆ, Land Acquisition Department ಇವೆಲ್ಲವೂ ಇರುವಾಗ ಇವರಿಗೆ ನೀವು ಜವಾಬ್ದಾರಿಯನ್ನು ಕೊಡುತ್ತಿದ್ದೀರಿ, ಮುಂದೆ ಒಂದು ದಿವಸ ಹೊಸದೊಂದು Contraversy ಆಗಿ, ಯಾರು ಜವಾಬ್ದಾರಿ ಎಂದು, ಏನೂ ಗೊತ್ತಾಗದೆ, ಒಂದು ವಿಚಿತ್ರವಾದಂತಹ ಸನ್ನಿವೇಶಕ್ಕೆ

ನಾವು ಎಂಟರ್ ಆಗಬಾರದು, ಅದನ್ನೂ ಕೂಡ ಸರ್ಕಾರ ಯೋಚಿಸಬೇಕಾಗಿತ್ತು, ತಾವು ಇದರ ಬಗ್ಗೆ ಯೋಚನೆ ಮಾಡಿದ್ದರೆ, ಅದಕ್ಕೆ ಕ್ಲಾರಿಫಿಕೇಶನ್ ಕೊಡಿ. ಇನ್ನು ಸೆಕ್ಷನ್ 25 ರಲ್ಲಿ ಗೌವರ್ನಮೆಂಟ್ ಲ್ಯಾಂಡ್ಸ್ ಬಗ್ಗೆ ಇದೆ, ಅದು ಏನೂ ಬೇಡ, ಸೆಕ್ಷನ್ 27ರಲ್ಲಿ specifying the corridor as Industrial Township ect.-ನೀವು ಹೊಸ ಒಂದು ಟೌನ್ ಶಿಫ್ ಮಾಡುತ್ತೀರಿ, ನೀವು ಈಗ Industrial Township ಎಂದು ಡಿಕ್ಲೇರ್ ಮಾಡಿದಾಗ, Whole corridor ನ ಸೆಕ್ಷನ್ 10 (c) ಬಗ್ಗೆ ನಾನು ಆಗಲೇ ಓದಿದೆ, ಅದು ಮತ್ತೆ ಇದು again contradictory ಆಗುತ್ತದೆ. 10(ಸಿ) ಸೆಕ್ಷನ್ ನಲ್ಲಿ to promote adequate infrastructure facilities and amenities such as housing, schools, colleges ಎಲ್ಲವೂ ಇದೆ, ಇಲ್ಲಿ ಸಪರೇಟ್ Township Authority ಮಾಡುತ್ತೇವೆಂದು ಹೇಳುತ್ತಿದ್ದೇವೆ, ಎಲ್ಲಕ್ಕಿಂತ ಆಶ್ಚರ್ಯಕರವೆಂದರೆ ಸೆಕ್ಷನ್ 29 protection of Action taken under this Act ಮಾನ್ಯ ಅಧ್ಯಕ್ಷರೆ, ನಾವು ಒಂದು ಪ್ರಜಾತಂತ್ರ ವ್ಯವಸ್ಥೆಯಲ್ಲಿದ್ದೇವೆ, ಈ ವ್ಯವಸ್ಥೆಯಲ್ಲಿ ಇದ್ದಾಗ, ಯಾವುದಾದರೂ ಎಕ್ಸಿಕ್ಯೂಟಿವ್ ತಪ್ಪು ಮಾಡಿದರೆ, ನನಗೆ ಅವರು ಅನ್ಯಾಯ ಮಾಡಿದರೆ, ನಾನು ಕೋರ್ಟಿಗೆ ಹೋಗಿ ಅಪ್ರೋಚ್ ಮಾಡುವಂತಹ ಹಕ್ಕು ನಮಗೆ ಇರಬೇಕು, ಅದಕ್ಕೇ ನ್ಯಾಯಾಂಗವೆಂದು ಇರುವುದು. ಇವರು ಏನು ಹೇಳುತ್ತಾರೆ, No suit, prosecution or legal proceedings shall lie against any member, officer or other person in the employment of the Authority or action under the directions of the Authority or the Chief Executive, for anything which is in good faith done or purporting to be done under this Act. Who will decide? ಇದು good faith ನಲ್ಲಿ ಮಾಡಿದರು, ಇದರಲ್ಲಿ ಮಾಡಿಲ್ಲವೆಂದು ಯಾರೂ ಕೂಡ ಕೇಸ್ ಹಾಕುವ ಹಾಗೆ ಇಲ್ಲ What is good faith? ಇದು ಬಹಳ draconian section ಇದು, ಈ ಸೆಕ್ಷನ್ ಅನ್ನು ನೀವು ಉಳಿಸಿಬಿಟ್ಟರೆ, ನಿಮ್ಮ ಹೊಸ ಅಥಾರಿಟಿಯವರೂ ಕೂಡ ಬೇಕಾದ ಹಾಗೆ ಮಾಡಿಕೊಂಡು ಹೋಗುತ್ತಾರೆ. ಅವರಿಗೂ ಕೂಡ ಲೈಕ್ಸ್ ಅಂಡ್ ಡಿಸ್ ಲೈಕ್ಸ್ ಇರುತ್ತದೆ, ಯಾವ ಮೇಲೆ ಬೇಕಾದರೂ ರಿವೆಂಜ್ ತೀರಿಸಿಕೊಳ್ಳುತ್ತಾರೆ, ಇಲ್ಲ, ಅವರಿಗೆ ಏನು ಬೇಕೋ ಅದನ್ನು ಮಾಡುತ್ತಾರೆ. ಈ ಸೆಕ್ಷನ್‌ಗೆ ಯಾಕೆ ಇಟ್ಟಿದ್ದೀರಿ? ಮತ್ತೆ ಗುಡ್ ಫೇತ್ ಅಂದರೆ ಏನು ಅರ್ಥ? ದಯವಿಟ್ಟು ಅದನ್ನು ಮಾನ್ಯ ಸಚಿವರು ಉತ್ತರ ನೀಡುವಾಗ ಹೇಳಬೇಕು; ಅದೇ ರೀತಿಯಲ್ಲಿ ಸೆಕ್ಷನ್ 31, Bar of suits etc.- (1) No order passed or proceedings taken by the Authority or an officer of the Authority under this Act, shall be called in question in any court, in any suit or application and no injunction shall be granted by any court in respect of any action taken or about to be taken by the Authority or such officer of the Authority in pursuance of any power conferred by or under this Act. ಇವರು ಏನು ಬೇಕಾದರೂ ಮಾಡಬಹುದು, ನ್ಯಾಯಾಲಯಕ್ಕೆ ಹೋಗುವ ಹಾಗೆ ಇಲ್ಲ. ಅಲ್ಲಿ injunction ತೆಗೆದುಕೊಳ್ಳುವ ಹಾಗೆ ಇಲ್ಲ, ಇವರ ಅನ್ಯಾಯವನ್ನು ಪ್ರಶ್ನಿಸುವ ಹಾಗೆ ಇಲ್ಲ, ಇದು ನೀವು ಅಥಾರಿಟಿ ಅಲ್ಲ, ಮಾಡುತ್ತಿರುವಂಥಾದ್ದು authoritarian; ಅಥಾರಿಟಿಗೆ ನೀವು authoritarian ಬಹಳ ಹತ್ತಿರ ಬಂದಿದ್ದೀರಾ ನೀವು, ನಾನು ಬೇಕಾದ ಹಾಗೆ ಮಾಡುತ್ತೇನೆ, ನೀನು ನಾನು ಹೇಳಿದ ಹಾಗೆ ಕೇಳು, ಎನ್ನುವಂಥ ಸ್ಥಿತಿಗೆ ಇವರು ಬಂದುಬಿಟ್ಟರೆ, ಇವರು I.T Corridor ಕಟ್ಟಿಕೊಂಡು ಸಾಮಾನ್ಯ ಜನರಿಗೆ ಏನು ಆಗಬೇಕು? ಅವರನ್ನು ಹಿಂಸೆ ಮಾಡಿಬಿಟ್ಟು ಮಾಡುವುದಕ್ಕೆ ಹೊರಟಿದ್ದಿರಾ ನೀವು.

ಇಲ್ಲಿ ಸೆಕ್ಷನ್ 29 ಮತ್ತು 31 ಅನ್ನು ಇಲ್ಲಿ ನೀವು ಏಕೆ ಅಡಕ ಮಾಡಿದ್ದೀರಾ, ಎಂಬುದೂ ಪ್ರಾಮುಖ್ಯವಾಗುತ್ತದೆ. ಇದಕ್ಕೂ ಸಹ ಮಾನ್ಯ ಸಚಿವರು ಉತ್ತರವನ್ನು ಕೊಡಬೇಕು, ಮತ್ತೆ ಈ ಆ್ಯಕ್ಟ್ ಅನ್ನು ಇಂಟ್ರಡ್ಯೂಸ್ ಮಾಡುವುದಕ್ಕಿಂತ ಮುಂಚೆ, ನಾನು ಆಗಲೇ ಹೇಳಿದಂತೆ ಕೆ.ಐ.ಎ.ಡಿ.ಬಿ ಇದೆ, ಬಿಡಿಎ ಇದೆ, ಟೌನ್ ಪ್ಲಾನಿಂಗ್ ಆ್ಯಕ್ಟ್ ಇದೆ, ಇದರ ಪರಿಸ್ಥಿತಿ ಏನಾಗುತ್ತದೆ, ಇದರ ಬಗ್ಗೆ ತಾವು ಏನಾದರೂ ಯೋಚನೆ ಮಾಡಿದ್ದೀರಾ?ಇನ್ನೊಂದು ಸೆಕ್ಷನ್-21 ಒಂದು ಇದೆ. Accounts and audit- Accounts of the income and expenditure of the Fund of the Authority shall be kept in accordance with such rules as may be prescribed. ನಾವು ಒಂದು ಬಿಲ್ ಮಾಡುವಾಗ ಇದರಲ್ಲಿ ಹೇಳಿಬಿಡುವುದು ಒಳ್ಳೆಯದು. ಇದನ್ನು ಆಡಿಟ್ ಯಾರು ಮಾಡುತ್ತಾರೆ? ಆಡಿಟ್ ಮಾಡಿಬಿಟ್ಟು ಯಾವ ದಿನ ಅಕೌಂಟ್ಸ್‌ನ್ನು ಸಬ್‌ಮಿಟ್ ಮಾಡಬೇಕು.This Bill is very very vague: (2) The Authority shall prepare an annual statement of accounts in such form as may be prescribed . (3) The accounts of the Authority shall be audited annually by such auditor as the state Government, may direct. The auditor shall in this report state...ಎಂದು ಹಾಕಿಕೊಂಡು ಹೋಗಿದ್ದೀರಿ. ಇವತ್ತು ಈ ಬಿಲ್‌ನಲ್ಲಿ ಯಾವ ಏಜೆನ್ಸಿಯಿಂದ ನೀವು ಲೆಕ್ಕಪರಿಶೋಧನೆ ಮಾಡಬೇಕೆಂದು ನೀವು ಹೇಳಲಿಲ್ಲ. ಅದು ಸ್ಟೇಟ್ ಅಕೌಂಟ್ಸ್‌ನಿಂದಲೋ ಅಥವಾ ಏಜೆನ್ಸಿಯಿಂದಲೋ ಅದರ ಬಗ್ಗೆ ಹೇಳಲಿಲ್ಲ. ಅಥವಾ ಈಗಾಗಲೇ ನಮ್ಮ ಲೆಕ್ಕ ಪರಿಶೋಧನೆ ಮತ್ತು ವಾರ್ಷಿಕ ವರದಿಗಳು ಯಾವ ಯಾವ ಪರಿಸ್ಥಿತಿಯಲ್ಲಿದೆ ಎಂಬುದನ್ನು ನೋಡುತ್ತೇವೆ. ಅದು ಯಾವಾಗ ನಮ್ಮ ಸ್ಟೇಟ್ ಅಸೆಂಬ್ಲಿಗೆ ಬರುತ್ತದೆ, ಅದನ್ನು ಯಾವಾಗ ಪ್ರಿಪೇರ್ ಮಾಡುತ್ತಾರೆ, ಅದಕ್ಕೆ ಏನು ನಿಗದಿಯಿಲ್ಲ. ಎಲ್ಲೂ ಕೂಡ ಪೀನಲ್ ಸೆಕ್ಷನ್ ಇಲ್ಲ. ಈ ಒಂದು ಬಿಲ್‌ನಲ್ಲಿ ನಾವು ಯಾವ ಪೀನಲ್ ಸೆಕ್ಷನ್ ಹಾಕಿ ಇಂತಹವರಿಂದಲೇ ಅಕೌಂಟ್ಸ್‌ನ್ನು ಮಾಡಿಸಬೇಕು ಎಂದು ಹೇಳಬೇಕು ಏಕೆಂದರೆ, ನಾನು ಆಗಲೇ ಹೇಳಿದಹಾಗೆ ಇದು ರಿಯಲ್ ಎಸ್ಟೇಟ್ ದಂದೆಯಾಗಿರುತ್ತದೆ. ಇದು ಭಾರಿದಂದೆಯಾಗಿದೆ, ಒಳ್ಳೆಯ ಲ್ಯಾಂಡ್‌ನ್ನು ನೀವು ಎಲೆಕ್ಟ್ರಾನಿಕ್ ಸಿಟಿಯ ಪಕ್ಕ ನೀವು ತೆಗೆದುಕೊಳ್ಳುತ್ತಿರುವುದು. ಅದಕ್ಕೋಸ್ಕರ ಅಕೌಂಟ್ಸ್‌ನ್ನು ಆಡಿಟ್ ಮಾಡುವುದಕ್ಕೆ ಸ್ಪೆಸಿಫಿಕ್ಕಾಗಿ ಈ ಸಂಸ್ಥೆ ಎಂದು ಗುರುತಿಸಿ ಇಷ್ಟು ದಿವಸಗಳಲ್ಲಿ ಅದನ್ನು ಆಡಿಟ್‌ನ್ನು ಕಂಪ್ಲೀಟ್ ಮಾಡಬೇಕು ಎಂದು ಮಾಡಬೇಕು. ಇಷ್ಟೆಲ್ಲವೂ ಕೂಡ ಒಂದು ವೇಗ್‌ನೆಸ್‌ನ್ನು ಇಟ್ಟುಕೊಂಡು ನೀವು ನಿನ್ನೆಯ ದಿವಸ ಬಿಲ್‌ನ್ನು ತಂದು ನಿನ್ನೆಯೇ ಇಲ್ಲಿ ಇಟ್ಟು ಇವತ್ತು ಬಿಲ್ ಪಾಸಾಗಬೇಕು ನಾನು ಕೌನ್ಸಿಲ್‌ಗೆ ಹೋಗಬೇಕು, ಎಂದು ಹೇಳಿದರೆ ಅದು ಸರಿಹೋಗುವುದಿಲ್ಲ, ಅದರೂ ಕೂಡ ಐ.ಟಿ. ಬಗ್ಗೆ ನಮಗೆ ಇರುವ ಒಂದು ಆಕರ್ಷಣೆ ಮತ್ತು ನಿಮ್ಮ ಸಂಭಾವಿತದ ಬಗ್ಗೆ ನಮ್ಮ ಗೌರವದಿಂದ ಇಷ್ಟು ಈ ಬಿಲ್‌ನ್ನು ಓದಿ ಇಷ್ಟನ್ನು ತಮ್ಮ ಗಮನಕ್ಕೆ ತಂದಿದ್ದೇವೆ. ದಯವಿಟ್ಟು ಇದಕ್ಕೆ ಉತ್ತರವನ್ನು ಕೊಡಿ. ಇದಕ್ಕೆ ತಾವು ಉತ್ತರವನ್ನು ಕೊಡದೇ ಇದ್ದರೆ ನಾನು ಆಗಲೇ ಹೇಳಿದಹಾಗೆ ಇದು ಅಥಾರಿಟಿ ಬಿಲ್ ಆಗುವುದಿಲ್ಲ. ಅಥಾರಿಟೇರಿಯನ್ ಬಿಲ್ ಆಗುತ್ತದೆ. ಅದಕ್ಕೆ ನಾವು ಅವಕಾಶವನ್ನು ಕೊಡುವುದು ಕಷ್ಟವಾಸಗುತ್ತದೆ.

†ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ) : ಮಾನ್ಯ ಅಧ್ಯಕ್ಷರೆ ಮಾನ್ಯ ಸುರೇಶ್ ಕುಮಾರ್‌ರವರು ಹೇಳಿರುವ ಎಲ್ಲಾ ಅಭಿಪ್ರಾಯಗಳಿಗೂ ಕೂಡ ನಾನು ಧ್ವನಿಯನ್ನು ಕೂಡಿಸುತ್ತೇನೆ.

(†ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

ನಾನು ಮಾನ್ಯ ಮಂತ್ರಿಗಳಿಂದ ಉತ್ತರವನ್ನು ಬಯಸುವುದೇನೆಂದರೆ, ಈ ತರಾತುರಿಯಲ್ಲಿ ಈ ವಿಧೇಯಕವನ್ನು ತಂದು ಇದನ್ನು ಮಾಡಿಕೊಳ್ಳತಕ್ಕಂತಹ ಅವಶ್ಯಕತೆ ಏನು? ಇದರ ಬಗ್ಗೆ ತಾವು ದಯವಿಟ್ಟು ಸ್ಪೆಸಿಫಿಕ್ಕಾಗಿ ನನಗೆ ಹೇಳಬೇಕು. ಏಕೆಂದರೆ, ನಿಮ್ಮ ಸರ್ಕಾರ ಐ.ಟಿ.ಬಿ.ಟಿ ಸರ್ಕಾರವಾಗಿ ನಾಲ್ಕು ವರ್ಷಗಳಿಂದ ನಾವು ಟ್ರಾನ್ಸ್‌ಫರಟ್ಸ್ ಆಗಿ ಕೆಲಸವನ್ನು ಮಾಡಿಕೊಂಡು ಬರುತ್ತೇವೆಂದು ಹೇಳಿ, ಈ ಬೆಂಗಳೂರು ಮೈಸೂರು ಕಾರಿಡಾರ್ ಯೋಜನೆಯಲ್ಲಿ ಸಾವಿರಾರು ಜನ ರೈತರಿಗೆ ಅನ್ಯಾಯ ಮಾಡಿರುವುದು ಇದು ಎಲ್ಲರಿಗೂ ತಿಳಿದಿರತಕ್ಕಂತಹ ವಿಚಾರವಾಗಿದೆ. ಇದರಲ್ಲಿ ಮೂಲಭೂತವಾಗಿ this is a real estate business as far as the Government is concerned. ಇದರಲ್ಲಿ the Government behaves like a real estate agent. ಸರ್ಕಾರದ ಕೆಲಸ ಏನೆಂದರೆ, 137 ಸ್ಕ್ವೇಯರ್ ಕಿಲೋಮೀಟರ್ ಎಂದು ಹೇಳಿದ್ದೀರಿ, 137 ಸ್ಕ್ವೇಯರ್ ಕಿಲೋಮೀಟರ್ ಜಾಗಕ್ಕೆ ಬೆಂಗಳೂರು ಸುತ್ತಮುತ್ತ ನೀವು ಯಾರ್‍ಯಾರಿಗೂ ಕೊಡಲು ಹೊರಟಿದ್ದೀರಿ ಮೊನ್ನೆ ಅಮೇರಿಕಾದಲ್ಲಿ ಔಟ್‌ಸೋರ್ಸ್‌ನ್ನು ನಿಲ್ಲಿಸುತ್ತೇವೆ ಎಂದು ಅವರು ಹೇಳಿದ್ದಾರೆ. ಔಟ್‌ಸೋರ್ಸ್‌ನ್ನು ನಿಲ್ಲಿಸುತ್ತೇವೆಂದು ಹೇಳಿ ಬುಷ್‌ರವರ ಆಡಳಿತ ಚುನಾವಣೆ ಮುಂದೆ ಹೇಳಿದೆ. ಅದರಿಂದ ಅಗತಕ್ಕಂತಹ ಇಂಪ್ಲಿಕೇಷನ್ಸ್ ಏನು ಎನ್ನುವುದದರ ಬಗ್ಗೆ ನೀವು ಯೋಚನೆಯನ್ನು ಮಾಡಿಲ್ಲ. ಈಗಾಗಲೇ ಇದೇ ರೀತಿ ಬಹಳ ದೊಡ್ಡ ಘನ ಉದ್ದೇಶದಿಂದ ನಮ್ಮ ಕೆಐಎಡಿಬಿ ಪ್ರಾರಂಭವಾಯಿತು, ಇದು ಪ್ರಾರಂಭವಾದಾಗ ಎಷ್ಟೊಂದು ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್‌ಗಳು ಬಂತು, ಇಡೀ ರಾಜ್ಯದಲ್ಲಿ ಬಹುತೇಕ ತಾಲ್ಲೂಕುಗಳಲ್ಲಿ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಎಸ್ಟೇಟ್‌ಗಳು ಇವೆ, ಎಷ್ಟು ಫಂಕ್ಷನ್ಸ್ ಆಗುತ್ತಿವೆ, ಅವೆಲ್ಲವೂ ಕೂಡ ಈಗ ಕಲ್ಯಾಣ ಮಂಟಪಗಳಾಗುತ್ತಿವೆ, ಯಾವ ಉದ್ದೇಶಕ್ಕಾಗಿ ನಾವು ರೈತರನ್ನು ಹಾಳು ಮಾಡಿ ಮಾಡಿ ಅದನ್ನು ತೆಗೆದುಕೊಂಡೆವು ಅದು ರಿಯಲ್ ಎಸ್ಟೇಟ್ ಆಗಿ ಕನ್‌ವರ್ಟ್ ಆಗಿದೆಯೇ ಹೊರತು ಇಂಡಸ್ಟ್ರೀಸ್ ಆಗಿ ಬದುಕಿರತಕ್ಕಂಥದ್ದು ಬಹಳ ಕಡಿಮೆ. ಅದಕ್ಕಾಗಿ ನಾನು ಇದನ್ನು ಸಪೋರ್ಟ್ ಮಾಡುವುದಿಲ್ಲ. I don't support this because I question the intentions of this Government to bring this at this late hour. ಏಕೆ ಇದನ್ನು ಮಾಡಬೇಕೆಂದು ಹೊರಟ್ಟಿದ್ದೀರಿ? ಇದನ್ನು ನಾಳೆ ದಿವಸ ಕೌನ್ಸಿಲ್‌ನಲ್ಲಿ ಪಾಸ್ ಮಾಡಿ ಗೌರ್ನರ್ ಅಪ್ರೂವಲ್ ತೆಗೆದುಕೊಂಡು ಲ್ಯಾಂಡ್ ಅಕ್ವೈರ್ ಮಾಡಿ ಅವರಿಂದ ಏನಾದರೂ ಸರ್ಕಾರ ಅಡಳಿತ ನಡೆಸತಕ್ಕಂಹವರ ಕೈಗೆ ಏನಾದರೂ ಬೆಣ್ಣೆ ಸವರಿಕೊಳ್ಳಬೇಕು ಎಂದು ಇದ್ದೀರಾ ಎನ್ನುವುದು ನನ್ನ ಆಪಾದನೆಯಾಗಿದೆ; ಇದರ ಬಗ್ಗೆ ನಾನು ತಮಗೆ ನೇರವಾಗಿ ಹೇಳುತ್ತಿದ್ದೇನೆ. ಎಲೆಕ್ಷನ್ಸ್ ಹತ್ತಿರ ಬಂತೆಂದು ಹೇಳಿ ಇದನ್ನು ತರಾತುರಿಯಲ್ಲಿ ತಂದಿದ್ದೀರಿ ಯಾವ ಕಾರಣದಿಂದ ಇದನ್ನು ತಂದಿದ್ದೀರಾ? ಇದರ ಬಗ್ಗೆ ನಿಮಗೆ ಎಷ್ಟು ಜನರು ಅರ್ಜಿಯನ್ನು ಸಲ್ಲಿಸಿದ್ದಾರೆ? ಎಷ್ಟು ಇಂಡಸ್ಟ್ರೀಸ್‌ಗಳವರು ನಿಮಗೆ ಜಾಗ ಇಲ್ಲವೆಂದು ಹೇಳಿದ್ದಾರೆ? ಇದು ಯಾವ ಮಟ್ಟಕ್ಕೆ ಬಂದಿದ್ದಾರೆಂದರೆ, ನಾನು ಜೆ.ಪಿ. ನಗರದ ನಿವಾಸಿ, ಬನ್ನೇರುಘಟ್ಟದಿಂದ ಹಿಡಿದು ಅಲ್ಲಿರತಕ್ಕಂತಹ ಎಲ್ಲಾ ಕಡೆಗಳಲ್ಲೂ ಸಹಿತ ಈ ಡಿನೋಟಿಫಿಕೇಷನ್ ವಿಚಾರದಲ್ಲಿ ಈ ಸರ್ಕಾರ ಬಹಳ ಮೋಸವನ್ನು ಮಾಡಿದೆ. ನನಗೆ ಸಮಯ ಸಿಗಲಿಲ್ಲ ಆದ್ದರಿಂದ ಮಾತನಾಡುವುದಕ್ಕೆ ಆಗಲಿಲ್ಲ. ಮಾನ್ಯ ಸದಸ್ಯರಾದ ಶ್ರೀ ಸೋಮಶೇಖರ್‌ರವರು ಅದನ್ನು ಸ್ವಲ್ಪ ಹೇಳಿ ಅದನ್ನು ಅಲ್ಲಿಗೆ ನಿಲ್ಲಿಸಿದರು. ಅವರಿಗೂ ಕೂಡ ಮಾತನಾಡುವುದಕ್ಕೆ ಸಮಯದ ಅಭಾವವಾಯಿತು, ಅವರು ಎರಡುಗಂಟೆ ಮಾತನಾಡಿದರೂ ಎಂದು ಹೇಳಿಬಿಟ್ಟು ಅವರ ಮೇಲೆ ಕೆಲವರು ಅಪಾದನೆಯನ್ನು ಮಾಡುತ್ತಿದ್ದರು. ಆದ್ದರಿಂದ ಅವರು ಈ ಬಗ್ಗೆ ಹೆಚ್ಚಿಗೆ ಮಾತನಾಡುವುದಕ್ಕೆ ಆಗಲಿಲ್ಲ. ನಾನು ಇರುವುದನ್ನು

ಮಾತ್ರ ಹೇಳುತ್ತಿದ್ದೇನೆ. ಇದನ್ನು ತಾವು ಯಾವ ಉದ್ದೇಶದಿಂದ ಮಾಡುತ್ತಿದ್ದೀರಾ? What is going to be the role of Municipalities there? ಲೋಕಲ್ ಬಾಡಿಸ್ ಅಲ್ಲಿ ಇದೆ, ಅದರ ರೋಲ್ ಏನು? ಇದನ್ನು ಮಾಡುವುದಕ್ಕೆ ನಿಮಗೆ ಬೇಕಾಗಿರತಕ್ಕಂತಹ ಇನ್‌ಫ್ರಾಸ್ಟ್ರಕ್ಚರ್‌ಕ್ರಿಯೇಟ್ ಮಾಡಿಕೊಳ್ಳುವುದಕ್ಕೆ ಏನು ಮಾಡಿದ್ದೀರಾ? ಅದಕ್ಕೆ ನೀರು ಬೇಕಾಗುತ್ತದೆ, instead of doing it here, ನೀವು ದೇವನಹಳ್ಳಿ ಆಚೆಗೆ ಇಂಟರ್‌ನ್ಯಾಷನಲ್ ಏರಪೋರ್ಟ್‌ಹತ್ತಿರದಲ್ಲಿರುವ ಕಡೆಯೇ ಮಾಡಿ. ಏನಂತೆ? ಯಾರಿಗೆ ತಾವು ಸ್ಯಾಟಿಸ್‌ಫೈ ಮಾಡುವುದಕ್ಕೆ ಇದನ್ನು ಮಾಡುತ್ತಿದ್ದೀರಾ ಎನ್ನುವುದಕ್ಕೆ I have got doubts about this. You are an innocent person. You are an incapable of understanding, understand the under-hand dealings about all these things. You are incapable. ನನಗಂತೂ ಇದರ ಬಗ್ಗೆ ಅರ್ಥವಾಗುತ್ತಿಲ್ಲ. ನೀವು ಮತ್ತೆ ಮಾಡಿರತಕ್ಕದ್ದು ಏನೆಂದರೆ: ಇದು ಒಂದು ದೊಡ್ಡ ಹಿಟ್ಲರ್ ಸಾಮ್ರಾಜ್ಯದಲ್ಲಿ ಅವನು ಸೈನಿಕರನ್ನು ಇಡಲಿಕ್ಕೆ ಬ್ಯಾರೆಕ್‌ಗಳನ್ನು ಮಾಡುತ್ತಿದ್ದನಲ್ಲಾ ಹಾಗೆ ಇಲ್ಲಿ ನೀವು ಕಾರಿಡಾರ್ ಯೋಜನೆಯನ್ನು ಮಾಡಿ ಅವರಿಗೆ ಮಸಾಜಿಂಗ್‌ನಿಂದ ಹಿಡಿದು ಮತ್ತು ಮಿನಿ ಹೆಲಿಕಾಪ್ಟರ್‌ಗಳನ್ನು ತೆಗೆದುಕೊಂಡು ಬಂದು ನಿಲ್ಲಿಸುವುದಕ್ಕೆ ಮಾಡಿರತಕ್ಕಂತಹ ವಸ್ತುಗಳನ್ನು ಹಿಡಿದು ಸ್ವಿಮಿಂಗ್‌ಪೂಲ್‌ಗಳಿಂದ ಹಿಡಿದು ಅಲ್ಲಿ ಯಾರು ಸ್ಟ್ರೇಂಜರ್ಸ್ ಹೋಗದೇ ಇರಬಾರದು, ಅನ್ನುವ ಮಟ್ಟದಲ್ಲಿ ಇದನ್ನು ತೆಗೆದುಕೊಂಡು ಬಂದಿದ್ದೀರಿ ನನಗೆ ಇದರ ಬಗ್ಗೆ ಅರ್ಥವಾಗುತ್ತಿಲ್ಲ. what is the necessity of this ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ಏನು 10 ಎಕರೆಯೇ? 20 ಎಕರೆಯೇ? 30 ಎಕರೆಯೇ?ಆನೇಕಲ್ ಎಂಎಲ್‌ಎಯವರು ಇಲ್ಲಿಗೆ ಬಂದಿಲ್ಲ, ಇದು ಅನೇಕಲ್ ತಾಲ್ಲೂಕಿನಲ್ಲಿ ಮುಖ್ಯವಾಗಿ ಬರುತ್ತಿದೆ. ಆ ತಾಲ್ಲೂಕಿನಲ್ಲಿ ವ್ಯವಸಾಯದ ಜಮೀನು ಸಂಪೂರ್ಣವಾಗಿ ನಾಶವಾಗಿದೆ. ಅಲ್ಲಿ ಬಂದಿರತಕ್ಕಂತಹ ಕೈಗಾರಿಕೆಗಳು ಮುಚ್ಚಿಹೋಗಿವೆ. ಅಲ್ಲಿ ಜನರು ಜಮೀನುಗಳನ್ನು ಕಳೆದುಕೊಂಡರು; ಹಾಗೂ ಕೂಲಿಯನ್ನು ಕಳೆದುಕೊಂಡರು. ಆ ಸ್ಥಿತಿಗೆ ಬಂದಿದ್ದೇವೆ, ಅಂತಹದ್ದರಲ್ಲಿ ಯಾವ ಘನ ಉದ್ದೇಶದಿಂದ ತರಾತುರಿಯಲ್ಲಿ ಇದನ್ನು ನೀವು ಮಾಡುವುದಕ್ಕೆ ಹೊರಟ್ಟಿದ್ದೀರಾ ಎಂಬುದನ್ನು ಎಕ್ಸ್‌ಪ್ಲೇನ್ ಮಾಡಬೇಕು. ನಿಮಗೆ ಎಷ್ಟು ಅರ್ಜಿಗಳು ಬಂದಿವೆ? ಎಷ್ಟು ಮಲ್ಟಿನ್ಯಾಷನಲ್ ಕಂಪನಿಗಳು, ಐ.ಟಿ. ಮತ್ತು ಬಿ.ಟಿ. ಜಮೀನು ಇಲ್ಲದಿರತಕ್ಕಂತಹವರು, ಏಕೆಂದರೆ, ನಮ್ಮ ಮಾನ್ಯ ಮುಖ್ಯಮಂತ್ರಿಗಳು ಆ ವಿಚಾರದಲ್ಲಿ ನಿಜವಾಗಿಯೂ ಬಹಳ ಧಾರಾಳಿಗಳು. ಈ ಸೈಟ್‌ಗಳನ್ನು ಕೊಡತಕ್ಕಂತಹ ವಿಚಾರದಲ್ಲಿ, ಬೆಂಗಳೂರಿನಲ್ಲಿ ಬಿ.ಡಿ.ಎ. ಪ್ರಾರಂಭವಾದಾಗಿನಿಂದಲೂ ಎಷ್ಟೆಷ್ಟು ನಿಮ್ಮ ಸ್ಟೇ ಸೈಟ್‌ಗಳಿತ್ತು, ಅದನ್ನು ಯಾರ್‍ಯಾರಿಗೆ ಬೇಕು ಅವರಿಗೆಲ್ಲರಿಗೂ ಕೊಟ್ಟುಬಿಟ್ಟಿದ್ದಾರೆ. ತಕ್ಷಣ ಟೈಮ್ ಬರುತ್ತದೆ " ಉಪ್ಪು ತಿಂದವನು ನೀರನ್ನು ಕುಡಿಯುತ್ತಾನೆ" ಕುಡಿಯಲೇಬೇಕಾಗುತ್ತದೆ, ಅದರಲ್ಲಿ ಏನೂ ಸಂಶಯವಿಲ್ಲ, ಅವೆಲ್ಲವನ್ನೂ ಮುಚ್ಚಿಡುವುದಕ್ಕೆ ಆಗುವುದಿಲ್ಲ. ಅದಕ್ಕೆ ಟೈಮ್ ಬರುತ್ತದೆ, ಆಗ ನಾವು ಅದರ ಬಗ್ಗೆ ಕೇಳುತ್ತೇವೆ. ನಿಮಗೆ ಕೆಲವು ಕಂಪನಿಗಳಿಗೆ ಜಮೀನುಗಳನ್ನು ತೆಗೆದುಕೊಳ್ಳುವ ಹಾಗೆ ಮಾಡುವುದು, ಅದನ್ನು ಡೀ ನೋಟಿಫೈ ಮಾಡುವುದು De-notification is a big business going on in some Government agencies in Bangalore. ಅವರು ಹೇಳಿಕೊಂಡರು, ನಾನು ಭಾಷಣದಲ್ಲಿ ಹೇಳಬೇಕೆಂದು ಇದ್ದೆ, ಅವರು 300 ಕೋಟಿ ರೂಪಾಯಿಗಳ ಸೆಕೆಂಡ್ಸ್ ನಿಲ್ಲಿಸಿಬಿಟ್ಟೆ ಎಂದು ಹೇಳಿಬಿಟ್ಟರು. ಸಾರಾಯಿ ಸೆಕೆಂಡ್ಸ್ ಬಗ್ಗೆ ಕೇಳುವವರು ಯಾರೂ ಇಲ್ಲ. ಅದನ್ನು ಹೇಳುವುದಕ್ಕೆ ಹೊರಟರೆ ವಿಷಯಾಂತರವಾಗಿಬಿಡುತ್ತದೆ. ಆದ್ದರಿಂದ ಆ ವಿಚಾರದ ಬಗ್ಗೆ ಹೇಳುವುದಕ್ಕಾಗುವುದಿಲ್ಲ. ಇದರ ಹಿಂದೆ

ಏನು ಉದ್ದೇಶವಿದೆ? ಎಷ್ಟು ಅರ್ಜಿಗಳು ನಿಮಗೆ ಬಂದಿವೆ? ಎಷ್ಟು ಜನರು ನಿಮಗೆ ಜಮೀನು ಕೇಳಿದ್ದಾರೆ? ಯಾವ್ಯಾವ ಐ.ಟಿ. ಕಂಪನಿಗಳು, ಬಿ.ಟಿ. ಕಂಪನಿಯವರು ನಿಮ್ಮ ಹತ್ತಿರ ಬಂತು ಈ ಕಾರಿಡಾರ್‌ನ್ನು ಮಾಡಬೇಕು ನಮಗೆ ಟ್ರ್ಯಾಫಿಕ್ ಕಂಜೆಷನ್, ಪಲ್ಯೂಷನ್ ಪ್ಲಾಬ್ಲಮ್ ಇದೆ, ನಾವು ಓಡಾಡುವುದಕ್ಕಾಗುವುದಿಲ್ಲ ಎಂದು ಅಜೀಂಪ್ರೇಮ್‌ಜಿಯವರು ಕೊಟ್ಟಿದ್ದಾರಾ? ನಾರಾಯಣಮೂರ್ತಿಯವರು ಕೊಟ್ಟಿದ್ದಾರಾ ಅಥವಾ ಇನ್ಯಾರೋ ಬಿ.ಎ.ಟಿ.ಎಫ್. ಇದೆಯಲ್ಲಾ ಅವರವರು ಯಾರಾದರೂ ಹೇಳಿದ್ದಾರೆಯೇ? ಇದನ್ನು ಹೇಳುವುದಕ್ಕೆ ನಿಮಗೆ ಬೇಕಲ್ಲಾ? ಅಂತಹ ಸಾಕ್ಷಾಸಧಾರಗಳನ್ನು ಸಭೆಗೆ ಕೊಟ್ಟರೆ ಬಹುಶ: ನನಗನ್ನಿಸುತ್ತದೆ ಈ ಸದನದ ಅನೇಕ ಸದಸ್ಯರುಗಳಿಗೆ ಇದು ಏನಾಗುತ್ತಿದೆ ಎಂಬುದೇ ಗೊತ್ತಿಲ್ಲ. If the Ruling Party MLAs come to know this, definitely they don,t support. ಈಗ ಏನೋ ಅಟೋಮ್ಯಾಟಿಕಲ್ ಆಗುತ್ತದೆ ನೀವು ಮಾಡುವುದನ್ನು ಮಾಡಿಕೊಳ್ಳುತ್ತೀರಿ ಬೆಚ್ಚಗೆ ಮಾಡಿಕೊಂಡು ಹೋಗುತ್ತೀರಾ ಅವರಿಗೂ ಗೊತ್ತಾಗುವುದಿಲ್ಲ ನಿಮಗೂ ಕೂಡ ಸರಿಯಾಗಿ ಗೊತ್ತಿರುವುದಿಲ್ಲ. ಮಾಡಿಕೊಳ್ಳುವವರು ಮಾಡಿಕೊಳ್ಳುತ್ತಾರೆ, ಹೀಗಾಗಿ ಪಾಸು ಮಾಡಿಕೊಂಡು ಹೋಗುವುದು ಬೇಡ. ದಯವಿಟ್ಟು ಇದನ್ನು ತಾವು ತಡೆಹಿಡಿಯಿರಿ. ನಾವು ಸಹಿತ ಇದರ ಹಿಂದಿನ ಉದ್ದೇಶಗಳನ್ನು 24 ಗಂಟೆಯಾಳಗಾಗಿ ನಾವು ತಿಳಿದುಕೊಳ್ಳುವುದಕ್ಕಾಗಲಿಲ್ಲ. ಏಕೆಂದರೆ, ಕಾಣದಕೈಗಳು ನಿಮಗೂ ಮತ್ತು ನಮಗೂ ಬಹಳ ಇರುತ್ತವೆ. ಬೆಂಗಳೂರು ಸುತ್ತಮುತ್ತ ಈಗ ಗ್ರೀನ್ ಬೆಲ್ಟ್ ಎಂದಿ ಇವತ್ತು ಆ ಗ್ರೀನ್ ಬೇಲ್ಟ್‌ನ್ನು ನಾವು ಸರ್ವನಾಶ ಮಾಡಿಬಟ್ಟೆವು ಆ ಗ್ರೀನ್ ಬೇಲ್ಟ್ ಅರ್ಧಎಕರೆ ಬಿಟ್ಟಿದ್ದೇ ದೊಡ್ಡ ಅಪರಾಧ, ಎಂದು ಹೇಳಿ ನೀವು ನಮ್ಮ ಜೊತೆಯಲ್ಲಿ ಮಂತ್ರಿಯಾಗಿದ್ದಾಗ, ರಾಮಕೃಷ್ಣಹೆಗಡೆಯವರ ಮೇಲೆ, ಮಾನ್ಯ ಖರ್ಗೆಯವರು ಏನು ಗೋಳುಹುಯ್ದು ಕೊಂಡರು ಎಂಬುದು ನಿಮಗೆ ಗೊತ್ತಿರುವುಂತಹ ವಿಚಾರ. ಆಗ ನಮ್ಮ ಕಣ್ಣಿನಲ್ಲಿ ನೀರಲ್ಲ, ರಕ್ತ ಬರಿಸಿಬಿಟ್ಟರು. ಈಗ

4.30 ಪಿ.ಎಂ

ನಾವೂ ಅಷ್ಟು ಮಾತನಾಡಬಹುದೇ ಕೇವಲ ಅರ್ಧ ಎಕರೆಯಲ್ಲಿ, ನಿಮ್ಮ ಮುಖ್ಯಮಂತ್ರಿಗಳು ಇದರಲ್ಲಿ 132 ಸ್ಕ್ವೈರ್ ಕಿ.ಮೀ.ಅನ್ನು ಹೊಡೆಯಲು ನೋಡುತ್ತಿದ್ದಾರೆ. What is the real intention of this we would like to know.

ಶ್ರೀ ಡಿ.ಬಿ. ಇನಾಂದರ್ : ಸನ್ಮಾನ್ಯ ಅಧ್ಯಕ್ಷರೇ, the reason behind this IT corridor is that there has to be a planned development.ಐ.ಟಿ. ಎಲ್ಲಿದೆ, ಅದು ಐ.ಟಿ ಕಂಪನಿಗಳನ್ನು ಸೆಟಪ್ ಮಾಡತಕ್ಕಂಥಾದ್ದು ಆಗಬಹುದು ಅಥವಾ ಕಮರ್ಷಿಯಲ್ ಆಗಬಹುದು, ಸ್ಕೂಲುಗಳು, ಹಾಸ್ಪಿಟಲ್‌ಗಳನ್ನು ಮಾಡುವಂಥಾದ್ದು ಆಗಬಹುದು...?........

ಶ್ರೀ ಪಿ.ಜಿ.ಆರ್. ಸಿಂಧ್ಯ : ಇನಾಂದಾರ್‌ರವರೇ, ಒಂದು ನಿಮಿಷ, ನಂತರ ತಾವು ಉತ್ತರ ಕೊಡುವಿರಂತೆ, ಅದಕ್ಕೆ ಅಧ್ಯಕ್ಷರು ಸಮಯ ಕೊಡುತ್ತಾರೆ. ನಾನು ಸಿಂಗಾಪುರದಲ್ಲಿ ಮೆ. ಜುರೋ ಕನಸಲ್ಟೆನ್ಸಿರವರ ಜುರಾಂಗೆ ಪಾರ್ಕೆಗೆ ಭೇಟಿ ನೀಡಿದ್ದೇವೆ. ನಾನು, ಸಿದ್ಧರಾಮಯ್ಯನವರು, ನಾಣಯ್ಯನವರು, ನಾವೆಲ್ಲರೂ ಸಿಂಗಾಪುರಕ್ಕೆ ಹೋಗಿ ಜುರಾಂಗೆ ಪಾರ್ಕ್‌ಗೆ ಭೇಟಿ ಕೊಟ್ಟಿದ್ದೇವೆ. There is no doubt they are doing a good job. ನಾಲ್ಕು ವರ್ಷಗಳ ಹಿಂದೆ ಮುಖ್ಯಮಂತ್ರಿಗಳು, ಬೆಂಗಳೂರನ್ನು ಸಿಂಗಾಪುರ್ ಮಾದರಿಯಲ್ಲಿ ಡೆವೆಲಪ್ ಮಾಡುತ್ತೇವೆ ಎಂದು ಬಾಣ ಬಿಟ್ಟಿದ್ದರಲ್ಲಾ, ಇದು ಅದರ ಒಂದು ಬೈ–ಪ್ರಾಡಕ್ಟೇ ಎನ್ನುವುದು ನನಗೆ ಇನ್ನೂ ಅರ್ಥವಾಗುತ್ತಿಲ್ಲ. ಜುರಾಂಗ್

ಪಾರ್ಕ್ ಡೆವೆಲಪ್ ಮಾಡಿರತಕ್ಕಂಥಾದ್ದನ್ನು ನಾವು ನೋಡಿದ್ದೇವೆ. It is nothing but an industrial estate. ಅಲ್ಲಿ ಎಲ್ಲಾ ಎಕ್ವಿಪ್‌ಮೆಂಟ್ಸ್ ಇದೆ. ನಮ್ಮ ರಾಜ್ಯದಲ್ಲಿರತಕ್ಕಂಥ ಇಂಟರ್‌ನ್ಯಾಷನಲ್ ಕಂಪನಿಗಳು, ಮಲ್ಟಿ ನ್ಯಾಷನಲ್ ಕಂಪನಿಗಳು ಮತ್ತು ಐ.ಟಿ. ಕಂಪನಿಗಳು ಈಗಾಗಲೇ ಡೆವೆಲಪ್ ಆಗಿಹೋಗಿವೆ. ಬೆಂಗಳೂರು ಎಲ್ಲಾ ಕಡೆಯೂ ಡೆವೆಲಪ್ ಆಗಿದೆ, ಎಲ್ಲಾ ಕಡೆಯೂ ರಿಂಗ್-ರೋಡ್ ಬಂದಿದೆ. ಹೀಗಿರುವಾಗ, ಇನ್ನೂ ಒಂದು ರಿಂಗ್ ರೋಡ್ ಮಾಡಬೇಕೆಂದು ಹೊರಟಿದ್ದೀರಿ. ನೀವು ಯಾವ ಜಾಗದಲ್ಲಿ ಮಾಡಬೇಕೆಂದು ಹೊರಟಿದ್ದೀರಿ, ಅಲ್ಲೇ ಇನ್ನೊಂದು ಔಟರ್ ರಿಂಗ್‌ರೋಡ್ ಬರತಕ್ಕಂಥಾದ್ದು ಇದೆ. ಅದರ ಪಕ್ಕದಲ್ಲಿ ಎರಡು ನ್ಯಾಷನಲ್ ಹೈವೇಗಳು ಆನೇಕಲ್ ತಾಲ್ಲೂಕಿನಲ್ಲಿ ಇವೆ. ನೀವು ಯಾವ ಉದ್ದೇಶದಿಂದ ಇದನ್ನು ಮಾಡಲು ಹೊರಟಿದ್ದೀರಿ? ಯಾರನ್ನು ಪ್ಲೀಸ್ ಮಾಡಲು ಹೊರಟಿದ್ದೀರಿ ಎನ್ನುವುದು ಬಹುಶ: ಇನಾಂದರ್‌ರವರಿಗೆ ಖಂಡಿತವಾಗಿ ಗೊತ್ತಿರಲಿಕ್ಕಿಲ್ಲ. ದಯಮಾಡಿ ಇದನ್ನು ಈಗ ವಿತ್‌ಹೋಲ್ಡ್ ಮಾಡಿ. ಇದನ್ನು ಅವಸರದಲ್ಲಿ ಮಾಡತಕ್ಕಂಥ ಅವಶ್ಯಕತೆ ಏನೂ ಇಲ್ಲ. ಇನ್ನೂ ಎರಡು ತಿಂಗಳು ಆದಮೇಲೆ ಇದನ್ನು ಪಾಸ್ ಮಾಡುವುದಕ್ಕೆ ಸದನಸಲ್ಲಿ ಇಡೋಣ. ಅಷ್ಟರಲ್ಲಿ ನೀವು ಯಾವ ಜಾಗದಲ್ಲಿ ಮಾಡಬೇಕೆಂದಿದ್ದೀರಿ, ಯಾರ್‍ಯಾರಿಗೆ ಮಾಡಬೇಕೆಂದಿದ್ದೀರಿ ಎನ್ನುವುದನ್ನೆಲ್ಲಾ ತಿಳಿದುಕೊಂಡರೆ ಒಳ್ಳೆಯದು. ಅಷ್ಟರಲ್ಲಿ ನಮಗೂ ಸ್ವಲ್ಪ ವಿಷಯವನ್ನು ಸಂಗ್ರಹ ಮಾಡಲು ಸಾಧ್ಯವಾಗುತ್ತದೆ. ಈಗ 24 ಗಂಟೆಗಳಲ್ಲಿ ನಾವು ವಿಷಯಗಳನ್ನು ಸಂಗ್ರಹಣೆ ಮಾಡಲು ಆಗಲಿಲ್ಲ. ನಿಜ ಹೇಳಬೇಕೆಂದರೆ ನಾವು ಇದರ ಬಗ್ಗೆ ಇಲ್ಲಿ ಮಾತನಾಡಿದ್ದೇವೆ, ಇದನ್ನು ಅಪೋಸ್ ಮಾಡಿದ್ದೇವೆ ಎಂದ ತಕ್ಷಣವೇ ಕುಳಗಳು ನಮ್ಮ ಬಳಿ ಬರುತ್ತಾರೆ. ಸಾರ್, ನೀವೇಕೆ ಮಾತನಾಡಲು ಹೋದಿರಿ, ನಾವು ಅದು ಮಾಡಲು ಹೋಗಿದ್ದೆವು, ಇದು ಮಾಡಲು ಹೋಗಿದ್ದೆವು, ಮಿಸಿಸಿಪ್ಪಿ ಮಾಡಲು ಹೊರಟಿದ್ದೆವು ಎಂದು ಬೇಕಾದರೂ ಹೇಳುತ್ತಾರೆ. ಮುಖ್ಯಮಂತ್ರಿಗಳು ಮಾತನಾಡುವಾಗ ಕುಳಗಳು ಎಂದು ಹೇಳಿದ್ದರು. ಅದರ ನೂಸರರಷ್ಟು ದೊಡ್ಡ ಕುಳಗಳು ಇವರು. ಸಾರಾಯಿ ಬಾಟಲ್‌ಗಳನ್ನು ಮಾಡಿದವರೆಲ್ಲಾ ಕುಳಗಳಲ್ಲ, ಅವರಲ್ಲಿ ಶಕ್ತಿ ಇಲ್ಲ. ಅವರಿಗಿಂತ ನೂರು ಪಟ್ಟು ಹೆಚ್ಚಿನ ಕುಳಗಳು ಇವರು, multiplied by hundred times.ಪಾಪ, ಅವರು ಕುಡಿಯುವುದಕ್ಕೆ ಕೊಟ್ಟುಕೊಂಡು ಏನೋ ಒಂದಷ್ಟು ಮಾಡಿಕೊಂಡು ಕುಳಿತಿದ್ದರು. ರೇವಣ್ಣನವರೇ, ಇದು ಮಾಗಡಿಯಲ್ಲಿ ಆಗಿದ್ದರೆ ನೀವೇ ಹೇಳುತ್ತಿದ್ದಿರಿ. 138 ಸ್ಕ್ವೇರ್ ಕಿ.ಮಿ. ಜಮೀನನ್ನು ಆನೇಕಲ್ ತಾಲ್ಲೂಕಿನಲ್ಲಿ ಬಿಟ್ಟು ಕೊಡಬೇಕು ಎಂದರೆ, ನಾಳೆ ಜನಗಳು ನಮ್ಮನ್ನು ಕೇಳುತ್ತಾರೆ, ಸಿಂಧ್ಯಾರವರೇ, ನೀವು ಬಾಯಿ ಮುಚ್ಚಿಕೊಂಡು ಕುಳಿತಿದ್ದೀರಲ್ಲಾ, ನೀವೆಷ್ಟು ತೆಗೆದುಕೊಂಡಿರಿ ಎಂದು ಕೇಳುತ್ತಾರೆ. ಹೌದೋ, ಅಲ್ಲವೋ ನೀವೇ ಹೇಳಿ. ಆದ್ದರಿಂದ, ದಯವಿಟ್ಟು ಇದನ್ನು ಯಾವ ಉದ್ದೇಶದಿಂದ ಮಾಡಿದ್ದೀರಿ ಎನ್ನುವುದನ್ನೆಲ್ಲಾ ಎಕ್ಸ್‌ಪ್ಲೈನ್ ಮಾಡಬೇಕು. ಕುಲಕರ್ಣಿಯವರು ಐ.ಟಿ. ಇಲಾಖೆಯ ಕಾರ್ಯದರ್ಶಿಗಳಾಗಿದ್ದರು. He resigned for his IAS job. Now he is also a owner of a company.ಈಗ ಐ.ಎ.ಎಸ್. , ಐ.ಪಿ.ಎಸ್. ಅಧಿಕಾರಿಗಳು ಪಾಲಿಟಿಕ್ಸ್‌ಗೆ ಬರುವುದು ಕಾಮನ್ನಾಗಿ ಹೋಗಿದೆ. ಪೊಲೀಸ್ ಕಮೀಷನರ್ ಆಗಿದ್ದಂಥ ಸಾಂಗ್ಲಿಯಾನಾರವರು ಈಗ ಒಂದು ಪೊಲಿಟಿಕಲ್ ಪಾರ್ಟಿ ಸೇರಿಕೊಂಡು ಬಿಟ್ಟಿದ್ದಾರೆ. ಈಗ ಅವರು ಏನು ಬೇಕಾದರೂ ಮಾತನಾಡಬಹುದು. ರಿಟೈರ್ಡ್ ಡಿ.ಜಿ.ಗಳೂ ಬಹಳ ಜನ ಸೇರಿಕೊಂಡು ಬಿಟ್ಟಿದ್ದಾರೆ. ರಿಟೈರ್ಡ್ ಅಡೀಷನಲ್ ಚೀಫ್ ಸೆಕ್ರೆಟರಿಗಳೂ ಸೇರಿಕೊಂಡಿದ್ದಾರೆ. ಹೀಗಾಗಿ ನನಗೆ ಏನನ್ನಿಸುತ್ತಿದೆ ಎಂದರೆ ಇವತ್ತು ಐ.ಎ.ಎಸ್., ಐ.ಪಿ.ಎಸ್. ಅಧಿಕಾರಿಗಳ ಪಾವಿತ್ರ್ಯತೆ ಕಡಿಮೆಯಾಗುತ್ತಿದೆ. ಇವರೆಲ್ಲಾ ದೊಡ್ಡ ಮನುಷ್ಯರುಗಳು ಎಂದು

ತಿಳಿದುಕೊಂಡು ನಾವು ಮಮತ್ರಿಗಳಾಗಿದ್ದರೂ ಸಹ, ನೀವು ಏಂಜಿಲ್‌ಗಳಪ್ಪಾ, ಸತ್ಯ ಹರಿಶ್ಚಂದ್ರನ ಮೊಮ್ಮಕ್ಕಳು ಎಂದು ನಾವು ಇವರಿಗೆಲ್ಲ ಗೌರವವನ್ನು ಕೊಡುತ್ತಿದ್ದೆವು. ಈ ಸತ್ಯಹರಿಶ್ಚಂದ್ರರ ಬಣ್ಣ ಏನು ಎನ್ನುವುದು ನಮಗೆ ಸರಿಯಾಗಿ ಗೊತ್ತಾಗುತ್ತಿಲ್ಲ. ನಾನು ಮಲೇಶಿಯಾಗೆ ಹೋಗಿದ್ದಾಗ ಅಲ್ಲಿ ನೋಡಿದ್ದನ್ನು, ತಮಗೂ ಅದರ ಅನುಭವವಾಗಲಿ ಎಂದು ಹೇಳುತ್ತಿದ್ದೇನೆ. ಅಲ್ಲಿ most of the ministers are contractors.ಅಲ್ಲಿ ಮಿನಿಸ್ಟರ್‌ಗಳೇ ಕಾಂಟ್ರಾಕ್ಟ್‌ದಾರರು ಅವರು ದೊಡ್ಡದೊಡ್ಡ ಕಂಪನಿಗಳನ್ನು ರನ್ ಮಾಡುತ್ತಾರೆ. ಇಲ್ಲಿ ಆ ಸ್ಥಿತಿ ಇಲ್ಲದಿದ್ದರೂ ಬೇನಾಮಿಯಲ್ಲಿ ನಡೆಯುತ್ತಿದೆ ಅಷ್ಟೇ. ಸೋಮಣ್ಣನವರೇ, ತಾವು ಇದರ ಬಗ್ಗೆ ಸ್ವಲ್ಪ ಗಮನ ಕೊಡಬೇಕು. ನೀವು ಈಗ ಕಾಂಗ್ರೆಸ್ ಪಕ್ಷಕ್ಕೆ ಹೋಗಿರಬಹುದು, ಬೆಂಗಳೂರಿನ ಅಭಿವೃದ್ಧಿ ಬಗ್ಗೆ ಯೋಚನೆ ಮಾಡುವ ನೀವು ದಯವಿಟ್ಟು ಇದರ ಬಗ್ಗೆ ಯೋಚನೆ ಮಾಡಿ, ಮುಂದೆ ಏನಾಗುತ್ತದೆ ಎನ್ನತಕ್ಕಂಥಾದ್ದನ್ನು ಯೋಚನೆ ಮಾಡಿ. ಬೆಂಗಳೂರಿನ ಸುತ್ತಮುತ್ತ ನಾವು ಇಂಥ ಖದೀಮರಿಗೆ ಜಮೀನನ್ನು ಕೊಟ್ಟುಬಿಟ್ಟು ಆಮೇಲೆ ನಾವು ಏನು ಮಾಡುವುದು? ನಾವು ಎಲ್ಲಿಗೆ ಹೋಗಬೇಕು? 40–50 ಎಕರೆ ಜಮೀನು ಐ.ಟಿ.ಯವರಿಗೆ ಕೊಡುವುದೆಂದರೆ ಏನು? ಅದನ್ನು ಹೇಗೆ ಮಾಡಲು ಹೊರಟಿದ್ದೀರಿ ಎನ್ನುವುದನ್ನು ಎಕ್ಸ್‌ಪ್ಲೇನ್ ಮಾಡಬೇಕಾಗುತ್ತದೆ. The way in which you have been asked to, I am repeating this, you are not doing on your own. You have been asked to hurry through this bill. I get some doubts ದಯವಿಟ್ಟು ಇದನ್ನೆಲ್ಲಾ ತಾವು ಎಕ್ಸ್‌ಪ್ಲೈನ್ ಮಾಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

SRI D.B. INAMDAR : I am not hurrying for this bill. The only reason is.....

†ಶ್ರೀ ವಿ. ಸೋಮಣ್ಣ (ಬಿನ್ನಿಪೇಟೆ) : ಬೆಂಗಳೂರು ನಗರದ ಬಗ್ಗೆ ತಮಗಿರುವ ಕಳಕಳಿಯನ್ನು ನಾವು ಒಪ್ಪಿಕೊಳ್ಳೋಣ. ಐ.ಎ.ಎಸ್, ಐ.ಪಿ.ಎಸ್. ಅಧಿಕಾರಿಗಳು ರಾಜಕೀಯಕ್ಕೆ ಬಂದರು ಎಂದು ಹೇಳಿದಿರಿ. ಅದಕ್ಕೆ ತಾವೇ ಹೆಚ್ಚು ಕಾರಣರು. ಏಕೆಂದರೆ, ತಾವು ಗೃಹ ಸಚಿವರಾಗಿದ್ದಾಗ ಅವರನ್ನು ಪಕ್ಕದಲ್ಲೇ ಕೂರಿಸಿಕೊಂಡು, ಪ್ರೀತಿ ಮಾಡಿ ತೋರಿಸಿದಿರಿ, ಅದರಿಂದಾಗಿ ಕೆಲವರಿಗೆ ಆ ಖಾಯಿಲೆ ಅಂಟಿಕೊಂಡಿರಬಹುದು. ಅದು ಇರಲಿ. ಈ ವಿಷಯದ ಬಗ್ಗೆ ನಾನು ನೋಡಿರಲಿಲ್ಲ. ಹಿಂದೆ ಬೆಂಗಳೂರು ನಗರದಲ್ಲಿ ಸತ್ಯಸಾಯಿಬಾಬಾರವರಿಗೆ ಆಸ್ಪತ್ರೆಗಾಗಿ ನಾವು 50 ಎಕರೆ ಜಾಗವನ್ನು ಕೊಟ್ಟೆವು. ಅದನ್ನು ಕೊಟ್ಟಂಥ ಸಂದರ್ಭದಲ್ಲಿ, ಅದರ ವಿರುದ್ಧವಾಗಿ ಅನೇಕ ಕೂಗುಗಳು ಬಂದವು. ಆದರೆ, ಇವತ್ತು ಅಲ್ಲಿ ನಡೆಯುತ್ತಿರತಕ್ಕಂಥ ಕೆಲಸ, ಬಹುಶ: ಇಡೀ ಭಾರತ ದೇಶದಲ್ಲಿ ಎಲ್ಲೂ ಕೂಡ ಆಗದೇ ಇರುವಂಥ ಒಂದು ದೊಡ್ಡ ಕೆಲಸ ಅಲ್ಲಿ ನಡೆಯುತ್ತಿದೆ. ಬೆಂಗಳೂರಿನಲ್ಲಿರತಕ್ಕಂಥ ಬಹುತೇಕ ಐ.ಟಿ. ಕಂಪನಿಗಳಿಗೆ ಹಿಂದೆ ಜೆ.ಹೆಚ್.ಪಟೇಲರು ಮತ್ತು ದೇವೇಗೌಡರ ಸರ್ಕಾರಗಳಿದ್ದಾಗ ಜಮೀನು ಕೊಟ್ಟಿದ್ದವು. ಇವತ್ತು ಅಲ್ಲಿ ಲಕ್ಷಾಂತರ ಜನ ಕೆಲಸ ಮಾಡುತ್ತಿದ್ದಾರೆ. ಆದ್ದರಿಂದ ಯಾವುದೋ ಒಂದು ಪೂರ್ವಾಗ್ರಹವನ್ನಿಟ್ಟುಕೊಂಡು ಬೆಳೆಯುತ್ತಿರತಕ್ಕಂಥ ಬೆಂಗಳೂರು ನಗರಕ್ಕೆ ನಾವು ಸರಿಯಾದ ಇನ್‌ಫ್ರಾಸ್ಟ್ರಕ್ಚರ್ ಕೊಡದೇ ಹೋದರೆ ಸರಿಯಾಗುವುದಿಲ್ಲ. ಬೆಂಗಳೂರು ವಿಶ್ವದಲ್ಲೇ ಬೆಳೆಯುತ್ತಿರುವ ಐದನೇ ನಗರ ಎಂದು ನಾವೇನು ಮಾತನಾಡುತ್ತೇವೆ, ಈ ನಗರದ ಬಗ್ಗೆ ಈ ಮಾತು ಬಂದಿದ್ದರೆ ಮತ್ತು ಹಳೆಯ ಬೆಂಗಳೂರನ್ನು ಹೊರತುಪಸಿ, ಹೊಸ ಬೆಂಗಳೂರಿನಲ್ಲಿ ಆಗತಕ್ಕಂಥ ಬಹುತೇಕ

(†ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

ಬೆಳವಣಿಗೆಗಳಿಗೆ ವಿಶ್ವದ ಮಾರುಕಟ್ಟೆಯಲ್ಲಿ ಏನಾದರೂ ಆಶಾದಾಯಕ ಭಾವನೆ ಬಂದಿದೆ ಎಂದರೆ, ಅದು ಸನ್ಮಾನ್ಯ ಎಸ್.ಎಂ. ಕೃಷ್ಣಾರವರು ಮುಖ್ಯಮಂತ್ರಿಗಳಾದ ಮೇಲೆ ಅದಕ್ಕೆ ಕೊಟ್ಟಿರುವಂಥ ಚಾಲನೆಯೇ ಕಾರಣ ಎನ್ನುವ ಅಂಶವನ್ನು ನಾವು ತಿಳಿದಿಕೊಳ್ಳಬೇಕಾಗುತ್ತದೆ. ಸಿಂಧ್ಯಾರವರು ಹೇಳಿದ ಹಾಗೆ, ಇವತ್ತಲ್ಲ ನಾಳೆ, ಕನಕಪುರವೂ ಸೇರಿದಂತೆ ಆನೇಕಲ್, ಹೊಸಕೋಟೆ, ದೇವನಹಳ್ಳಿಗಳು ಬೆಂಗಳೂರಿನ ಭಾಗವಾಗುತ್ತವೆ. ಹೀಗಾಗಿ ಬೆಂಗಳೂರು ನಗರ ಬೆಳೆಯುವುದನ್ನು ತಪ್ಪಿಸುವುದು ನಾವು ಏನೆಲ್ಲಾ ಮಾಡಿದರೂ ಕಷ್ಟವಾಗುತ್ತದೆ. ಇದನ್ನು ತಪ್ಪಿಸಬೇಕೆಂದರೆ, ಎಲ್ಲೋ ಒಂದು ಕಡೆ ಸೆಟೆಲೈಟ್ ಟೌನ್, ಮತ್ತೊಂದು ಮಾಡಬೇಕಾಗುತ್ತದೆ. ಏನೆಲ್ಲಾ ಮಾಡಿದರೂ ಈ ನಗರದ ಸರ್ವಾಂಗೀಣ ಅಭಿವೃದ್ಧಿ ಯಾಗುತ್ತದೆ. ಸಿಂಗಾಪುರದ ಬಗ್ಗೆ ಸಿಂಧ್ಯಾರವರು ಹೇಳಿದರು. ಅಂಥಾದ್ದೇನೋ ಒಂದನ್ನು ಮಾಡಬೇಕು ಎನ್ನುವ ಕನಸನ್ನಿಟ್ಟುಕೊಂಡು, ಕಾರ್ಯಕ್ರಮವನ್ನು ಹಮ್ಮಿಕೊಂಡಾಗ, ಅದರಲ್ಲಿ ಏನೋ ಇದೆ, ಮತ್ತೊಂದಿದೆ, ಮಗದೊಂದಿದೆ ಎಂದು ಮೊಸರಲ್ಲಿ ಕಲ್ಲನ್ನು ಹುಡುಕತಕ್ಕಂಥ ಸಂಪ್ರದಾಯಕ್ಕೆ ಬದಲಾಗಿ, ಈ ನಗರದ ಉತ್ತಮ ಬೆಳವಣಿಗೆಯ ದೃಷ್ಟಿಯಿಂದ ಮತ್ತು ಕೆಲವು ಗುರುತರವಾದ ಜವಾಬ್ದಾರಿಯನ್ನು ನಿರ್ವಹಣೆ ಮಾಡುವಾಗ ಇಂಥ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಸೂಕ್ತ ಎಂದು ಹೇಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾನು ಮೊಸರಲ್ಲಿ ಕಲ್ಲು ಹುಡುಕುವ ಪ್ರಯತ್ನವನ್ನು ಮಾಡುತ್ತಿಲ್ಲ. ಮಂತ್ರಿಗಳಾಗಿದ್ದಾಗ ಎಲ್ಲರೂ ಐ.ಎ.ಎಸ್., ಐ.ಪಿ.ಎಸ್. ಅಧಿಕಾರಿಗಳನ್ನು ಪಕ್ಕದಲ್ಲೇ ಕೂರಿಸಿಕೊಳ್ಳಬೇಕಾಗುತ್ತದೆ, ಅವರನ್ನು ಕೆಳಗೆ ಕೂರಿಸಲು ಆಗುವುದಿಲ್ಲ. ಅವರು ಸೆಟೆಲೈಲ್ ಟೌನ್ ಎಂದು ಹೇಳಿದರಲ್ಲಾ, ಅದನ್ನು ನೀವು ನಂದಿ ಬೆಟ್ಟದ ಕೆಳಗೆ ಮಾಡಿ, ನಾವೇನೂ ತಕರಾರು ಮಾಡುವುದಿಲ್ಲ. ಜುರಾಂಗ್ ಪಾರ್ಕ್ ಎನ್ನತಕ್ಕಂಥಾದ್ದು ಒಂದು ಸೆಟೆಲೈಟ್ ಟೌನ್. ಇಲ್ಲಿ ಏನಾಗುತ್ತಿದೆ ಎಂದರೆ, ಇಲ್ಲಿ ರಸ್ತೆ ಮಾಡಬೇಕಾಗಿರುವುದು ಬೆಂಗಳೂರಿನಿಂದ ಮೈಸೂರಿಗೆ. ಆದರೆ ನೀವು ರಸ್ತೆ ಮಾಡುತ್ತಿರತಕ್ಕಂಥಾದ್ದು ಎಲ್ಲಿಂದೆಲ್ಲಿಗೆ ಎನ್ನುವುದನ್ನು ನೋಡಬೇಕು. ಬೈ–ಪಾಸ್ ನೆಪದಲ್ಲಿ ಕೆಂಗೇರಿಯನ್ನು ಆನೇಕಲ್‌ಗೆ ಕನೆಕ್ಟ್ ಮಾಡತಕ್ಕಂಥಾದ್ದು, ಕೆಂಗೇರಿಯನ್ನು ತುಮಕೂರಿಗೆ ಕನೆಕ್ಟ್ ಮಾಡತಕ್ಕಂಥಾದ್ದು ಆಗುತ್ತಿದೆ. ಅಲ್ಲಿ ಬರತಕ್ಕಂಥ ಜಮೀನುಗಳನ್ನು ಡೀ–ನೋಟಿಫೈ ಮಾಡುವ ಕೆಲಸವಾಗುತ್ತಿದೆ. ಇಲ್ಲಿ ಈ ವ್ಯವಹಾರ ನಡೆಯುತ್ತಿದೆ ಎಂದು ನಾನು ಹೇಲುತ್ತಿದ್ದೇನೆ. ಕನಕಪುರ, ರಾಮನಗರ, ದೇವನಹಳ್ಳಿ, ಹೊಸಕೋಟೆ ಇವುಗಳೆಲ್ಲವೂ ಇವತ್ತಲ್ಲ ನಾಳೆ ಬೆಂಗಳೂರಾಗಬಹುದು. ಆದರೆ ಇಲ್ಲಿ ರಿಯಲ್ ಎಸ್ಟೇಟ್ ಬಿಸಿನೆಸ್ ನಡೆಯುತ್ತಿದೆ ಎಂದು ನಾನು ಹೇಳುತ್ತಿದ್ದೇನೆ. ಆದ್ದರಿಂದ, ನೀವು ನಾನು ಹೇಳಿರುವ ಪಾಯಿಂಟ್‌ಗಳಿಗೆ ಕ್ಲಾರಿಫೈ ಮಾಡಿ. ಈಗಿರುವಂಥ ಐ.ಟಿ. ಕಂಪನಿಗಳಲ್ಲಿ ಯಾರಿಗೆ ಜಮೀನಿಲ್ಲ ಎಂಬುದನ್ನು ಹೇಳಿ.ಜೆ.ಹೆಚ್.ಪಾಟೇಲರು, ನಾನು ಮತ್ತು ದೇಶಪಾಂಡೆಯವರು ಈ ಕಡೆ ಇದ್ದಾಗ, ಸ್ಪೆಷಲ್ ಪ್ಲೇನ್‌ನಲ್ಲಿ ಹೋಗಿ ಸತ್ಯಸಾಯಿಬಾಬಾರವರಿಗೆ 50 ಎಕರೆ ಜಮೀನು ಕೊಟ್ಟೆವು. ಆಗ ಅವರು ಹೇಳಿದರು, 'ಪಟೇಲರೇ, ನೀವು ಬದುಕಿರುವುದರೊಳಗೆ ಇಲ್ಲಿ ಆಸ್ಪತ್ರೆಯನ್ನು ಕಟ್ಟುತ್ತೇವೆ' ಎಂದು ಹೇಳಿದರು. ಅದರಂತೆ, ಅವರು ಅಲ್ಲಿ 12 ತಿಂಗಳುಗಳೊಳಗೆ ಆಸ್ಪತ್ರೆಯನ್ನು ಕಟ್ಟಿದ್ದಾರೆ. ಇಡೀ ಪ್ರಪಂಚದ ಜನಗಳಿಗೆ ಅದು ಮಾದರಿಯಾಗಿದೆ. ಅಂಥ ಬಾಬಾಗಳು ಇಲ್ಲಿ ಯಾರು ಬಂದಿದ್ದಾರೆ ಎನ್ನುವುದು ನಮಗೆ ಗೊತ್ತಾಗಬೇಕು. ನಿಮಗೆ ಯಾರು ಅರ್ಜಿ ಕೊಟ್ಟಿದ್ದಾರೆ, ಎಷ್ಟು ಬಾಬಾಗಳು ಬಂದಿದ್ದಾರೆ ಎನ್ನುವುದನ್ನು ನಮಗೆ ಸ್ವಲ್ಪ ತಿಳಿಸಿ ಎನ್ನುವುದನ್ನು ನಾನು ಕೇಳುತ್ತಿದ್ದೇನೆ.

†ಶ್ರೀ ಬಿ.ಸೋಮಶೇಖರ್ (ಮಳವಳ್ಳಿ) : ಈ ವಿಚಾರದಲ್ಲಿ ನಾನು ಈಗಾಗಲೇ ಆಯವ್ಯಯದ

(†ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

ಮೇಲೆ ಚರ್ಚೆ ನಡೆಯುವಾಗ ಇದನ್ನು ಪ್ರಸ್ತಾವ ಮಾಡಿದ್ದೆ. ನಾನು ಅಂದುಕೊಂಡಿದ್ದೆ ಏನು ಸಿಂಗಾಪುರ ಕಂಪನಿ Jurang Consultants, ಎಂದು ಹೇಳಿ BATF ಎಂದು ಏನು ಮಾಡಿದ್ದೀರಿ, they have appointed Jurang Consultant for preparing the project for the IT sector ಅದರಲ್ಲಿ ಸಾವಿರಾರು ಎಕರೆ ಜಮೀನನ್ನು ರೈತರಿಂದ ಪಡೆದುಕೊಂಡು ಈಗಾಗಲೇ KIADB ಯವರು land acquisition ಮಾಡಿ ತೆಗೆದುಕೊಂಡು de-notify ಮಾಡಿ in the name of these Software companies these lands have been sold to real estate companies.2–3 hands ಗಳು exchange ಆಗಿದೆ. ಒಂದು ಎಕರೆಗೆ ರೈತರಿಗೆ 9.50 ಲಕ್ಷ ರೂಪಾಯಿಗಳನ್ನು ಕೊಟ್ಟಿರುವಂಥ್ದು. ಅದರ Market value 250 ರಿಂದ 300 ರೂಪಾಯಿ ಒಂದು square feet ಗೆ ಬೀಳುತ್ತದೆ. ಆದರೆ ರೈತರಿಗೆ ಸಿಕ್ಕಿರತಕ್ಕಂಥದ್ದು ಒಂಭತ್ತೂವರೆ ಲಕ್ಷ ರೂಪಾಯಿಗಳೂ! ಈಗಾಗಲೇ ಬೆಂಗಳೂರಿನ ಸುತ್ತಮುತ್ತಲು ಇರುವ ರೈತರು ವಿಧಾನಸೌಧದ ಎದುರುಗಡೆ ಪ್ರತಿಭಟನೆ ಮಾಡಿ, ಅದರಲ್ಲಿ ನಾನು ಈಗಾಗಲೇ ಪ್ರಸ್ತಾಪ ಮಾಡಿದೆ, ಯಾವನೋ ಒಬ್ಬ un-employed graduate ಒಂದೂವರೆ ಎಕರೆ ಎರಡು ಎಕರೆ ತನ್ನ ಸ್ವಂತಕ್ಕೆ ಇಟ್ಟುಕೊಳ್ಳುತ್ತೇನೆಂದು ಹೇಳಿದಾಗ, ಅಕ್ವೈಯರ್ ಮಾಡುವುದಕ್ಕೆ ಅವನು ಬಿಟ್ಟುಕೊಡದೇ ಇದ್ದಾಗ ಅವನ ಮೇಲೆ Police Department ನಿಂದ ದಬ್ಬಾಳಿಕೆ ಮಾಡಿಸಿ ಅವನ ಮೇಲೆ criminal case ಹಾಕಿಸಿ ಅವನನ್ನು arrest ಮಾಡಿಸಿ ತಪ್ಪಿಸಿಕೊಂಡು ಓಡಾಡುತ್ತಿದ್ದಾರೆ. ಅಂದರೆ ಬಲವಂತವಾಗಿ ನಿನ್ನ ಲ್ಯಾಂಡ್ ಅನ್ನು handover ಮಾಡು ಎಂದು ಮಾಡುತ್ತಿದ್ದಾರೆ. ನನಗೇನನ್ನಿಸುತ್ತದೆ ಎಂದರೆ KIADB ಇಂದ ಅಕ್ವೆಯರ್ ಮಾಡಿದಂಥ ಲ್ಯಾಂಡ್‌ಗಳಿಗೆ, BDA ಇಂದ acquire ಮಾಡಿದಂಥ ಲ್ಯಾಂಡ್‌ಗಳಿಗೆ de-notify ಮಾಡಿ ಇವತ್ತು ದಂದೆ ನಡೆಯುತ್ತಿರುವಾಗ ಇದಕ್ಕೆ ಏನು ಅಥಾರಿಟಿಯನ್ನು ಕ್ರಿಯೇಟ್ ಮಾಡುತ್ತಿದ್ದೀರಿ ಇದನ್ನೆಲ್ಲಾ legalize ಮಾಡುವುದಕ್ಕೆ ಆ ಎಲ್ಲಾ ಪ್ರಕ್ರಿಯೆಗಳನ್ನು ಇದರೊಳಗಡೆ ಸೇರಿಸತಕ್ಕಂಥ ಒಂದು ಪ್ರಯತ್ನ ಎಂದು ನಾನು ತಿಳಿದುಕೊಂಡಿದ್ದೇನೆ. ಈಗಾಗಲೇ this is a duplication of authorities. ಒಂದು BDA Authority ಇದೆ. ಇನ್ನೊಂದು KIADB Authority ಇದೆ. ಇದರ ಜೊತೆಗೆ ಇದೊಂದು Authority exclusively for dealing with multinational companies and real estate agencies. ಇದರ ಮೇಲೆ ನಾನು ಇವತ್ತು charge ಮಾಡುತ್ತಿದ್ದೇನೆ, ಇದನ್ನು ಸರಿಯಾಗಿ detail ಆಗಿ ಯೋಚನೆ ಮಾಡುವುದಾದರೆ ದೊಡ್ಡ ದೊಡ್ಡ ವ್ಯಕ್ತಿಗಳ ಸಂಬಂಧಿಕರು ಇದರ ಕಂಪನಿಗಳಿಗೆ ಸದಸ್ಯರಾಗಿದ್ದಾರೆ, partners ಆಗಿದ್ದಾರೆ. ಅವರಿಗೆ ನೂರಾರು ಎಕರೆ ಜಮೀನು partners ಆಗಿದ್ದಾರೆ. ಇದನ್ನು ಬೇಕಾದರೆ enquiry ಗೆ ಆರ್ಡರ್ ಮಾಡಿ, ಆಗ ನಾನು ಹೇಳುವುದು ನಿಜ ಎನ್ನುವುದು ನಿಮಗೆ ಗೊತ್ತಾಗುತ್ತದೆ. CBI enquiry ಮಾಡಿಸಿ. 10 ಸಾವಿರ ಎಕರೆ ಜಮೀನು ಇದೆಲ್ಲಾ ಬೆಲೆ ಬಾಳತಕ್ಕಂಥ ಜಮೀನು ಆಗಿದೆ. ತರಕಾರಿ ಬೆಳೆಯುತ್ತಿದ್ದರು, ಸೊಪ್ಪು ಬೆಳೆಯುತ್ತಿದ್ದರು, ಬಡವರು ಹಣ್ಣು ಬೆಳೆಯುತ್ತಿದ್ದರು, ಆ ಬಡವರು ಜಮೀನುಗಳು ಒಂಭತ್ತೂವರೆ ಹತ್ತು ಲಕ್ಷ ರೂಪಾಯಿಗಳಿಗೆ ನೀವು ಕೊಂಡುಕೊಂಡು, ನಾನು ಲೆಕ್ಕ ಹಾಕಿದೆ, ಒಂದು ಎಕರೆಗೆ 16 ಲಕ್ಷ 40 ಸಾವಿರ ರೂಪಾಯಿಗಳ ಕನ್ಸಿಷನ್ ಅನ್ನು ಒಂದು ಎಕರೆಗೆ ಸರ್ಕಾರದಿಂದ ಕೊಡುತ್ತಿದ್ದೇವೆ. ಆದರೆ ರೈತರಿಗೆ ಒಂದು ಎಕರೆಗೆ ಸಿಗುತ್ತಿರತಕ್ಕಂಥದ್ದು ಕೇವಲ ಒಂಭತ್ತೂವರೆ ಲಕ್ಷ ರೂಪಾಯಿಗಳು. ಅಷ್ಟಲ್ಲದೆ ಅದು ಎರಡು ಮೂರು ಕೈಗಳ ಬದಲಾವಣೆ ಆದಮೇಲೆ ಕೊನೆಗೆ ಒಂದು ಎಕರೆಗೆ ಎರಡೂವರೆಕೋಟಿ ರೂಪಾಯಿ ಬೀಳುತ್ತದೆ. ಅದು ಯಾರಿಗೆ ಹೋಗುತ್ತದೆ

ಎಂದರೆ ರಿಯಲ್ ಎಸ್ಟೇಟ್ ಕಂಪನಿಗಳನ್ನು ಮಾಡಿಕೊಂಡು ಪಾರ್ಟ್‌ನರ್ಸ್ ಆಗಿದ್ದಾರಲ್ಲಾ ಅವರು ಆ ದುಡ್ಡನ್ನು ತಿನ್ನುತ್ತಾರೆ. ಇವತ್ತು ನೀವು ಎಷ್ಟು ಸಾಫ್ಟ್‌ವೇರ್ ಕಂಪನಿಗಳಿಗೆ ಜಮೀನುಗಳನ್ನು ಕೊಟ್ಟಿದ್ದೀರಿ, ಇವತ್ತು ನಾವು ನೀವು ಬೇಕಾದರೆ ಹೋಗಿ ನೋಡಿಕೊಂಡು ಬರೋಣ, ಯಾವ ಸಾಫ್ಟ್‌ವೇರ್ ಕಂಪನಿಯೂ ಬಂದಿಲ್ಲ. ನೀವು ಏನು 20 ಎಕರೆ 30 ಎಕರೆ 60 ಎಕರೆ ಸಾಫ್ಟ್‌ವೇರ್ ಕಂಪನಿಗಳಿಗೆ ಒಂದು ಕಂಡಿಷನ್ಸ್ ಮೇಲೆ ಅದು ಇಷ್ಟು ಎಂಪ್ಲಾಯ್‌ಮೆಂಟ್ ನೀವು ಸೃಷ್ಟಿಮಾಡಬೇಕು, ಸರ್ಕಾರಕ್ಕೆ ಇಷ್ಟು ಆದಾಯ ಬರಬೇಕು, ಇಂಥ ಒಂದು ಕೈಗಾರಿಕೆ ಬರಬೇಕೆಂದು ಹೇಳಿದ್ದೀರಲ್ಲಾ, ಒಂದೂ ಕೈಗಾರಿಕೆ ಇಲ್ಲ, ಎಂಪ್ಲಾಯ್‌ಮೆಂಟ್ ಇಲ್ಲ, ಒಂದು ಉದ್ಯೋಗ ಇಲ್ಲ, ಅದರ ಬದಲಾಗಿ ಅಲ್ಲೆಲ್ಲಾ ದೊಡ್ಡ ದೊಡ್ಡ ರಿಯಲ್ ಎಸ್ಟೇಟ್‌ಗಳಲ್ಲೇ ಸೈಟುಗಳನ್ನು ಮಾರಿ ಮಾರಿ ಇವತ್ತು ಅದನ್ನು ದಂಧೆಗೆ ಮಾಡುತ್ತಿದ್ದಾರೆ. ಅದನ್ನು ಇವತ್ತು ಲೀಗಲೈಸ್ ಮಾಡುವುದಕ್ಕೆ ಈ ಬಿಲ್ಲನ್ನು ತಂದಿದ್ದೀರಿ. ಇವತ್ತು KIADB ಯಲ್ಲಿ ಮಾಡಿರತಕ್ಕಂಥ ಕಂದೆಗೆ ಕೋರ್ಟ್‌ಗೆ ಹೋಗಿದ್ದಾರೆ. BDA ನಲ್ಲಿ ಆಗಿರತಕ್ಕಂಥ de-notification ಬಗ್ಗೆ ಕೋರ್ಟ್‌ಗೆ ಹೋಗಿದ್ದು ಇವತ್ತು ಅದಕ್ಕೆ ಕೋರ್ಟ್‌ನವರು ನೋಟೀಸ್ ಕೊಟ್ಟಿದ್ದಾರೆ. ಆ land acquisition provisions ಅನ್ನು quash ಮಾಡಿದ್ದಾರೆ. ಇವತ್ತು ನೀವು ಇಲ್ಲಿ ಏನು ಮಾಡಿದ್ದೀರೆಂದರೆ ನಮ್ಮ ಒಂದು ಅನುಮಾನಕ್ಕೆ ಪುಷ್ಟಿ ಕೊಡತಕ್ಕಂಥ provisions ಅನ್ನು ತಂದಿದ್ದೀರಿ Protection of action taken under this Act: ``Save as otherwise provided in this Act, no suit or other legal proceedings shall lie against the Authority for any damage caused or likely to be caused by anything in good faith to be done or purported to be done under this Act." ಬಹುಶ: President of India ಕ್ಕೆ Governor ಗೆ ಯಾವ criminal action ಅನ್ನೂ under the Constitution ನಾವು ಮಾಡುವುದಕ್ಕೆ ಬರುವುದಿಲ್ಲ. ಈ ಒಂದು Authorityಗೆ ಆ provisions ಅನ್ನು ನೀವು provide ಮಾಡುತ್ತಿದ್ದೀರಿ. ಇದರ ಉದ್ದೇಶ ಏನೆಂದರೆ ಇದರ ಹಿಂದೆ ಏನೋ ಒಂದು ಕಾಣದ ಕೈಗಳ ಕೈವಾಡ ನಡೆಯುತ್ತಿದೆ. ಬಹುಶ: 2–3 ವರ್ಷಗಳಿಂದ ಮಾಡಿರತಕ್ಕಂಥದ್ದನ್ನು legalize ಮಾಡುವುದಕ್ಕೆ ಕೊನೆಯ ದಿವಸವಾದ ಇವತ್ತು ತಂದಿರತಕ್ಕಂಥ ಬಿಲ್ ಇದಾಗಿದೆ. ಅದರಿಂದ ಬಹಳ ದೊಡ್ಡ ಅನಾಹುತ ಇದೆ. ಇದನ್ನು ಮಾಡುವುದಕ್ಕೆ ಅವಕಾಶ ಕೊಟ್ಟು ನೀವು ಕೆಟ್ಟ ಹೆಸರು ತೆಗೆದುಕೊಳ್ಳಬೇಡಿ. ಇದನ್ನು ವಾಪಸ್ಸು ತೆಗೆದುಕೊಳ್ಳತಕ್ಕಂಥದ್ದು ಬಹಳ ಮುಖ್ಯ. ಏಕೆಂದರೆ ಇನ್ನೂ ಅನೇಕ provisions ಅನ್ನು ನಾನು ಓದಿದಾಗ ಅನುಮಾನಕ್ಕೆ ಆಸ್ಪದ ಮತ್ತು ಎಲ್ಲದಕ್ಕೂ similarity ಇದೆ. BDA and KIADB ಇದಕ್ಕೆ ಆ ಇರುವಾಗ, ಆ ಮೇಲೆ Town Planning Act ಎಂದೂ ಸಹ ಇದೆ. ಇದನ್ನು ಇರತಕ್ಕಂಥ ಸಂಸ್ಥೆಗಳ ಮುಖಾಂತರವೇ ಮಾಡಬಹುದಾಗಿತ್ತು. ಆದರೆ ಇದನ್ನು ಮಾಡಿರತಕ್ಕಂಥದ್ದು ಮತ್ತು ಕೆಲವು special provisions ಅನ್ನು Section 29,30 ಇದನ್ನೆಲ್ಲವನ್ನೂ ಮಾಡಿರತಕ್ಕಂಥದ್ದನ್ನು ನೋಡಿದರೆ ವಿಶೇಷವಾದಂಥ ಸವಲತ್ತುಗಳನ್ನು ಕೊಟ್ಟು ವಿಶೇಷವಾದಂಥ protection ಅನ್ನು ಕೊಟ್ಟು ಈ ಒಂದು Real Estate ದಂದೆ ಮಾಡುವುದಕ್ಕೆ ಮಾಡಿರತಕ್ಕಂಥ ಒಂದು ಕೆಲಸ ಎಂದ ನಾನು ತಿಳಿದುಕೊಂಡಿದ್ದೇನೆ. ಅದರಲ್ಲೂ ಇಷ್ಟೊಂದು ತರಾತುರಿಯಲ್ಲಿ ಮಾಡತಕ್ಕಂಥ ಅವಶ್ಯಕತೆ ಇಲ್ಲ. ಕೆಲವು ಕನ್ಸಿಷನ್ಸ್ ಅನ್ನು ಕೇಳಿದಾಗ ಇನ್ನು 2 ತಿಂಗಳಲ್ಲಿ ಚುನಾವಣೆ ಆಗುತ್ತದೆ, ಮುಂದೆ ನಾವೇ ಬರುತ್ತೇವೆ, ನಾವು ಮಾಡಿಕೊಡುತ್ತೇವೆ ಎನ್ನತಕ್ಕಂಥ ಮಾತನ್ನು ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು

ಹೇಳಿದ್ದಾರೆ. ಅದೇ ರೀತಿ ಇದನ್ನೂ ಕೂಡ ಮುಂದೆ ಸರ್ಕಾರ ನಿಮ್ಮದೇ ಬಂದರೆ ಇದನ್ನು ಮುಂದಿನ ಅಧಿವೇಶನದಲ್ಲಿ ಇಟ್ಟು ಪೂರ್ಣವಾಗಿ ಚರ್ಚೆ ನಡೆದು ಅದನ್ನು ಮಾಡಿ ಚಿಂತೆಯಿಲ್ಲ. ಆದರೆ ಇವತ್ತು ತರಾತುರಿಯಲ್ಲಿ ಮಾಡತಕ್ಕಂಥದ್ದರ ಅವಶ್ಯಕತೆಯಿಲ್ಲ. ಇದರಲ್ಲಿ ಬಹಳ ದೊಡ್ಡ ದಂದೆ ನಡೆಯುತ್ತಿದೆ. ಸಾವಿರಾರು ಕೋಟಿ ರೂಪಾಯಿಗಳ ಒಂದು ಅವ್ಯವಹಾರ ನಡೆದಿರುತ್ತದೆ ಎಂದು ನನಗನ್ನಿಸುತ್ತಿದೆ. ಅದರಲ್ಲಿ ಯಾರ್‍ಯಾರ ಕಾಣದ ಕೈಗಳು ಇವೆಯೋ ಏನೇನು ಇದೆಯೋ ಒಂದೂ ಅರ್ಥವಾಗುವುದಿಲ್ಲ. ನಾನು ಮೊದಲೇ ಹೇಳಿದ ಹಾಗೆ ಈ ನಾಲ್ಕು ವರ್ಷದಲ್ಲಿ ಮಾಡಿರತಕ್ಕಂಥ de-notificationನ ಪ್ರಕರಣಗಳು 50 ವರ್ಷಗಳಲ್ಲಿ ನಡೆದಿಲ್ಲ. This is a Government of ``de-notifications". This Chief Minister has exceeded all the Chief Ministers for the last 50 years in denotification of lands. ಆ de-notifications ಮಾಡಿಸತಕ್ಕಂಥದ್ದರಲ್ಲಿ ಅದು ಎಷ್ಟೆಷ್ಟು ಕೋಟಿ ರೂ ಕೈಬದಲಾವಣೆ ಆಗಿದೆಯೋ, ಕೈವಾಡಗಳು ನಡೆದಿದೆಯೋ ಅದಂತೂ ಗೊತ್ತಿಲ್ಲ. ಅದಕ್ಕೋಸ್ಕರ ಪೂರಕವಾಗಿ ಮಾಡುತ್ತಿರತಕ್ಕಂಥ ಸಂಸ್ಥೆ ಇದು ಎಂದು ನಾನು ಹೇಳುತ್ತಿದ್ದೇನೆ. ಆದ್ದರಿಂದ ದಯವಿಟ್ಟು ಇದನ್ನು ನಿಲ್ಲಿಸಿ. ಆತುರ ಏನೂ ಪಡಬೇಕಾಗಿಲ್ಲ. ಇನ್ನು 2-3 ತಿಂಗಳಲ್ಲಿ ಚುನಾವಣೆಯಾಗಿ ಹೊಸ ಸರ್ಕಾರ ಬರುತ್ತದೆ. ನಾವೇ ಅಧಿಕಾರಕ್ಕೆ ಬರುತ್ತೇವೆಂದು ಮುಖ್ಯಮಂತ್ರಿಗಳು ಹೇಳಿದ್ದಾರೆ, ನೀವೇ ಬಂದು ಮಾಡಿ ಚಿಂತೆಯಿಲ್ಲ. ಅಥವಾ ಬೇರೆಯವರು ಅಧಿಕಾರಕ್ಕೆ ಬಂದರೂ ಸಹ ಮಾಡೋಣ. ಆದ್ದರಿಂದ ಈ ಬಿಲ್ ಅನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

(ಈ ಹಂತದಲ್ಲಿ ಸಭಾಧ್ಯಕ್ಷರ ಪೀಠವನ್ನು ಶ್ರೀ ಎ.ಎಸ್. ಗುರುಸ್ವಾಮಿಯವರು ಅಲಂಕರಿಸಿದರು)

†**ಶ್ರೀ ಸಿ. ಚೆನ್ನಿಗಪ್ಪ (ಕೊರಟಗೆರೆ)** : ಮಾನ್ಯ ಛೇರ್ಮನ್‌ರವರೇ, ಈ ಬಿಲ್ ಅನ್ನು ತರಾತುರಿಯಲ್ಲಿ ತಂದು ಇದಕ್ಕೆ ಅನುಮೋದನೆ ಪಡೆದುಕೊಂಡು ಮಾಡತಕ್ಕಂಥ ಪಬ್ಲಿಕ್ ಚೀಟಿಂಗ್ ಎಂದು ನಾವು ಏನು ಕರೆಯುತ್ತೇವೆ ಇದನ್ನು ನೋಡಿದಾಗ ಅದಕ್ಕೆ ಸಮ. ಪಾಪ ಬಡವ ಎರಡು ಎಕರೆ ಜಮೀನು ಅನ್ನು ಅವನ ತಾತನ ಕಾಲದಿಂದ ಉಳುಮೆ ಮಾಡಿಕೊಂಡು ಬಂದು, ಖಾತೆ ಕಂದಾಯ ಮಾಡಿಕೊಂಡು ಮ್ಯುಟೇಷನ್ ಮಾಡಿಕೊಂಡು ಇಟ್ಟುಕೊಂಡಿರುತ್ತಾನೆ. ಬೆಂಗಳೂರಿನಲ್ಲಿ ಏನೋ ದೊಡ್ಡ ಸಂಸ್ಥೆ ಮಾಡುತ್ತೇವೆಂದು ಹೇಳಿಬಿಟ್ಟು ಅದನ್ನು ಬಹು ದೊಡ್ಡದಾಗಿ ಪೇಪರ್‌ನಲ್ಲಿ ಹಾಕಿಬಿಟ್ಟು ಅದಕ್ಕೆ ಬಿಲ್ ಅನ್ನು ತಂದುಬಿಟ್ಟು ಆ ಜಮೀನು ಅನ್ನು ಎಲ್ಲಾ ವಶಪಡಿಸಿಕೊಳ್ಳುವುದು ಸರಿಯಲ್ಲ. ಈ ಭೂಮಿಯ ಕೈ ಬದಲಾವಣೆ ಈಗಾಗಲೇ ಒಂದು, ಎರಡು, ಮೂರು, ನಾಲ್ಕು ಐದು ಕೈ ಆಗಿಬಿಟ್ಟಿದೆ. ಇವತ್ತು KIADB ಆಗಬಹುದು, BDA ಆಗಬಹುದು, ಯಾವುದೇ ಒಂದು ಸಂಸ್ಥೆ ಆಗಬಹುದು, ರೈತರ ಪ್ರಾಪರ್ಟಿಯನ್ನು acquisition ಮಾಡಿಕೊಂಡು, ಅದೂ ಕೂಡ ಅವರು ಕಡುಬಡವರು, ಆ ಜಮೀನಿನ ಮೇಲೆಯೇ ಜೀವನ ಮಾಡಿಕೊಂಡು ಮಕ್ಕಳನ್ನು ಸಾಕಿಕೊಂಡು ಆ ಭೂಮಿಯಿಂದ ಬರತಕ್ಕಂಥ ಆದಾಯದಿಂದ ಜೀವನ ಮಾಡತಕ್ಕಂಥ ರೈತರ ಭೂಮಿಯನ್ನು ವಶಪಡಿಸಿಕೊಂಡು ಕಡಿಮೆ ಎಂದರೆ 6 ರಿಂದ 9 ಲಕ್ಷ ರೂಪಾಯಿಗಳನ್ನು ಕೊಟ್ಟು ಅದನ್ನು 20 ಲಕ್ಷ 30 ಲಕ್ಷ 40 ಲಕ್ಷ ಹೀಗೆ ಕೈ ಬದಲಾಯಿಸಿಕೊಂಡು ಈ ರೈತರಿಗೆ ವಂಚನೆ ಮಾಡುವಂಥ ಬಿಲ್ ಇದಾಗಿದೆ. ಈ ಬಿಲ್‌ನ್ನು ತರಾತುರಿಯಲ್ಲಿ ಇವತ್ತು ತಂದು ಅದನ್ನು ಸದನದ ಮೂಲಕ ಪಾಸ್ ಮಾಡಿಸಿಕೊಂಡು ಆ ಬಡವರಿಗೆ ಅನ್ಯಾಯ ಮಾಡುವುದು ಬೇಡ. ಇವತ್ತು ಏನು ಈ ಬಿಲ್ ಅನ್ನು ಇಂಟ್ರಡ್ಯೂಸ್ ಮಾಡಿದ್ದಾರೆ ಅದನ್ನು ವಾಪಸ್ಸು ತೆಗೆದುಕೊಳ್ಳಬೇಕು. ಅದರ ಮೇಲೆ ಸುದೀರ್ಘವಾಗಿ

(†ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

ಚರ್ಚೆ ಮಾಡುವುದಕ್ಕೆ ಕಾಲಾವಕಾಶ ಬೇಕು. ನಾವು ರೈತರ ಸರ್ಕಾರ, ನಾವು ಬಡವರ ಸರ್ಕಾರ ರೈತರಿಗೆ ಅನುಕೂಲ ಮಾಡಿಕೊಡುತ್ತೇವೆಂದು ಆಗಲೇ ಮಾನ್ಯ ಮುಖ್ಯಮಂತ್ರಿಗಳು ಏನು ಹೇಳಿದ್ದಾರೆ ಅದೇ ರೀತಿ ಈ ಬಿಲ್ ಅನ್ನೂ ಸಹ ವಾಪಸ್ಸು ತೆಗೆದುಕೊಳ್ಳುವುದು ಬಹಳ ಉತ್ತಮ ಎಂದು ಹೇಳಿ ತಮ್ಮ ಮುಖಾಂತರ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ.

†ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) : ಮಾನ್ಯ ಛೇರ್ಮನ್‌ರವರೆ, ಶ್ರೀ ಸುರೇಶ್ ಕುಮಾರ್‌ರವರು, ಶ್ರೀ ಸಿಂಧ್ಯಾರವರು, ಶ್ರೀ ಸೋಮಶೇಖರ್‌ರವರು ಇದರ ಬಗ್ಗೆ ಅನೇಕ ವಿಷಯಗಳ ಮೇಲೆ ಬೆಳಕನ್ನು ಚೆಲ್ಲಿದ್ದಾರೆ. ಮಲೇಶಿಯಾದಲ್ಲಿ ಮಂತ್ರಿಗಳೇ ಎಲ್ಲಾ ಕಂಟ್ರಾಕ್ಟ್‌ನ್ನು ನಡೆಸುವುದೆಂದು ಮಾನ್ಯ ಸಿಂಧ್ಯಾರವರು ಹೇಳಿದರು. ಅಲ್ಲಿ ಅರ್ಧ ದೇಶ ಮಾಜಿ ಪ್ರಧಾನ ಮಂತ್ರಿಗಳಾಗಿದ್ದ ಮೊಹತ್ತೀರ್ ಮಹಮ್ಮದ್ ಅವರದ್ದೇ ಇತ್ತು. ಪೋರ್ಟ್ ಅವರದೇ, ಟ್ರಾನ್ಸ್‌ಪೋರ್ಟ್ ಕಂಪನಿ ಅವರದೇ, ಎಲ್ಲಾ ಅವರದ್ದೇ. ಅದೇ ಪರಿಸ್ಥಿತಿ ಇಲ್ಲಿಯೂ ಬರುತ್ತದೆಯೋ ಹೇಗೆ ಎನ್ನುವ ಆಲೋಚನೆಯನ್ನು ಮಾಡುತ್ತಿದ್ದೇವೆ. ಇವತ್ತು ಈ ಒಂದು ಬಿಲ್ ಅನ್ನು ತಂದಿದ್ದಾರೆ. ನಿನ್ನೆಯೂ ಬಂದು ನಿನ್ನೆಯೇ ಈ ಬಿಲ್ ಅನ್ನು ಪಾಸ್ ಮಾಡಿಕೊಡಿ ಇದು ಅರ್ಜೆಂಟ್ ಇದೆ ಎಂದು ಮಾನ್ಯ ಇನಾಂದಾರ್‌ರವರು ಹೇಳಿದರು. ನಾವು ಒಂದು ದಿವಸದ ಸಮಯವಕಾಶವನ್ನು ಕೇಳಿದೆವು. ಇದನ್ನು ಓದುವಾಗ, ಒಂದು ಹೈ ಪವರ್ ಕಮಿಟಿ ಎಂದು ಇವತ್ತು ಶ್ರೀ ದೇಶಪಾಂಡೆಯವರು ಒಂದು ಹೊಸ ಪದ್ಧತಿಯನ್ನು ತಂದಿದ್ದಾರೆ. ಇಲ್ಲಿ Section 5 Constitution of Authority ಆ ಮೇಲೆ ಅಲ್ಲಿ ಇನ್ನೊಂದು ಇದೆ Section 9 High Level Committee,ಅಂದರೆ ಆ ಅಥಾರಿಟಿ ಏನಿದೆ ಅದರ ಕಂಟ್ರೋಲ್ ಅನ್ನು ಈಗ ಹೈ ಲೆವೆಲ್ ಕಮಿಟಿಯವರು ಇಟ್ಟುಕೊಳ್ಳವೇಕು. ಏನು ಕಮಿಟಿಯನ್ನು ಮಾಡುತ್ತೀರಿ ಅವರ ಜುಟ್ಟು ನಮ್ಮ ಕೈಯಲ್ಲಿ ಇರಬೇಕೆನ್ನುವುದನ್ನು ಈ ಒಂದು ಮಂತ್ರಿಗಳ ಹೈ ಲೆವಲ್ ಕಮಿಟಿ ಮುಖಾಂತರ ಮಾಡಿಕೊಳ್ಳಲಿಕ್ಕೆ ವ್ಯವಸ್ಥೆ ಮಾಡಿದ್ದೀರಿ. ಹೈ ಲೆವೆಲ್ ಕಮಿಟಿಯ ಅಗತ್ಯತೆ ಏನಿದೆ? ಅದರ ಅಗತ್ಯವಿಲ್ಲವೆಂದು ಕಾಣುತ್ತದೆ. ಈ functions of the authority ಯಲ್ಲಿ ಎಲ್ಲದನ್ನೂ ಒಂದೇ ಕಡೆಯಲ್ಲಿ ತರಬೇಕೆನ್ನುವಂಥ ವ್ಯವಸ್ಥೆಯನ್ನು ಆ ಒಂದು acquisition ಅನ್ನು ಮಾಡಿ ತಂದ್ದೀರಿ. ಈ ಸಿಟಿಯೊಳಗಡೆ ಎಲ್ಲಾ ಮನೆಗಳನ್ನು Residentialದಲ್ಲಿ ಏನೇನು haphazard development ಆಗಿದೆ ಅದನ್ನು ಎಲ್ಲವನ್ನೂ ಒಂದೇ ಕಡೆಗೆ ತರುತ್ತಿದ್ದೀರಾ ಅಥವಾ ಹೊಸದನ್ನು ತರುವುದಕ್ಕೆ ಆ ಜಾಗಕ್ಕೆ ಕೊಡುತ್ತಿದ್ದೀರಾ ಎನ್ನುವ ಬಗ್ಗೆ ಏನೂ ಹೇಳಲಿಲ್ಲ. ಒಂದೇ ಒಂದು ಟೌನಷಿಫ್ ಮಾಡುವುದಾದರೆ, ಎಲ್ಲಾ ಐ.ಟಿ. ಇಂಡಸ್ಟ್ರೀಸ್ ಅನ್ನು ಅಲ್ಲಿಗೆ ಷಿಫ್ಟ್ ಮಾಡುತ್ತೀರಾ ಎನ್ನುವ ಬಗ್ಗೆ ಮಾಹಿತಿಯನ್ನು ಕೊಡಬೇಕು. ಮತ್ತೆ, ಮಾನ್ಯ ಸುರೇಶ್ ಕುಮಾರ್ ಹೇಳಿದಂತೆ, ಕೆಐಎಡಿಬಿ, ಬಿಡಿಎ ಮತ್ತು ಟೌನ್ ಪ್ಲಾನಿಂಗ್ ಇವೆಲ್ಲಾ ಕ್ಲಾಷ್ ಆಗುತ್ತದೆ. ಓವರ್‌ಲ್ಯಾಪ್ ಆಗುತ್ತದೆ. ಒಂದು ವೇಳೆ, ಇದನ್ನು ಒಂದು ಅಥಾರಿಟಿ ಅಕ್ವಿಜಿಷನ್ ಮಾಡಿದ ಬಗ್ಗೆ ಇನ್ನೊಂದು ಅಥಾರಿಟಿಯವರು ಇದೇ ಲ್ಯಾಂಡ್ ಅನ್ನು ಅಕ್ವಾಯರ್ ಮಾಡುತ್ತೇವೆ ಎಂದು7 ಹೊರಟಾಗ, ಕ್ಲಾಷ್ ಆಗಬಹುದು. ಆಗ ಏನು ಮಾಡುತ್ತೀರಿ? ಈ ಲ್ಯಾಂಡ್ ಅಕ್ವಿಜಿಷನ್ ಆಫೀಸರ್ ಎಲ್ಲದಕ್ಕೂ ಒಬ್ಬರೇ ಇರುವುದಕ್ಕಾಗುವುದಿಲ್ಲ. ಲ್ಯಾಂಡ್ ಅಕ್ವಿಜಿಷನ್ ಅನ್ನು ಬೇರೆ ಬೇರೆ ಕಡೆ ಮಾಡಿ, ಸಮಸ್ಯೆಗಳನ್ನು ಉದ್ಭವ ಮಾಡುವಂಥ ಪರಿಸ್ಥಿತಿ ಬರುತ್ತದೆ. ಮತ್ತೆ, ಲ್ಯಾಂಡ್ ಅಕ್ವಿಜಿಷನ್. ಡಿ–ಬೋಟಿಫಿಕೇಷನ್ ಬಗ್ಗೆ ಬಹಳಷ್ಟು ಚರ್ಚೆಯಾಯಿತು. ನೋಟಿಫಿಕೇಷನ್ ಮಾಡುವ ಉದ್ದೇಶವೇ ಡಿ–ನೋಟಿಫಿಕೇಷನ್ ಮಾಡುವುದು

(†ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

ಅಂತ ಆಗಬೇಕು ಎಂದಾಗಬೇಕು. ಏಕೆಂದರೆ, ಹೆಚ್ಚಿನ ಕಡೆಯಲ್ಲಿ ನೋಟಿಫೈ ಮಾಡುವುದು, ಡಿ-ನೋಟಿಫೈ ಮಾಡುವಂಥಾದ್ದು. ಇದೇ ಉದ್ದೇಶವಾಗಿದ್ದರೆ, ಅಥಾರಿಟಿ ಅಗತ್ಯವಿಲ್ಲ. ಟೌನಷಿಪ್ ಅಗತ್ಯವಿಲ್ಲ, ನೋಟಿಫಿಕೇಷನ್ ಮಾಡುವಂಥ ಅಗತ್ಯವೂ ಇಲ್ಲ. ನನ್ನ ಒಂದು ಸಣ್ಣ ಸಲಹೆ ಇದೆ, ಪೀಣ್ಯದಲ್ಲಿ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಎಸ್ಟೇಟ್ ಇದೆ. ಎಷ್ಟು ಇಂಡಸ್ಟ್ರೀಸ್ ನಡೆಯುತ್ತಿದೆ, ಆ ಇಂಡಸ್ಟ್ರೀಗಳಿಗೆ ಸಬ್ಸಿಡಿಯನ್ನು ಕೊಟ್ಟಿಲ್ಲ. ಹೆಚ್ಚಿನವು ಮುಚ್ಚುವ ಹಾಗಾಗಿದೆ. ಅದನ್ನು ಟೇಕ್-ಓವರ್ ಮಾಡಿ. ಅವರಿಗೆ ಕಾಂಪನ್‌ಸೇಷನ್ ಕೊಡಿ. ಏಕೆಂದರೆ, ಅದನ್ನು ನಡೆಸುವುದಕ್ಕಾಗುವುದಿಲ್ಲ. ಅವರಿಗೆ ಅವರ ಸಾಲವನ್ನೇ ತೀರಿಸುವುದಾಗುತ್ತದೆ. It is a biggest industrial estate around Bangalore. Probably you can takeover it and convert into a township.--- ಇದನ್ನು ಮಾಡಲಿಕ್ಕೆ ಸಾಧ್ಯವಾಗುತ್ತದೆ. ಅವರಿಗೂ ಉಪಕಾರವಾಗುತ್ತದೆ. ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಅನ್ನು ಬಂದ್ ಮಾಡಿಕೊಂಡು, ಬ್ಯಾಂಕ್‌ಗೆ ಸಾಲ ಕಟ್ಟಲಾಗದೆ ಏನು ಕುಳಿತಿದ್ದಾರೆ, ಕಾಯುತ್ತಿದ್ದಾರೆ, ಅವರಿಗೂ ಸಹಾಯವಾಗುತ್ತದೆ. ಬೇರೆ ಜಾಗವನ್ನು ಅಕ್ವಾಯರ್ ಮಾಡಿ ಅದನ್ನು ನೋಟಿಫೈ ಮಾಡುವುದು, ಡಿ-ನೋಟಿಫೈ ಮಾಡುವುದು ಇಂಥದ್ದನ್ನೆಲ್ಲಾ ಮಾಡುವುದಕ್ಕೆ ಹೋಗುವುದನ್ನು ಬಿಟ್ಟು, ದಯವಿಟ್ಟು ಬದಲಾವಣೆಯನ್ನು ಮಾಡಿ ಆಲೋಚನೆಯನ್ನು ಮಾಡಿ, ಹಳೆಯ ಇಂಡಸ್ಟ್ರೀಯಲ್ ಎಸ್ಟೇಟ್‌ನಲ್ಲಿ ಬೆಂಗಳೂರು ಸುತ್ತಮುತ್ತ ಎಷ್ಟಿದೆ, ಅವರಿಗೇನಾದರೂ ಇದರಿಂದ ಸಹಾಯ ಮಾಡಲಾಗುತ್ತದೆಯೇ ಎನ್ನುವ ಬಗ್ಗೆ ಆಲೋಚನೆ ಮಾಡಬೇಕು. ನಾನಾಗಲೇ ಹೇಳಿದೆ, ವಾಟ್ ಈಜ್ ಗುಡ್‌ಫೇಥ್ ಎಂದು ಆಗಬೇಕು. ಇನ್ ದಿ ನೇಮ್ ಆಫ್ ಗುಡ್‌ಫೇಥ್ ಎಲ್ಲವನ್ನೂ ಮಾಡಿಕೊಂಡು ಗುಡ್‌ಫೇಥ್‌ನಲ್ಲಿ ಮಾಡಿದ್ದೀರಿ ಎಂದು, You cannot take protection under the guise of good faith.ಆದುದರಿಂದ, ನೀವು ಗುಡ್‌ಫೇಥ್ ಎಂದರೇನೆಂದು ಹೇಳಬೇಕಾಗುತ್ತದೆ. ಆಮೇಲೆ, ಬಾರ್ ಆಫ್ ಸೂಟ್ಸ್. ಸೆಕ್ಷನ್ 31. ಇವೆರಡೂ ಇದೆಯಲ್ಲಾ, It is draconian. Not only authoritative, but draconian. You are infringing the fundamental right of the citizens.ಅದನ್ನು ತೆಗೆಯಲೇಬೇಕಾಗುತ್ತದೆ. ಅದನ್ನು ಇಟ್ಟುಕೊಂಡು ನೀವು ಕಾನೂನನ್ನು ತಂದು ಜನರಿಗೆ ಕೋರ್ಟಿಗೆ ಹೋಗುವಂಥ ಏನು ಅಧಿಕಾರವಿದೆ, ಅದನ್ನು ಕಿತ್ತುಕೊಳ್ಳಲು ಸಾಧ್ಯವಾಗುವುದಿಲ್ಲ. We are not going back to ``might is right."ಆ ದಿನಕ್ಕೆ ಹೋಗಲು ಸಾಧ್ಯವಾಗುವುದಿಲ್ಲ. ದಯವಿಟ್ಟು ಆ ಎರಡೂ ಸೆಕ್ಷನ್ ಅನ್ನು ತೆಗೆಯಬೇಕಾಗುತ್ತದೆ. ಸೆ.29 ಅಂಡ್ 39 ಎರಡನ್ನೂ ತೆಗೆಯಬೇಕಾಗುತ್ತದೆ. ಉಳಿದಿದ್ದನ್ನು ಏನು ತಿದ್ದುಪಡಿ ಮಾಡಬೇಕಾಗುತ್ತದೆ, ಅದನ್ನು ಮಾಡಬೇಕಾಗುತ್ತದೆ. ದಯವಿಟ್ಟು ಇದನ್ನು ಇವತ್ತು ಪಾಸ್ ಮಾಡಬೇಡಿ. ತಿದ್ದುಪಡಿಗಳನ್ನು ತಂದು ಮುಂದಿನ ಅಧಿವೇಶನದಲ್ಲಿ ಇದನ್ನು ಮಂಡಿಸುವ ವ್ಯವಸ್ಥೆ ಮಾಡಬೇಕು. ನಾನು ಇದನ್ನು ವಿರೋಧ ಮಾಡುತ್ತೇನೆ. ದಯವಿಟ್ಟು ಇದನ್ನು ಇವತ್ತು ಪಾಸ್ ಮಾಡಲು ಅವಕಾಶ ಕೊಡಬಾರದು.

ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) : ಸನ್ಮಾನ್ಯ ಅಧ್ಯಕ್ಷರೆ, ಸದಸ್ಯರು ಹೇಳಿದ್ದು ಎಲ್ಲದಕ್ಕೂ ನನ್ನ ಬೆಂಬಲವನ್ನು ಕೊಡುತ್ತಾ, ನಾನು ಸೆಕ್ಷನ್ 25ರ ಬಗ್ಗೆ ತಮ್ಮ ಗಮನವನ್ನು ಸೆಳೆಯಲು ಬಯಸುತ್ತೇನೆ. ಸರ್ಕಾರಿ ಭೂವಿಗಳು. ಈ ಅಧಿನಿಯಮದ ಉದ್ದೇಶಗಳ ಪುರೋಭಿವೃದ್ಧಿಗಾಗಿ ರಾಜ್ಯ ಸರ್ಕಾರ ಮತ್ತು ಪ್ರಾಧಿಕಾರದ ನಡುವೆ ಒಪ್ಪಂದವಾಗಿಬಹುದಾದ ಷರತ್ತುಗಳ ಮೇಲೆ ರಾಜ್ಯ ಸರ್ಕಾರವು ತನ್ನಲ್ಲಿ ವಿಹಿತವಾದ ಯಾವುದೇ ಭೂಮಿಗಳನ್ನು ಪ್ರಾಧಿಕಾರದ ಸುಪರ್ದಿಯಲ್ಲಿರಿಬಹುದು ಎಂದು ಹೇಳುವ ಕ್ಲಾಜ್ ಇದೆ. ನಾನು ಏಕೆ ಇದನ್ನು ಉಲ್ಲೇಖ ಮಾಡುತ್ತಿದ್ದೇನೆಂದರೆ, ಮಂಗಳೂರು ಕ್ಷೇತ್ರ

ಕೂಡ ಬೆಂಗಳೂರು ಹಾಗೆ ಮಾಹಿತಿ ತಂತ್ರಜ್ಞಾನದಲ್ಲಿ ಅತ್ಯಂತ ವಿಕಾಸಗೊಳ್ಳುತ್ತಿರುವ ಒಂದು ಕ್ಷೇತ್ರ. ಈ ಕ್ಷೇತ್ರದಲ್ಲಿರುವಂಥ ಸುಮಾರು 30 ಎಕರೆ ಸರ್ಕಾರಿ ಜಾಗ ಅಲ್ಲಿಯ ಶಾಸಕರಿಗೂ ಗೊತ್ತಿಲ್ಲ, ಪಾರ್ಲಿಮೆಂಟ್ ಸದಸ್ಯರಿಗೂ ಗೊತ್ತಿಲ್ಲ, ಅಲ್ಲಿಯ ಜಿಲ್ಲಾಡಳಿತಕ್ಕೂ ಗೊತ್ತಿಲ್ಲ, ಯಾರಿಗೂ ಮಾಹಿತಿ ಗೊತ್ತಿಲ್ಲ, ಅದನ್ನು ಹಸ್ತಾಂತರಿಸಲಾಗಿದೆ ಎನ್ನುವ ಮಾಹಿತಿ ನಮ್ಮ ಗಮನಕ್ಕೆ ಬಂತು. ಇದರ ಬಗ್ಗೆ ಸಾಕಷ್ಟು ಗೊಂದಲಗಳು ಉಂಟಾಗಿದೆ. ಕ್ಲಾರಿಫಿಕೇಷನ್ ಕೇಳಿದರೆ, ನಮಗೆ ಎಲ್ಲಿಂದಲೂ ಕ್ಲಾರಿಫಿಕೇಷನ್ ಸಿಗುತ್ತಿಲ್ಲ. ಬಹುಶ: ಈ ಆಕ್ಟ್ ಇವತ್ತು ಎಲ್ಲಿ ಪ್ರೆಸೆಂಟ್ ಆಗಿದೆ, ಅನುಷ್ಠಾನಕ್ಕೆ ಬರುವ ಮುಂಚೆ ಕಾರ್ಯರೂಪಕ್ಕೆ ಬರುತ್ತಿದೆಯೇ ಎನ್ನುವಂಥ ಒಂದು ಸಂಶಯದಿಂದ ನಾನು ಈ ಪ್ರಸ್ತಾಪವನ್ನು ಮಾಡುತ್ತಿದ್ದೇನೆ. ಇದರ ಬಗ್ಗೆ ಟ್ರಾನ್ಸ್ಪರೆನ್ಸಿಯನ್ನು ಕಾಪಾಡಿಕೊಳ್ಳುವ ಅವಶ್ಯಕತೆ ಇದೆ. ಏನು ಮಾಡುತ್ತಿದ್ದಾರೆ ಎನ್ನುವ ಮಾಹಿತಿಯನ್ನು ಅಲ್ಲಿರುವ ಜಿಲ್ಲಾಡಳಿತಕ್ಕಾದರೂ ಕೊಡುವ ಅವಶ್ಯಕತೆ ಇದೆ. ಅಲ್ಲಿಯ ಜನ ಪ್ರತಿನಿಧಿಗಳಿಗಾದರೂ ಕೊಡುವ ಅವಶ್ಯಕತೆ ಇದೆ. ಯಾವ ಮಾಹಿತಿಯನ್ನೂ ಕೊಡುತ್ತಿಲ್ಲ. ಇದರಲ್ಲೇನಾದರೂ ಸೀಕ್ರಸಿ ಮಾಡುತ್ತಿದ್ದಾರೆಯೇ? ಸೀಕ್ರಸಿಯನ್ನು ಮೇನ್‌ಟೇನ್ ಮಾಡುತ್ತಿದ್ದರೆ, ಇದರ ಹಿನ್ನೆಲೆ ಏನೆಂಬುದು ಅರ್ಥವಾಗುತ್ತಿಲ್ಲ.

ಶ್ರೀ ಕೆ. ವಿಜಯಕುಮಾರ್ ಶೆಟ್ಟಿ : ಯಾವುದದು? ನಿಮಗೇನಾದರೂ ಆಕಾಶದಿಂದ ಇನ್‌ಫರ್ಮೇಷನ್ ಬಂದು ಬಿತ್ತಾ? ಯಾವುದು ಹೇಳಿ?

ಶ್ರೀ ಎನ್. ಯೋಗೀಶ್ ಭಟ್ : ಇನ್‌ಫೋಸಿಸ್ ಸಂಸ್ಥೆಗೆ ಅಲ್ಲಿರುವ ಸರ್ಕಾರಿ ಜಾಗಕ್ಕೆ ಸಂಬಂಧಪಟ್ಟ ಸುಮಾರು 30 ಎಕರೆ ಸರ್ಕಾರಿ ವಸತಿ ಇರುವ ಪ್ರದೇಶ.

ಶ್ರೀ ಕೆ. ವಿಜಯ ಕುಮರ್ ಶೆಟ್ಟಿ : ಸರ್ಕಾರದಿಂದ ಬಂದಿದೆ, ಇದನ್ನು ಏನು ಮಾಡಬೇಕೆಂದು ಜಿಲ್ಲಾ ಪಂಚಾಯತ್‌ಗೆ ಸೂಚನೆ ಬಂದಿದೆ. ಇನ್‌ಫೋಸಿಸ್‌ನವರು ಪರ್ಚೇಸ್ ಮಾಡಬೇಕೆಂದಿದ್ದಾರೆ. ಅದರಲ್ಲೇನೂ ತೀರ್ಮಾನವಾಗಿಲ್ಲ. ಅವರು ಯಾರಿಗೂ ಗೊತ್ತಿಲ್ಲವೆಂದು ಹೇಳುತ್ತಾರೆ.

ಛೇರ್ಮನ್ : ವಿಜಯಕುಮಾರ್‌ರವರೆ, ಅವರು ಮುಗಿಸಲಿ.

ಶ್ರೀ ಕೆ. ವಿಜಯಕುಮಾರ್ ಶೆಟ್ಟಿ : ಅವರು ಆ ರೀತಿ ಹೇಳುವುದು ಸರಿಯಲ್ಲ.

ಗೊಂದಲ

ಛೇರ್ಮನ್ : ಅವರಿಗೆ ಹೇಳುವುದಕ್ಕೆ ಬಿಡಿ.

ಗೊಂದಲ

ಶ್ರೀ ಕೆ. ವಿಜಯಕುಮಾರ್ ಶೆಟ್ಟಿ : ಪತ್ರಿಕೆಗಳಲ್ಲಿ ಬಂದಿದೆ. ಜಿಲ್ಲಾಪಂಚಾಯತ್ ಸಭೆಯಲ್ಲಿ ಚರ್ಚೆಯಾಗಿದೆ. ಅದು ಬೇಕೋ, ಬೇಡವೋ ಎಂಬುದನ್ನು ನಾವು ತೀರ್ಮಾನ ಕೈಗೊಳ್ಳುತ್ತೇವೆ. ಅದು ನಮ್ಮ ತೀರ್ಮಾನ.

ಛೇರ್ಮನ್ : ವಿಜಯಕುಮಾರ್, ನಿಮಗೆ ಅವಕಾಶ ಕೊಡುತ್ತೇನೆ, ಆಗ ಮಾತನಾಡಿ. Let him finish

ಶ್ರೀ ಡಿ.ಬಿ. ಇನಾಂದಾರ್ (ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು) : ಈ ಅಥಾರಿಟಿ ಆಕ್ಟ್‌ಗೆ ಅವರೇನು ಹೇಳುತ್ತಿದ್ದಾರೆ ಅದಕ್ಕೆ ಸಂಬಂಧವಿಲ್ಲ. ದಯವಿಟ್ಟು ಇ ಆಕ್ಟ್ ಬಗ್ಗೆ ಏನಾದರೂ ಹೇಳಬೇಕಾಗಿದ್ದರೆ, ಮಾನ್ಯ ಸದಸ್ಯರು ಹೇಳಬೇಕು.

†ಶ್ರೀ ಎನ್. ಯೋಗೀಶ್ ಭಟ್ : ಇಂಪ್ಲಿಮೆಂಟ್ ಆಗುವ ಹಂತದಲ್ಲಿದೆ ಎಂದು ಹೇಳುವುದು

(†ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

ಜಿಲ್ಲಾಡಳಿತಕ್ಕೆ ತಾವು ನೇರವಾಗಿ ಪ್ರಶ್ನೆ ಮಾಡಿ ಕೇಳಿ. ನಾನು ಅಧ್ಯಕ್ಷರನ್ನು ಕೇಳುತ್ತಿದ್ದೇನೆ. ಬೇರೆ ಯಾವ ಸದಸ್ಯರೂ ಕೇಳುತ್ತಿಲ್ಲ. ಜಿಲ್ಲಾಡಳಿತಕ್ಕೆ ಗೊತ್ತಿದೆ ಎನ್ನುವ ವಿಷಯವನ್ನು ಕೇಳಿ. ನಾನು ಕೆಡಿಪಿ ಮೀಟಿಂಗ್‌ನಲ್ಲೂ ಕೂಡ ಪ್ರಸ್ತಾಪ ಮಾಡಿದ್ದೇನೆ. ಯಾರು ಜಿಲ್ಲಾ ಪಂಚಾಯತ್‌ಗೆ ಕರೆಸ್ಪಾಂಡೆನ್ಸ್ ಮಾಡಿದ್ದಾರೆ ಗೊತ್ತಿಲ್ಲ. ಅದು ಜಿಲ್ಲಾಡಳಿತಕ್ಕೆ ಸಂಬಂಧಪಟ್ಟ ಹಾಗೆ, ಜನಪ್ರತಿನಿಧಿಗಳಿಗೆ ಸಂಬಂಧಪಟ್ಟ ಹಾಗೆ ಇದಕ್ಕೆ ಸಂಬಂಧಪಟ್ಟ ಅಂಶವನ್ನು ಉಲ್ಲೇಖ ಮಾಡಲು ಇಚ್ಛೆಪಡುತ್ತೇನೆ. ಮಾಹಿತಿ ತಂತ್ರಜ್ಞಾನ ಯೋಜನೆಗಳನ್ನು ಕಾರ್ಯಗತಗೊಳಿಸುವ ಏಜೆನ್ಸಿಗಳ ನಡುವೆ ಉದ್ಭವಿಸಬಹುದಾದ ಯಾವುದೇ ಪರಸ್ಪರ ಘರ್ಷಣೆ ಅಂಶಗಳನ್ನು ಶಮನಗೊಳಿಸುವುದು ಮತ್ತು ಪರಿಹರಿಸುವುದು. ಇದನ್ನು ನಾನು ಸ್ವಾಗತಿಸುತ್ತಿದ್ದೇನೆ. ಏಕೆ ಇದನ್ನು ಹೇಳುತ್ತಿದ್ದೇನೆಂದರೆ, ವಿಶೇಷವಾಗಿ ನಮ್ಮ ಐ.ಟಿ. ಪಾರ್ಕ್‌ಗೆ ಸಂಬಂಧಪಟ್ಟ ಹಾಗೆ ಸುಮಾರು ಹದಿನೇಳೂವರೆ ಕೋಟಿ ರೂಪಾಯಿ ಸ್ಯಾಂಕ್ಷನ್ ಆಗಿದೆ, ಕೇಂದ್ರ ಸರ್ಕಾರದಿಂದ ನೇರವಾಗಿ ಮಂಗಳೂರು ಮಹಾನಗರಪಾಲಿಕೆಗೆ ಬಂತು. ಸನ್ಮಾನ್ಯ ಸಚಿವರು ಗಮನಕ್ಕೆ ತರುವುದೇನೆಂದರೆ, ಒಂದು ವರ್ಷ ನಿಮ್ಮ ಕಾಮರ್ಸ್ ಅಂಡ್ ಇಂಡಸ್ಟ್ರೀಸ್ ಇಲಾಖೆಯಲ್ಲಿ ಎರಡೂವರೆ ಕೋಟಿ ರೂಪಾಯಿ ಸ್ಯಾಂಕ್ಷನ್ ಆಗಿರುವಂಥದ್ದನ್ನು ಒಂದು ವರ್ಷದಲ್ಲಿ ಪೆಂಡಿಂಗ್ ಇಟ್ಟು, ಯಾವುದೇ ರೀತಿ ಅದಕ್ಕೆ ಕ್ಲಿಯರೆನ್ಸ್ ಕೊಡದೆ, ಗಲಾಟೆ ಮಾಡಿದ ನಂತರ, ಸಬ್ಜೆಕ್ಟ್ ಕಮಿಟಿಯಲಲಿ ಸಂಬಂಧಪಟ್ಟ ಸೆಕ್ರೆಟರಿಗಳನ್ನು ಕೇಳಿದ ನಂತರ ಅದನ್ನು ರಿಲೀಜ್ ಮಾಡುವಂಥ ಪ್ರಕ್ರಿಯೆ ಬಂತು. ಉಳಿದ ಹಣವನ್ನು ಬೇರೆ ಕಡೆ ಡೈವರ್ಟ್ ಮಾಡುವ ಸಾಧ್ಯತೆ ಇದೆ. ಈ ಹಿನ್ನೆಲೆಯಲ್ಲಿ ನಾನು ತಮ್ಮ ಮೂಲಕ ಮಾನ್ಯ ಸಚಿವರನ್ನು ಒತ್ತಾಯಿಸುವುದೇನೆಂದರೆ, ಈ ಕ್ಲಾಜ್ ಯಾವುದಿದೆ, ಸಂಘರ್ಷವಾಗದ ರೀತಿಯಲ್ಲಿ ಸ್ಪೆಸಿಫಿಕ್ ಉದ್ದೇಶಕ್ಕೆ ಬಂದಿರುವ ಹಣವನ್ನು ಅದೇ ಉದ್ದೇಶಕ್ಕೋಸ್ಕರ ಮಾಹಿತಿ ತಂತ್ರಜ್ಞಾನದ ಅಭಿವೃದ್ಧಿಗೋಸ್ಕರ ಕೊಡುವ ಅವಶ್ಯಕತೆ ಇದೆ. ಸಂಘರ್ಷವಾಗದ ರೀತಿಯಲ್ಲಿ ನೋಡುವ ವಿಶೇಷವಾಗಿರುವ ಕ್ಲಾಜ್ ಏನಿದೆ ಇದನ್ನು ನಾನು ಸ್ವಾಗತ ಮಾಡುತ್ತಿದ್ದೇನೆ. ಒಟ್ಟಾರೆಯಾಗಿ ಇದಕ್ಕೆ ಸಂಬಂಧಪಟ್ಟ ಬೇರೆ ಬೇರೆ ಉದ್ದೇಶಗಳ ಹಿಂದೆ ಇನ್‌ಹರೆಂಟ್ ಆಗಿರುವ ಯಾವ ಉದ್ದೇಶವಿದೆ, ಅದರ ಬಗ್ಗೆ ಚರ್ಚೆಯಾಗಿದೆ. ಇದನ್ನು ನಾನು ಸಂಪೂರ್ಣವಾಗಿ ಬೆಂಬಲಿಸಿ ಈ ಕಾರಣಕ್ಕೋಸ್ಕರ ಇದನ್ನು ಈಗಲೇ ತರುವುದು ಬೇಡ. ಆದರೆ, ಈ ಆಕ್ಟ್ ಅನ್ನು ಅಳವಡಿಸಲು ಏನೆಲ್ಲಾ ಎಂದು ಹೇಳುವುದನ್ನು, ಈ ಅವಕಾಶಗಳ ಉಪಯೋಗ ಮಾಡುವುದನ್ನು ಮಾತ್ರ ಹೇಳುತ್ತಿದ್ದೇನೆ. ಏಕೆಂದರೆ, ಇದು ಕೊನೆ ಅಧಿವೇಶನವಾದ್ದರಿಂದ ಈ ಅವಕಾಶವನ್ನು ಉಪಯೋಗ ಮಾಡುತ್ತಿದ್ದೇನೆ.

†ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) : ಬೆಂಗಳೂರು ಮಾಹಿತಿ ತಂತ್ರಜ್ಞಾನ ವಿಕಾಸ ವಲಯ ಪ್ರಾಧಿಕಾರ ವಿಧೇಯಕವನ್ನು ನಿನ್ನೆ ಮಂಡಿಸಿದ್ದಾರೆ. ಚರ್ಚೆ ಈಗ ಶುರುವಾಗಿದೆ. ಈಗಾಗಲೇ ಇದಕ್ಕೆ ಹಿರಿಯ ಸದಸ್ಯರು ಸಾಕಷ್ಟು ಅಭಿಪ್ರಾಯಗಳನ್ನು ವ್ಯಕ್ತ ಪಡಿಸಿದ್ದಾರೆ. ಇವತ್ತು ಪ್ರಶ್ನಾತೀತವಾಗಿ ಕರ್ನಾಟಕ ಐ.ಟಿ. ಕ್ಷೇತ್ರದಲ್ಲಿ ಬಹಳ ಮುಂದಿರುವುದನ್ನು ಇಡೀ ಜಗತ್ತು ಗುರುತಿಸಿದೆ. ಹಾಗಾಗಿ ಅದಕ್ಕೆ ಇನ್ನಷ್ಟು ಸುಧಾರಣೆಯ ದಿಕ್ಕಿನಲ್ಲಿ ಇನ್ನಷ್ಟು ಸೌಲಭ್ಯಗಳನ್ನು ನಾವು ದೊರಕಿಸಿಕೊಡುವ ದೃಷ್ಟಿಯಲ್ಲಿ ಯೋಗ್ಯವಾದ ಯೋಚನೆಯನ್ನು ಮಾಡಲೇಬೇಕು. ಆದರೆ, ಇದರ ಹಿನ್ನೆಲೆ ಏನು ಎನ್ನುವುದು ಈಗಾಗಲೇ ಸಾಕಷ್ಟು ಚರ್ಚೆಗೊಳಪಟ್ಟಿದೆ. ಇದು ಸಾರ್ವಜನಿಕ ಚರ್ಚೆಗೊಳಪಡಲಿ. ಮತ್ತೆ ಈಗಾಗಲೇ ನಮ್ಮಿಂದ ಬಯಸಿದಂತೆ, ಯಾರ್‍ಯಾರು ಈ ರೀತಿಯ ಅರ್ಜಿಯನ್ನು ನಿಮಗೆ ಹಾಕಿದ್ದರು, ನಮಗೆ ಈ ರೀತಿಯ ಇನ್‌ಫ್ರಾಸ್ಟ್ರಕ್ಚರ್‌ಗಳು ಬೇಕು, ಅಂಥ ಕೇಳಿದ್ದರು, ಅದೆಲ್ಲಾ ಬಹಿರಂಗಗೊಂಡರೆ,

(†ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

ತಾವು ಮಂತ್ರಿಗಳು ಉತ್ತರಿಸುವಾಗ ಅದನ್ನೆಲ್ಲಾ ಹೇಳಿದರೆ, ಅವರವರ ಹಿತಾಸಕ್ತಿಗಳೇನೇನು ಎನ್ನುವುದು ಜನತೆಗೆ ಗೊತ್ತಾಗುವುದಕ್ಕೆ ಒಳ್ಳೆಯದಾಗುತ್ತದೆ.

5.00 ಪಿ.ಎಂ

ಸರ್ಕಾರ ಇದಕ್ಕೆ ತರಾತುರಿಯಲ್ಲಿ ಇರುವುದನ್ನು ನಾವು ಕಾಣುತ್ತಿದ್ದೇವೆ. ಆದರೆ ಐ.ಟಿ. ಕ್ಷೇತ್ರದಲ್ಲಿ ಇನ್ನು ಅನೇಕ ರೀತಿಯ ಸುಧಾರಣೆಗಳನ್ನು ತರುವುದು ಅಗತ್ಯವಿದೆ. ಇವತ್ತು ಅದನ್ನು ತರದೇ ಹೋದರೆ ನಮ್ಮ ರಾಜ್ಯದ ಅಥವಾ ನಮ್ಮ ದೇಶದ ವಿಶೇಷವಾಗಿ ನಮ್ಮ ರಾಜ್ಯಕ್ಕೆ ಕುರಿತಂತೆ ಇಲ್ಲಿ ಮಾನವ ಶಕ್ತಿ ನಮ್ಮ ಯುವಕ ಶಕ್ತಿ ಬಳಕೆಯಾಗುತ್ತಿದೆ ಅದಕ್ಕೆ ಸರಿಯಾದಂಥ ರೀತಿ ಅವರಿಗೆ ಗೌರವ ಸಂಬಳ ಇತ್ಯಾದಿಗಳನ್ನು ಕೊಡಬೇಕು, ಅದನ್ನು ಕೊಡದೇ ಹೋದರೆ ವಂಚಿತರಾಗುತ್ತಿರುವುದನ್ನು ಕಾಣುತ್ತಿದ್ದೇವೆ. ಈಗ ಮಾತನಾಡುವಾಗ ಬಿಜೆಪಿ ಬಗ್ಗೆ ಚರ್ಚೆಯಾಯಿತು. ಈಗ ಅಮೇರಿಕಾ ಏನು ಮಾಡುತ್ತೋ ಅಥವಾ ಜಗತ್ತಿನ ಇನ್ನ್ಯಾವ ದೇಶ ಏನು ಮಾಡುತ್ತೋ ಅದು ಬೇರೆ. ಆದರೆ ನಾವು ಈ ಬಿಜಿನೆಸ್ ಪ್ರೋಸೆಸ್ ಔಟ್‌ಸೋರ್ಸಿಂಗ್ ಬಗ್ಗೆ (ಬಿಪಿಓ) ಕುರಿತಂತೆ ಇವತ್ತು ಬಹಳ ದೊಡ್ಡ ಗೊಂದಲ ನಿರ್ಮಾಣವಾಗಿದೆ. ನೀವು ಐ.ಟಿ. ಕ್ಷೇತ್ರದ ಬಗ್ಗೆ ಪ್ರಾಮಾಣಿಕ ಕಾಳಜಿ ಇದ್ದರೆ, ಜಾಗ ತೆಗೆದುಕೊಂಡು ಅವರಿಗೆ ಇನ್‌ಫ್ರಾಸ್ಟ್ರಕ್ಚರ್ ಕೊಡುವುದಕ್ಕಿಂತ ಹೆಚ್ಚಾಗಿ ಬಿಪಿಓ ದಲ್ಲಿರುವಂಥ ಗೊಂದಲಗಳನ್ನು ನಿವಾರಣೆ ಮಾಡಿ, ಅದಕ್ಕೆ NASSCOMದಿಂದಲೂ, STPIದಿಂದಲೊ ಅಥವಾ ಮಾಹಿತಿ ತಂತ್ರಜ್ಞಾನ ಇಲಾಖೆಯಿಂದಲೊ ಎಲ್ಲೋ ಒಂದು ಕಡೆ ನೋಂದಾವಣೆ ಮಾಡಿ ಈ ಬಿಪಿಓ ಚಟುವಟಿಕೆಗಳನ್ನು ನಡೆಸಬೇಕು ಎನ್ನುವುದನ್ನು ಕಡ್ಡಾಯಗೊಳಿಸಬೇಕು. ನೀವು ಇದನ್ನು ಮಾಡದೇ ಹೋದರೆ, ಬಹಳ ದೊಡ್ಡ ಪ್ರಮಾಣದಲ್ಲಿ ನಮ್ಮ NASSCOM2002ರ ವರದಿಯ ಒಂದು ಉಲ್ಲೇಖ ಇದೆ, ಮುಂದಿನ 6–7 ವರ್ಷಗಳಲ್ಲಿ ಸುಮಾರು 400 ಬಿಲಿಯನ್ ಡಾಲರ್ ಬರೀ ಬಿಪಿಓ ದಿಂದ ನಮ್ಮ ದೇಶಕ್ಕೆ ಅಥವಾ ನಮ್ಮ ರಾಜ್ಯಕ್ಕೆ ದೊಡ್ಡ ಪಾಲು ಅದರಲ್ಲಿ ಬರುವುದಿದೆ ಎನ್ನುವ ಮಾಃಇತಿ ಇದೆ. ಇಷ್ಟು ದೊಡ್ಡ ಹಣ ನಮ್ಮ ರಾಜ್ಯಕ್ಕೆ ಬರುವಾಗ, ಅಥವಾ ನಮ್ಮ ದೇಶಕ್ಕೆ ಬರುವಾಗ ಅಥವಾ ಅದರ ದೊಡ್ಡ ಪಾಲು ರಾಜ್ಯದ್ದು ಇರುವಾಗ, ನಾವು ಕೆಲಸ ಮಾಡಿದಂಥವರಿಗೆ ಸರಿಯಾದಂಥ ರೀತಿಯಲ್ಲಿ ಅವರನ್ನು ಗುರುತಿಸಿ ಅವರನ್ನು ಗೌರವಿಸಬೇಕಾದುದು ಅಗತ್ಯವಿದೆ. ಈ ಚಟುವಟಿಕೆಯ ಬಗ್ಗೆ ಮಾನ್ಯ ಸಚಿವರು ವಿಶೇಷವಾದಂಥ ಆಸಕ್ತಿ ವಹಿಸಿದರೆ ಯುವಕರು ಯಾರು ಪ್ರತಿಭಾವಂತರು ಬಿಪಿಓ ದಲ್ಲಿ ಕೆಲಸ ಮಾಡುತ್ತಿದ್ದಾರೆ, ಅವರಿಗೆ ಒಂದು ಜಾಬ್ ಸೆಕ್ಯುರಿಟಿ ಆದರೂ ಇರುತ್ತದೆ. ಇಲ್ಲವೆಂದರೆ ಅವರ ಹತ್ತಿರ ಕೆಲಸ ತೆಗೆದು ಕೊಳ್ಳುತ್ತಾರೆ ನಂತರ ಅವರಿಗೆ ಹಣನೇ ಕೊಡುವುದಿಲ್ಲ. ಅವರಕಂಪನಿಯೂ ಒಂದಿಷ್ಟು ದಿನ ಆದ ಮೇಲೆ ಇರುವುದಿಲ್ಲ. ಈ ರೀತಿ ಆಗುತ್ತಿರುವುದನ್ನು ನಾವು ನೋಡುತ್ತೇವೆ. ದೊಡ್ಡ ದೊಡ್ಡ ಕಂಪನಿಗಳು ಹೇಗಾದರೂ ಉಳಿದುಕೊಳ್ಳಬಹುದು, ಅದರೆ ಚಿಕ್ಕ ಪುಟ್ಟ ಕಂಪನಿಗಳು ಹೊಸ ಯುವಕರು ಈ ಕ್ಷೇತ್ರದಲ್ಲಿ ಯಾರು ಉದ್ಯಮವನ್ನು ಪ್ರಾರಂಭಿಸಿದಂತವರು ಇದ್ದಾರೆ, ಅವರ ಬಹಳ ದೊಡ್ಡ ತೊಂದರೆಯಲ್ಲಿ ಇವತ್ತು ಸಿಲುಕಿದ್ದಾರೆ. ಹೀಗಾಗಿ ಬಿಪಿಓ ಕುರಿತಂತೆ NASSCOM, STPI,ಅಥವಾ ಮಾಹಿತಿ ತಂತ್ರಜ್ಞಾನ ಇಲಾಖೆಯಲ್ಲಿ ಅವರು ಕಡ್ಡಾಯವಾಗಿ ನೋಂದಾವಣೆ ಮಾಡಿಕೊಂಡರೆ ಮಾತ್ರ ಅವರು ಅಕೌಂಟಬಿಲಿಟಿಗೆ ಸಿಕ್ಕುತ್ತಾರೆ, ಅವರೊಂದು ಲೆಕ್ಕಕ್ಕೆ ಸಿಗುತ್ತಾರೆ, ಅವರೊಂದು ಹಿಡಿತಕ್ಕೆ ಸಿಗುತ್ತಾರೆ, ಇಲ್ಲವೆಂದರೆ ಕೆಲಸ ತೆಗೆದುಕೊಂಡು ಹೋಗಿಬಿಡುತ್ತಾರೆ, ದುಡ್ಡು ಇಲ್ಲ ಆ ರೀತಿಯ ಪರಿಸ್ಥಿತಿ ಇದೆ. ಈ ರೀತಿಯಾಗಿ ಮೋಸಗಾರಿಕೆ ಮಾಡುವುದನ್ನು ನಾವು ಇಂದು ನೋಡಬೇಕಾಗುತ್ತದೆ. ನಮ್ಮ ಯುವಕರ ಸ್ಕಿಲ್ ಅನ್ನು ಅವರೇನು ಉಪಯೋಗಿಸಿಕೊಳ್ಳುತ್ತಿದ್ದಾರೋ ಅದಕ್ಕೆ ಪ್ರತಿಫಲ ಸಿಗುತ್ತಿಲ್ಲದಿರುವುದನ್ನು

ನಾವಿಂದು ನೋಡಿದ್ದೇವೆ. ಹೀಗಾಗಿ ಸರ್ಕಾರಕ್ಕೆ ಇದನ್ನು ಮಾಡುವುದಕ್ಕಿಂತ ಹೆಚ್ಚಾಗಿ ಈ ರೀತಿ ಕೆಲಸವನ್ನು ಮಾಡಿದರೆ ಹೆಚ್ಚು ಅದು ನಮ್ಮ ಈ ಕ್ಷೇತ್ರಕ್ಕೆ ಪ್ರಾಮುಖ್ಯತೆ ಸಿಕ್ಕುತ್ತದೆ, ಆ ಸ್ಕಿಲ್‌ಗೆ ಗೌರವ ಸಿಕ್ಕುತ್ತದೆ, ಐ.ಟಿ. ಕ್ಷೇತ್ರದಲ್ಲಿ ಇನ್ನು ಹೆಚ್ಚಿನ ಉನ್ನತಕ್ಕೆ ತೆಗೆದುಕೊಂಡು ಹೋಗುವುದಕ್ಕೆ ಸಾಧ್ಯವಿದೆ. ನಾನು ಈ ಒಂದು ಸಂಗತಿಯನ್ನು ಹೇಳುತ್ತಾ ಈ ಹಿಂದೆ ಮಾನ್ಯ ಸಚಿವರಿಗೆ ಈ ಕುರಿತಂತೆ ಒಂದು ಪತ್ರವನ್ನು ಬರೆದಿದ್ದೆ, ಇನ್ನೊಂದು ಸಲ ನಾನು ವಿವರವಾದ ಪತ್ರವನ್ನು ಕೊಡುತ್ತೇನೆ, ಈಗಾಗಲೇ ಈ ಬಿಪಿಓ ಕುರಿತಂತೆ ದೊಡ್ಡ ಧ್ವನಿ ಬಂದಿದೆ, ಕೊನೆಯಲ್ಲಿ ನನ್ನ ವಿನಂತಿ ಏನೆಂದರೆ, ಈ ಮಾಹಿತಿ ತಂತ್ರಜ್ಞಾನ ವಿಕಾಸ ವಲಯವನ್ನು ನೀವು ಬೆಂಗಳೂರಿಗೆ ಸೀಮಿತವಾಗಿ ಮಾಡುತ್ತಿದ್ದೀರಿ. ಬೆಂಗಳೂರಿಗೆ ಇದನ್ನು ಮಾಡಲೇಬೇಕು ಎಂದು ಈಗೇನು ಚರ್ಚೆಯಾಗಿದೆ, ಅದರ ಹಿನ್ನೆಲೆ ಹಿತಾಸಕ್ತಿಗಳು ಗೊತ್ತಾಗುತ್ತದೆ. ನಾನು ಮುಂದೆ ಕೇಳಬಹುದು, ಇವತ್ತು ಮೈಸೂರು ಇರಬಹುದು, ಮಾನ್ಯ ಛೇರ್ಮನ್ ಅವರೇ ತಮ್ಮ ಊರು, ಮಂಗಳೂರು ಇರಬಹುದು, ಅಥವಾ ಹುಬ್ಬಳ್ಳಿ ಧಾರವಾಡ್ ಇರಬಹುದು ಅಥವಾ ಇತ್ಯಾದಿಗಳೆಲ್ಲವೂ ಐ.ಟಿ. ಕ್ಷೇತ್ರದಲ್ಲಿ ತನ್ನದೇ ಆದಂಥ ಒಂದು ಪ್ರಾಮುಖ್ಯತೆಯಿಂದ ಅಲ್ಲಲ್ಲಿ ಆ ಊರುಗಳು ಆ ಕ್ಷೇತ್ರ ಬೆಳೆಯುತ್ತಲಿದೆ. ಹೀಗಾಗಿ ಈ ಪ್ರಾಧಿಕಾರದ ವ್ಯಾಪ್ತಿ ಬೆಂಗಳೂರಿಗಷ್ಟೇ ಸೀಮಿತಗೊಳಿಸುವಂಥ ವಿಚಾರ ಇದೆಯೋ, ಅಥವಾ ಮುಂದೆ ಅಲ್ಲೊಂದು ಇಲ್ಲೊಂದು ಪ್ರತ್ಯೇಕವಾದ ಪ್ರಾಧಿಕಾರಗಳನ್ನು ಎಲ್ಲಾ ಊರುಗಳಲ್ಲಿ ಮಾಡೋಣ ಎನ್ನುವುದಕ್ಕಿಂತ ರಾಜ್ಯಮಟ್ಟದಲ್ಲಿ ಒಂದು ಪ್ರಾಧಿಕಾರದ ರೀತಿಯಲ್ಲಿ ಯೋಚನೆ ಮಾಡಿ, ಅಂದರೆ ಅದನ್ನು ಅಭಿವೃದ್ಧಿಪಡಿಸುವಂಥ ಭಾಗಗಳು ಯಾವ್ಯಾವುದು ಎಂಬುದನ್ನು ಜೋಡಿಸಿಕೊಂಡು, ಏಕೆಂದರೆ, ಮುಂದೆ ಮೈಸೂರು ಬರುತ್ತದೆ, ಮಂಗಳೂರು ಬರುತ್ತದೆ, ಹುಬ್ಬಳ್ಳಿ ಧಾರವಾಡ್ ಬರುತ್ತದೆ, ಗುಲ್ಬರ್ಗಾ ಬರುತ್ತದೆ, ಈ ರೀತಿ ಬರಬಹುದು. ಅಲ್ಲಲ್ಲಿ ಒಂದು ಪ್ರಾಧಿಕಾರ ಮಾಡುವುದಕ್ಕಿಂತಲೂ ಇದರ ವ್ಯಾಪ್ತಿಯನ್ನು ವಿಶಾಲಗೊಳಿಸಿ, ಇಡೀ ರಾಜ್ಯವನ್ನು ತಂದು, ಎಲ್ಲೆಲ್ಲಿ ಯಾವ್ಯಾವ ಭಾಗಗಳನ್ನು ಅಭಿವೃದ್ಧಿಪಡಿಸಬೇಕು ಎಂದು ಇದೆ, ಈ ರೀತಿ ಸೌಲಭ್ಯಗಳನ್ನು ಕೊಡಬೇಕಾಗಿದೆ, ಅದನ್ನು ಕೊಡಬಹುದು. ಆದರೆ ಕಾನೂನು ಅನ್ನು ಮಾಡುವಾಗ ಸೀಮಿತವಾಗಿ ಮಾಡುವುದು ಸರಿಯಲ್ಲ, ಮಾನ್ಯ ಸಚಿವರು ಇದಕ್ಕೆಲ್ಲಾ ಉತ್ತರಿಸುತ್ತಾರೆಂದು ಭಾವಿಸಿಕೊಂಡಿದ್ದೇನೆ.

ಶ್ರೀ ಡಿ.ಬಿ. ಇನಾಂದಾರ್ (ಮಾಹಿತಿ, ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು) : ಮಾನ್ಯ ಛೇರ್ಮನ್ ಅವರೇ, ಮೊದಲನೇಯದಾಗಿ ಇದರ ಉದ್ದೇಶವನ್ನು ಹೇಳುವುದಾದರೆ, ಈ ಒಂದು ಐ.ಟಿ ಕಾರಿಡಾರ್, ಐ.ಟಿ. ಬೆಳವಣಿಗೆ ಯಾವ ದೃಷ್ಟಿಯಿಂದ ಆಗಿದೆ ಎಂದು ಮೊದಲು ನಾವು ನೆನಪು ಮಾಡಿಕೊಳ್ಳಬೇಕಾಗುತ್ತದೆ. ಸನ್ಮಾನ್ಯ ಸಿಂಧ್ಯಾರವರು, ಸನ್ಮಾನ್ಯ ಜೆ.ಹೆಚ್. ಪಾಟೀಲ್‌ರವರು ಇರತಕ್ಕಂಥ ಸಂದರ್ಭದಲ್ಲಿ ಐ.ಟಿ.ಪಿ.ಎಲ್. ಅನ್ನು ತಂದರು. ಸಿಂಗಾಪುರ್ ದಿಂದ, ಐಟಿಪಿಎಲ್, Where there is private and public partership,ಸರ್ಕಾರದ ಷೇರು ಕೂಡ ಇದೆ, ಸಿಂಗಾಪುರ್ ಕಂಪನಿ ಹಾಗೂ ಟಾಟಾ ಅವರ ಷೇರು ಇದೆ. ಅಲ್ಲಿ ಸುಮಾರು ಇವತ್ತು more than 2.5 million sq.ft of office space has been built.ಅಲ್ಲಿ 50 ಏಕರೆ ಸತ್ಯ ಸಾಯಿ ಆಸ್ಪತ್ರೆಗೆ ಕೊಟ್ಟಿದ್ದಾರೆಂದು ಹೇಳಿದರು. ಅಲ್ಲಿ ವೈಟ್‌ಫೀಲ್ಡ್‌ಗೆ ಹೋಗತಕ್ಕಂಥ ದಾರಿಯಲ್ಲಿ ತಾವು ನೋಡಬಹುದು, ಉತ್ತಮವಾದಂಥ world-class facility provided by KIADB.ಆ ರಸ್ತೆ ಏನು ಮಾಡಿದಿರಲ್ಲಾ ಅದರ ಪಕ್ಕದಲ್ಲಿ ಮತ್ತೆ ಡೆವಲಪ್‌ಮೆಂಟ್ ಏನಾಗುತ್ತಿದೆ ಅದರ ಬಗ್ಗೆ ತಾವು ವಿಚಾರ ಮಾಡಬೇಕಾಗುತ್ತದೆ. We want to go to a world-class facility, but we are driving through a

slum.ಎನ್ನುವಂಥ ದೃಷ್ಟಿಯಿಂದ, ಇದರ ಉದ್ದೇಶ ಏನೆಂದರೆ, ಮೂಲಭೂತವಾದಂಥ ಉದ್ದೇಶ ಏನೆಂದರೆ, ಆಥಾರಿಟಿ ಎಂದರೆ, ಈಗಿರತಕ್ಕಂಥ ಡೆವಲೆಪ್‌ಮೆಂಟ್ ಇದ್ದದ್ದನ್ನು ನಾವು ಗಮನ ದಲ್ಲಿಟ್ಟುಕೊಂಡು, Zurang Corporation, the people who built Singapore,ಅವರು ಕನ್ಸಲ್ಟೆಂಟ್ ಇದ್ದಾರೆ ಹೊರತಾಗಿ ಅವರದೇನೂ ಕಂಟ್ರ್ಯಾಕ್ಟರ್ಸ್ ಏನೂ ಇಲ್ಲ. ಅವರ ಕಡೆಯಿಂದ ಕೇವಲ ಪ್ಲಾನಿಂಗ್ ಮಾಡಿಸಿದ್ದೇವೆ. BATF ಐ.ಟಿ.ಟಾಸ್ಕ್‌ಫೋರ್ಸ್‌ದವರು 2000ದ ಮಾಹಿತಿ ಪಾಲಿಸಿ ಯಲ್ಲಿ ನಾವು ಇದನ್ನು ಡಿಕ್ಲೆರೇಷನ್ ಕೊಟ್ಟಿದ್ದೇವೆ. ಎಲೆಕ್ಟ್ರಾನಿಕ್ ಸಿಟಿ ಹತ್ತಿರ ಒಂದು ಐ.ಟಿ.ಪಾರ್ಕ್ ಆಗಿದೆ, ಮತ್ತು ವೈಟ್‌ಫೀಲ್ಡ್ ಹತ್ತಿರ, ಈ ಒಂದು ಕಾರಿಡಾರ್ ಏನು ಇದೆ, ಈ ಕಾರಿಡಾರ್‌ನಲ್ಲಿ ಬೆಳೆವಣಿಗೆ ಆಗತಕ್ಕಂಥ ವಿಚಾರ ಐ.ಟಿ. ಕಂಪನಿಗಳದ್ದು ಇದೆ. this Authority they say this whole land is going to be used in 20-22. Government is not going to acquire 137 sq.Kms of area and develop it and sell or become a real estate agent in this 20-22 ವರೆಗೆ ಈ ಒಂದು ಏರಿಯಾ ಡೆವಲೆಪ್‌ಮೆಂಟ್ ಮಾಡಬೇಕು, ಪ್ಲಾನ್ ಡೆವಲೆಪ್‌ಮೆಂಟ್ ಆಗಬೇಕು ಎನ್ನುವ ದೃಷ್ಟಿಯಿಂದ ಇಲ್ಲಿ ಐ.ಟಿ. ಕಂಪನಿಗಳಿಗೆ ಬೇಕಾಗುವಂಥ ಸೌಲಭ್ಯಗಳನ್ನು ಕೊಡತಕ್ಕಂಥದ್ದು, ಅಲ್ಲಿ ಸೌಕರ್ಯಗಳನ್ನು ಕೊಡಲಿಕ್ಕೆ ನಾವು ಈ ಒಂದು ಆ್ಯಕ್ಟ್ ಅನ್ನು ತಂದಿದ್ದೇವೆ. ಏಕೆ ಇದನ್ನು ಆ್ಯಕ್ಟ್ ತಂದಿರಿ? ಲೋಕಲ್ ಪಂಚಾಯತ್, ಲೋಕಲ್ ಮುನಿಸಿಪಾಲಿಟಿ, ಯಾರಾದರು ಪರ್ಮಿಷನ್ ಕೊಟ್ಟುಕೊಂಡು ಹೊರಟು ಬಿಟ್ಟರೆ ನಮ್ಮಲ್ಲಿ ಇರತಕ್ಕಂಥ ಅಥಾರಿಟಿಗೆ ಕೊಟ್ಟರೆ ಇದು ಅನ್ ಪ್ಲಾನ್ ಡೆವಲೆಮೆಂಟ್ ಆಗುತ್ತದೆ, ಇದು ಕಟ್ಟು ಹೋಗುತ್ತದೆ ಎನ್ನುವ ದೃಷ್ಟಿಯಿಂದ We want this entire area to come under one authority ಎನ್ನುವ ದೃಷ್ಟಿಯಿಂದ ಈ ಆ್ಯಕ್ಟ್‌ನ್ನು ತಂದಿದ್ದೇವೆ. ಮತ್ತೇನೂ ಉದ್ದೇಶ, ರಿಯಲ್ ಎಸ್ಟೇಟ್ ಬಿಜಿನೆಸ್‌ಗೋಸ್ಕರ ಇದನ್ನು ತಂದಿಲ್ಲ. ಮಾತನಾಡತಕ್ಕಂಥ ಸಂದರ್ಭದಲ್ಲಿ ಕೆ.ಐ.ಎ.ಡಿ.ಬಿ ಅಥವಾ ಬಿ.ಡಿ.ಎ ಮಾಡಬಹುದಾಗಿತ್ತು ಎಂದು ಮಾನ್ಯ ಸುರೇಶ್ ಕುಮಾರ್ ರವರು ಹೇಳಿದರು. ಇದರಲ್ಲಿ ಕೆ.ಎ.ಐ.ಡಿ.ಬಿ.ನವರು ಇಂಡ್‌ಸ್ಟ್ರೀಯಲ್ ಏರಿಯಾವನ್ನು ಆಕ್ವೈರ್ ಮಾಡಬಹುದು ಬಿಡಿಎ ರೆಸಿಡೆನ್ಸಿಯಲ್ ಸೈಟ್ಸ್ ಅಕ್ವೈರ್ ಮಾಡಬಹುದು. ಇದರಲ್ಲಿ ರೂರಲ್ ಏರಿಯಸ್ ಕೂಡ ಬರುತ್ತವೆ. There are some rural areas which are part of this. ಆ ದೃಷ್ಟಿಯಿಂದ ಲ್ಯಾಂಡ್ ಡೆವಲೆಪ್‌ಮೆಂಟ್ ಇಲ್ಲಿಯೇ ಆಗಬೇಕು ಇರತಕ್ಕಂಥ ಕಾಮನ್ ಸೌಲಭ್ಯಗಳು ಲೈಕ್ ಇನ್ಫ್ರಾಸ್ಟ್ರಕ್ಚರ್ ರೋಡ್ಸ್, ಕಾಮಾನ್ ಸೌಲಭ್ಯಗಳನ್ನು ಸರ್ಕಾರದಿಂದ ಮಾಡಬೇಕು, ಉಳಿದಂಥವುಗಳನ್ನು, there are planned areas where there will be place of work, ರೆಷಿಡೆನ್ಸಿಯಲ್ ಯಾವುದು ಆಗಬೇಕು? ಕಮರ್ಷಿಯಲ್ ಯಾವುದು ಆಗಬೇಕು? ರಿಕ್ರಿಯೇಷನ್ ಯಾವುದು ಆಗಬೇಕು ಎನ್ನುವಂಥ ದೃಷ್ಟಿಯಿಂದ ಇದನ್ನು ಪ್ಲಾನಿಂಗ್ ಮಾಡಿಸಿದ್ದೇವೆಯೇ ಹೊರತಾಗಿ ಇದನ್ನು ಬಿಟ್ಟು ಬೇರೆ ರೀತಿಯಿಂದ ಏನೂ ಮಾಡಿಲ್ಲ. ಇದನ್ನು ಏನು ನಾವು ಡಿ-ನೋಟಿಫೈ ಮಾಡುವ ಉದ್ದೇಶದಿಂದ ಇದನ್ನು ಏನೂ ಮಾಡುತ್ತಿಲ್ಲ. ಅಥವಾ 137 ಸ್ಕವೇರ್ ಕಿಲೋಮೀಟರ್ ಅನ್ನು ಅಕ್ವೈರ್ ಮಾಡುತ್ತೇವೆ ಎಂದು ತಾವು ದಯಮಾಡಿ ತಿಳಿದುಕೊಳ್ಳಬಾರದು. ಇದು ಐ.ಟಿ. ಕಾರಿಡಾರ್ ಎಂದು ಐಡೆಂಟಿಫೈ ಆದರೆ ಮಾತ್ರ...ಸೆಕ್ಷನ್ 12 ಕೇಳಿದಿರಲ್ಲವೆ This will supersede Town and Country Planning Act/only after the areas/are identified as IT Corridor.

ಶ್ರೀ ಎಸ್. ಸುರೇಶ್ ಕುಮಾರ್ : ಮತ್ತೊಂದು ಸಲ ಅದರ ಬಗ್ಗೆ ಹೇಳಿ.

ಶ್ರೀ ಡಿ.ಬಿ. ಇನಾಂದಾರ್ : ಸನ್ಮಾನ್ಯ ಅಧ್ಯಕ್ಷರೇ. This Bill will supersede the Town and Country Planning Act and BDA only after the areas are identified and notified as IT corridor. The auditors will be specified by the Government. Industrial township status needs be given to take care of the civic functions in the It corridor. Section 29- This type of provisions are there in other Acts like National Highway Authority Act where you can claim for compensation or enhasncement of compensation rather than right of way.ನೀವು ಕೆಪಿಟಿಸಿಎಲ್ ಲೈನ್ ಹಾಕಬೇಕೆಂದರೆ, no one can put a stop.ಎನ್ನುವಂಥ ದೃಷ್ಟಿಯಿಂದ ಪ್ರಾಪರ್ ಪ್ಲಾನ್ ಆಗಬೇಕು, ಅನ್ ಪ್ಲಾನ್ ಡೆವಲೆಪ್‌ಮೆಂಟ್‌ನಿಂದ ಇವತ್ತು ಬೆಂಗಳೂರಿನಲ್ಲಿ.. ಒಂದ್ನಿಮಿಷ..

ಅನ್‌ಪ್ಲಾನ್ ಡೆವಲ್‌ಪ್‌ಮೆಂಟ್‌ನಿಂದಾಗಿ ನಮ್ಮ ಬೆಂಗಳೂರು ಎಷ್ಟೊಂದು ಸುಂದರವಾಗಿ ಇರಬೇಕಾಗಿತ್ತು ಅಷ್ಟು ಆಗಿಲ್ಲ. Regularisation of unplanned layouts has caused lot of damage to the city. ಸುಂದರವಾದಂಥ ನಗರ ಇದರ ಹಿನ್ನೆಲೆ ಇರುವಂಥದ್ದನ್ನು ನಾವು ನೋಡಲಾರದ್ದಕ್ಕೆ ಇವತ್ತು ಇಲ್ಲಿರತಕ್ಕಂಥ ಸೌಲಭ್ಯಗಳನ್ನು ಕೆಡಿಸಿದ್ದೇವೆ. If a planning had been done 30 years back that from Vidhana Soudha centre about 50 KMs radius all around, this is what the development was going to be, ಅಂತ ಮಾಡಿದ್ದಾರೆ today it would have been a different city. Why do we see slums? Why do we see unplanned development? Why do we see narrow roads even in new lay-outs? ಆ ರೀತಿಯಾಗಬಾರದೆಂಬ ದೃಷ್ಟಿಯಿಂದ we want to see that, wherever when I.T companies come, we should see that world class infrastructure is made available to them. ಎನ್ನುವಂಥ ದೃಷ್ಟಿಯಿಂದ ಈ ಒಂದು ಆ್ಯಕ್ಟ್‌ನ್ನು ತಂದಿದ್ದೇವೆ. ಮತ್ತೆ ಇದಕ್ಕೆ ಸಂಬಂಧ ಪಟ್ಟಂತೆ ಒಂದು ಅಥಾರಿಟಿ ಮಾಡುತ್ತೇವೆ. Common facilities will be built by the Government. Whereas the others will be developed by other people. So when we notified this as a public-private partnership, BATF or the I.T. ... ಐ.ಟಿ. ಪಾಲಿಸಿ ಬಗ್ಗೆ ವಿಚಾರ ಮಾಡಿದ್ದೇವೆ. ಮತ್ತೆ ಐ.ಟಿ ಟಾಸ್ಕ್‌ಫೋರ್ಸ್‌ನ ರೆಕಮೆಂಡೇಶನ್ಸ್ ಮೇಲೆ ಇದನ್ನು ಮಾಡುತ್ತಿದ್ದೇವೆ., to keep cost down also. In fact if this whole large area is kept as I.T corridor, real estate prices also will not go up. So that ಇಲ್ಲಿಗೆ ಯಾರು ಬರಬೇಕೆಂದು ಇಚ್ಛೆ ಇರುತ್ತದೆಯೋ ಅಂಥವರಿಗೆ they will get land also at a reasonable price, ಈ ಒಂದು ದೃಷ್ಟಿಯಿಂದ ಇದನ್ನು ಮಾಡುತ್ತಿದ್ದೇವೆ. ಆದ್ದರಿಂದ, ದಯವಿಟ್ಟು ಇದನ್ನು ಪಾಸ್ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಸೋಮಶೇಖರ್ : ಮಾನ್ಯ ಛೇರ್ಮನ್‌ರವರೆ, ಮಾನ್ಯ ಮಂತ್ರಿಯವರು ಇದಕ್ಕೆ ಸಂಬಂಧಪಟ್ಟಂತೆ ವಿವರಣೆಯನ್ನು ಕೊಟ್ಟಿದ್ದಾರೆ. ನಾನು ಈ ಸಂದರ್ಭದಲ್ಲಿ ಹೇಳುವುದೇನೆಂದರೆ,

ಇದು ಅನ್ ಪ್ಲ್ಯಾನ್ಡ್ ಡೆವಲಪ್‌ಮೆಂಟ್ ಆಗದೆ ಕೇವಲ ಪ್ಲ್ಯಾನ್ಡ್ ಡೆವಲಪ್‌ಮೆಂಟ್ ಆಗಬೇಕು. ಮತ್ತೆ ಬಿ.ಟಿ. ಕಂಪನಿಗಳು ಬಂದರೆ ಅವರಿಗೆ ಬೇಕಾಗಿರತಕ್ಕಂಥ ಎಲ್ಲಾ ಸೌಲಭ್ಯಗಳನ್ನು ಒದಗಿಸಿಕೊಡಬೇಕು. ಮತ್ತೆ ಇದರಲ್ಲಿ ರೂರಲ್ ಏರಿಯಾ ಬರುವುದರಿಂದ ಮತ್ತು ಬೇರೆ ಬೇರೆ ವಿಧಿವಿಧಾನಗಳಿರುವುದರಿಂದ ಇದಕ್ಕೆ ಒಂದು ಕಾಮನ್ ಆ್ಯಕ್ಟ್ ಆಗಬೇಕೆಂಬುದು ತಮ್ಮ ಅಭಿಪ್ರಾಯವಾಗಿದೆ. ಆ ಉದ್ದೇಶದ ಬಗ್ಗೆ ನಾನು ಪ್ರಶ್ನೆ ಮಾಡುತ್ತಿಲ್ಲ. ಇವತ್ತಿನದಿವಸ ಬಿಡದಿ ಅಥವಾ ಜಿಗಣಿ ಇರಬಹುದು, ಇಲ್ಲಿಯೂ ಕೂಡ ಕೆ.ಐ.ಎ.ಡಿ.ಬಿ. ಆಪರೇಷನ್ ಅಲ್ಲೂ ಇದೆ.

ಶ್ರೀ ಡಿ.ಬಿ. ಇನಾಂದಾರ್ : ಮಾನ್ಯ ಸೋಮಶೇಖರ್‌ರವರೆ, ಅಲ್ಲಿ ಇಂಡಸ್ಟ್ರೀಯಲ್ ಏರಿಯಾವನ್ನು ಡೆವಲಪ್ ಮಾಡುತ್ತಿದ್ದಾರೆ. ಆದರೆ, ಇಲ್ಲಿ This is a comprehesive township that is going to be developmented where there will be I.T companies working, where they will have residential areas, where there will be commercial areas, there will be hospitals, there will be schools, colleges, recreational facilities and parks, everything will be there.

ಶ್ರೀ ಬಿ. ಸೋಮಶೇಖರ್ : ಸನ್ಮಾನ್ಯ ಸಭಾಧ್ಯಕ್ಷರೇ, If you see Sections 29,30 and 31. Section 30 says Levy, assessment and recovery of betterment tax. It is the whims and fancies of the authority, that is governing the law.

ಶ್ರೀ ಡಿ.ಬಿ. ಇನಾಂದಾರ್ : ಇನ್‌ಜಂಕ್ಷನ್ ತೆಗೆದುಕೊಳ್ಳುವುದಕ್ಕೆ ಹೋಗಬಾರದು. ಆದರೆ, Under the authority, you can go to the High Court to get legal remedies. That cannot be barred. Fundamental rights cannot be barred; you can go to the High Court.

ಶ್ರೀ ಬಿ. ಸೋಮಶೇಖರ್ : ಮಾನ್ಯ ಛೇರ್ಮನ್‌ರವರೆ, ಸೆಕ್ಷನ್ 29, 30 ಮತ್ತು 31 ತೆಗೆದು ಹಾಕಿದರೆ ನಾವು ಅಪ್ರೋವಲ್ ಮಾಡಿಕೊಡುತ್ತೇವೆ. ಇದರಲ್ಲಿ ಏನಿದೆ ಎಂದರೆ..

SRI D.B. INAMDAR : Those who are lawyers they know it and you can go to the High Court. In case you have a problem, you can defenitely go to the High Court, to get the remedy.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ನಾವು ನೀವು ಮಾಡಿದಂಥ ಕಾನೂನನ್ನು ಮತ್ತೆ ಹೈ ಕೋರ್ಟ್‌ಗೆ ಹೋಗಿ ಚಾಲೆಂಜ್ ಮಾಡುವುದಕ್ಕಿಂಥ ಇಲ್ಲಿಯೇ ಆ ಸೆಕ್ಷೆನ್ ತೆಗೆದು ಹಾಕುವುದು ಒಳ್ಳೆಯದು.

ಶ್ರೀ ಬಿ. ಸೋಮಶೇಖರ್ : ಅದನ್ನೂ ಕೂಡ ಮಾಡುವುದಕ್ಕೆ ಅವರು ತಯಾರಿಲ್ಲ.

ಶ್ರೀ ಡಿ.ಬಿ. ಇನಾಂದಾರ್ : ಪ್ರೋಸೆಸ್ ಮಾಡುವುದಕ್ಕೆ ಕಷ್ಟವಾಗುತ್ತದೆ ಎಂಬ ದೃಷ್ಟಿಯಿಂದ ಹೇಳುತ್ತಿದ್ದೇನೆ. ಮತ್ತೆ ಹೈಕೋರ್ಟ್‌ಗೆ ಹೋಗುವುದನ್ನು ತಡೆಯುವುದಕ್ಕೆ ಯಾರಿಗೂ ಸಾಧ್ಯವಿಲ್ಲ. ಹೈಕೋರ್ಟ್‌ಗೆ ಹೋಗುವುದಕ್ಕೆ ಅವಕಾಶ ಇದೆ. Injunction etc., let us not be dragged by this thing.

ಶ್ರೀ ಕೆ.ಬಿ. ಮಲ್ಲಿಕಾರ್ಜುನ್ : ಈ ವಿಷಯವನ್ನು ಕಾನೂನಲ್ಲಿಯೇ ಹೇಳಿದರೆ ಒಳ್ಳೆಯದು. ಸೆಕ್ಷನ್ 31ರಲ್ಲಿ ಏನು ಹೇಳಿದ್ದಾರೆಂದರೆ,....

ಶ್ರೀ ಡಿ.ಬಿ. ಇನಾಂದಾರ್ : ಸನ್ಮಾನ್ಯ ಅಧ್ಯಕ್ಷರೇ. You cannot take away the fundamental rights. ಹೈಕೋರ್ಟ್‌ಗೆ ಹೋಗಿ ಫೈಟ್ ಮಾಡುವುದಕ್ಕೆ ಯಾರಿಗಾದರೂ ಅವಕಾಶ ಇದ್ದೇ ಇರುತ್ತದೆ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ್ : ಮಾನ್ಯ ಛೇರ್ಮನ್‌ರವರ, ಇಲ್ಲಿ ಏನು ಹೇಳಿದ್ದಾರೆಂದರೆ,ಯಾವುದೇ ನ್ಯಾಯಾಲಯವು ಇದಕ್ಕೆ ನಿರ್ಬಂಧ ನೀಡತಕ್ಕದ್ದಲ್ಲ ಎಂದು ಹೇಳಿದ್ದಾರೆ. ಯಾವುದೇ ನ್ಯಾಯಾಲಯವೆಂದರೆ ಹೈಕೋರ್ಟ್‌ನ್ನು ಬಿಟ್ಟು ಈ ರೀತಿ ಹೇಳಿದ್ದಾರೆಯೇ? ಇಂದೊಂದು ಕಾಂಟ್ರವರ್ಸಿಯಾಗಿದೆ. ಸಬ್ ಸೆಕ್ಷನ್ 2ರಲ್ಲಿ ಏನು ಹೇಳುತ್ತಾರೆಂದರೆ, ಕ್ರಮದ ವಿರುದ್ಧ ಪೂರ್ವಾನುಮತಿ ಇಲ್ಲದೆ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಕಾನೂನು ವ್ಯವಹರಣೆಯನ್ನು ಹೂಡಲು ಅವಕಾಶವಿರತಕ್ಕದ್ದಲ್ಲ ಎಂದು ಹೇಳುತ್ತಾರೆ.

ಶ್ರೀ ಡಿ.ಬಿ. ಇನಾಂದಾರ್ : ಆರ್ಟಿಕಲ್ಸ್ 136 ಪ್ರಕಾರ ಹೈಕೋರ್ಟ್‌ಗೆ ಹೋಗುವುದಕ್ಕೆ ಯಾರಿಗೂ ಕೂಡ ಬಂಧನವಿಲ್ಲ.

ಛೇರ್ಮನ್ : ಮಾನ್ಯ ಇನಾಂದಾರ್‌ರವರೇ, ಮಾನ್ಯ ಸದಸ್ಯರು ಮೊದಲು ಮಾತನಾಡಲಿ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ್ : ಮಾನ್ಯ ಛೇರ್ಮನ್‌ರವರೆ, ಎರಡು ವಿಷಯದ ಬಗ್ಗೆ ಕ್ಲಾರಿಫಿಕೇಶನ್ ಆಗಬೇಕಾಗಿದೆ. ಮೊದಲನೆಯದಾಗಿ, ಸ್ಟೇ ಆರ್ಡರ್ ತೆಗೆದುಕೊಳ್ಳುವುದಕ್ಕೆ ಹೈಕೋರ್ಟ್ ಅಥವಾ ಯಾವುದೇ ಕೋರ್ಟ್‌ಗೆ ಅವಕಾಶ ಇಲ್ಲವೆಂದು ಹೇಳುತ್ತಾರೆ. ಹಾಗೆಯೇ, ಕೋರ್ಟ್‌ಗೆ ಹೋಗಬಾರದೆಂದು ಮತ್ತು ಸರ್ಕಾರದಿಂದ ಅನುಮತಿ ತೆಗೆದು ಕೊಳ್ಳಬೇಕೆಂದು ಹೇಳುತ್ತಾರೆ. ಆದ್ದರಿಂದ, ನಾನು ಈಗ ಪ್ರಸ್ತಾಪಮಾಡತಕ್ಕಂಥ ಮೂರು ಕ್ಲಾರಿಫಿಕೇಶನ್‌ಗೆ ಮಾನ್ಯ ಸಚಿವರು ಉತ್ತರ ಕೊಡಬೇಕಾಗಿದೆ. ಮೊದಲನೆಯದು ಏನೆಂದರೆ, ಕೋರ್ಟ್ ವ್ಯಾಪ್ತಿಯಿಂದ ತೆಗೆದಿರುವುದು ಏತಕ್ಕೆ? ಎರಡನೆಯದಾಗಿ, ಅನುಮತಿ ಎಂದರೆ, ಯಾವ ಸರ್ಕಾರದ ಪೂರ್ವಾನುಮತಿಯನ್ನು ಯಾರ ವಿರುದ್ಧ ನಾವು ತೆಗೆದು ಕೊಳ್ಳಬೇಕು? ಅಂದರೆ, ಸರ್ಕಾರದ ವಿರುದ್ಧವೇ ತೆಗೆದುಕೊಳ್ಳಬೇಕೆ? ಇದಕ್ಕೆ ಮುಖ್ಯಮಂತ್ರಿಯವರೇ ಛೇರ್ಮನ್ ಆಗಿರುತ್ತಾರೆ. ಆದ್ದರಿಂದ ಮುಖ್ಯಮಂತ್ರಿಯವರು ತೆಗೆದುಕೊಂಡಿರತಕ್ಕಂಥ ನಿರ್ಣಯಕ್ಕೆ ದಾವೆ ಹೂಡಿಕೊಳ್ಳಿ ಎಂದು ಯಾವುದೇ ಸರ್ಕಾರ ಅನುಮತಿ ಕೊಡುತ್ತದೆಯೆ? ಮತ್ತೆ ಮೂರನೆಯ ಪ್ರಶ್ನೆ ಏನೆಂದರೆ, ಸದ್ಭಾವನೆ ಎಂದರೇನು? ಇದಕ್ಕೆ ಸಂಬಂಧಪಟ್ಟಂತೆ ಸ್ಪಷ್ಟನೆ ನೀಡಬೇಕು. ಸದ್ಭಾವನೆ ಎನ್ನತಕ್ಕಂಥದ್ದನ್ನು ತಾವು ಹೇಳದೆ ಮಾಡಿದರೆ ಇದು ಪೂರ್ಣವಾಗಿ ನೋಟಿಫಿಕೇಶನ್ ಮತ್ತು ಡೀ-ನೋಟಿಫಿಕೇಶನ್‌ಗೆ ಫ್ರೀ ಹ್ಯಾಂಡ್ ಕೊಟ್ಟಂತಾಗುತ್ತದೆ. ಇದರಿಂದ ಯಾರು ಏನು ಬೇಕಾದರೂ ಮಾಡಿ ಕೊಳ್ಳಬಹುದಾಗಿದೆ. ಕರ್ನಾಟಕ ರಾಜ್ಯದಲ್ಲಿ ಈಗಾಗಲೇ ನೋಟಿಫಿಕೇಶನ್ ಮತ್ತು ಡೀ-ನೋಟಿಫಿಕೇಶನ್‌ಗೆ ಸಂಬಂಧಪಟ್ಟಂತೆ ದೊಡ್ಡ ಹಗರಣಗಳಾಗಿವೆ. ದಯಮಾಡಿ ಸದ್ಭಾವನೆ ಬಗ್ಗೆ ಮಾನ್ಯ ಸಚಿವರು ಸ್ಪಷ್ಟಪಡಿಸಬೇಕು. ಸೆಕ್ಷನ್ 2 ಅಥವಾ 3 ರಲ್ಲಿ ಇದರ ಬಗ್ಗೆ ಎಕ್ಸ್‌ಪ್ಲೈನ್ ಮಾಡಿ. ತಾವು ಗಣಕಯಂತ್ರ ಮತ್ತು ಇನ್ನು ಏನೇನು ಹೇಳುತ್ತೀರೋ ಹೇಳಿ. ಒಟ್ಟಿನಲ್ಲಿ ಸದ್ಭಾವನೆ ಎಂದರೇನು ಎನ್ನತಕ್ಕಂಥದ್ದನ್ನು ಹೇಳಬೇಕು.

ಶ್ರೀ ಡಿ.ಬಿ. ಇನಾಂದಾರ್ : ಹೈಕೋರ್ಟ್‌ಗೆ ಹೋಗುವುದಕ್ಕೆ ಯಾರಿಗೂ ಕೂಡ ಬಂಧನವಿಲ್ಲ. ಯಾವುದೇ ಫಂಡಮೆಂಟಲ್ ರೈಟ್ಸ್‌ನ್ನು ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ಆದ್ದರಿಂದ You can definitely go and approach the High Court. Take for example National Highway Authority Mr.Suresh Kumar....

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಸಚಿವರು ಹೇಳುವುದು ಒಂದು. ಆದರೆ ಇಲ್ಲಿ ಇರತಕ್ಕಂಥದ್ದೇ ಒಂದು. Bar of suits: No order passed or proceedings taken by the Authority or an officer of the Authority under this Act, shall be called in question in any court. Any court includes High Court. In any suit...

SRI D.B. INAMDAR : You cannot take away the fundamental rights.

ಶ್ರೀ ಎಸ್. ಸುರೇಶ್ ಕುಮಾರ್ : ನೀವು ಹೇಳತಕ್ಕಂಥದ್ದು ಬೇರೆ ಪ್ರಶ್ನೆ. ಆದರೆ, ನೀವು ಇದರಲ್ಲಿ ಅದನ್ನು ಕಿತ್ತುಕೊಳ್ಳುತ್ತಿದ್ದೀರಿ.

SRI D.B. INAMDAR : In the Land Reforms Act, even though it is in the 7th schedule, you can still go to the High Court.

SRI S. SURESH KUMAR : Apparently, through this bill, through this act, through these two sections 29 & 31, you are taking away the fundamental right of a citizen.

SRI D.B. INAMDAR : No. you are not taking the fundamental right. You cannot take away.

ಶ್ರೀ ಎಸ್. ಸುರೇಶ್ ಕುಮಾರ್ : ಹಾಗಾದರೆ, ಇದರಲ್ಲಿ ಏಕೆ ಹಾಕಿದ್ದೀರಿ ಮತ್ತೆ ಮಾನ್ಯ ಮಲ್ಲಿಕಾರ್ಜುನ್‌ರವರು ಈಗಾಗಲೇ ಪ್ರಸ್ತಾಪಮಾಡಿರುವಂತೆ ಸದ್ಭಾವನೆಯನ್ನು (ಗುಡ್ ಫೇತ್) ಡಿಸೈಡ್ ಮಾಡುವವರು ಯಾರು? who will decide?

SRI D.B. INAMDAR : In the Land Reforms Act. even though there is a ban, you still go to the High Court.

ಶ್ರೀ ಬಿ. ಸೋಮಶೇಖರ್ : ಮಾನ್ಯ ಛೇರ್ಮನ್‌ರವರೆ, ಮಾನ್ಯ ಮಂತ್ರಿಗಳು ಏನು ಹೇಳುತ್ತಿದ್ದಾರೆಂದರೆ, If anyone violates fundamental right, a person can approach the High Court or Supreme Court under Article 226. Here, If there is a violation of statutory rights, one can go to the court. Here in this case, even if there is a violation of statutory right, we cannot go to the court. That is the provision in this act.

ಈ ಬಿಲ್‌ನ್ನು ಮೊದಲು ಕಾನೂನು ಇಲಾಖೆಯವರು ಸ್ಕ್ರುಟಿನಿ ಮಾಡಿರುತ್ತಾರೆ. ಆದ್ದರಿಂದ ಅವರು ಯಾವರೀತಿ ಸ್ಕ್ರುಟಿನಿ ಮಾಡಿದ್ದಾರೆ ಎನ್ನತಕ್ಕಂಥ ಫೈಲ್‌ನ್ನು ತರಿಸಿ. ಬಹುಶ: ಕೆ.ಐ.ಎ.ಡಿ.ಬಿ. ಮತ್ತು ಬಿ.ಡಿ.ಎ. ಸಂಸ್ಥೆಗಳಲ್ಲಿ ಇಂಥ ಪ್ರಾವಿಜನ್ ಇದ್ದರೆ ಇದನ್ನು ನಾವು ಕೊಡೋಣ. ಮತ್ತೆ, ಲ್ಯಾಂಡ್ ಅಕ್ವಿಜೇಷನ್ ಅಥವಾ ಲೆವಿ ಆಫ್ ಅಸೆಸ್‌ಮೆಂಟ್ ಅಥವಾ ಬೆಟರ್‌ಮೆಂಟ್ ಟ್ಯಾಕ್ಸ್‌ಗಳನ್ನು whims and fancies ಪ್ರಕಾರ ಅಧಿಕಾರಿಗಳು ಫೈನ್ ಹಾಕಬಹುದು. ಇದನ್ನು ಪ್ರಶ್ನೆಮಾಡುವುದಕ್ಕೂ ಕೂಡ ಇದರಿಂದ ಆಗುವುದಿಲ್ಲ. ಸರ್ಕಾರ ಮಾಡಿರತಕ್ಕಂಥ ತಪ್ಪಿಗೆ ಮತ್ತೆ ಸರ್ಕಾರದಿಂದಲೇ ಪರ್ಮಿಷನ್ ತೆಗೆದುಕೊಂಡು ಕೋರ್ಟ್‌ಗೆ ಹೋಗಬಹುದು. ಇವತ್ತಿನದಿವಸ ಸರ್ಕಾರ ಮಾಡಿರತಕ್ಕಂಥ ತಪ್ಪಿಗೆ

ಪ್ರಶ್ನೆ ಮಾಡುವುದಕ್ಕೆ ಸರ್ಕಾರ ಪರ್ಮಿಷನ್ ಕೊಡುತ್ತದೆಯೆ? ಇದಕ್ಕೆ ಯಾರೂ ಕೊಡುವುದಿಲ್ಲ. ಆದ್ದರಿಂದ ಇದರಲ್ಲಿರತಕ್ಕಂಥ ಸೆಕ್ಷನ್ 29, 30 ಮತ್ತು 31, it is against the principles of statutory rights, natural justice. ಕೋರ್ಟ್‌ಗೆ ಹೋಗತಕ್ಕಂಥ ಹಕ್ಕನ್ನೂ ಕೂಡ ಈ ಕಾನೂನಿನಲ್ಲಿ ತಾವು ತೆಗೆದುಹಾಕಿದ್ದೀರಿ. ಆದ್ದರಿಂದ ಇದನ್ನು ಮಾಲಾಫೈಡ್ ಇಂಟೆನ್ಷನ್‌ನಿಂದ ತಂದಿರತಕ್ಕಂಥ ಪ್ರಾವಿಜನ್ ಆಗಿದೆ. ನಾನು ಈಗಾಗಲೇ ಹೇಳಿರತಕ್ಕಂಥ ಸೆಕ್ಷನ್‌ಗಳನ್ನು ತೆಗೆಯದೇ ಇದ್ದರೆ ಈ ಬಿಲ್‌ನ್ನು ನಾವು ಒಪ್ಪುವುದಕ್ಕೆ ಸಾಧ್ಯವಿಲ್ಲ. ಖಂಡಿತವಾಗಿ ಇದರಲ್ಲಿ ನಿಮ್ಮದು ಏನೊಂದು ದುರುದ್ದೇಶ ಇದೆ ಎಂದು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಏನೊಂದು ಉದ್ದೇಶ ಇಟ್ಟುಕೊಂಡು ಇದನ್ನು ತಂದಿದ್ದೀರಿ. ಆದರೆ ಈ ಮೂರು ಪ್ರಾವಿಜನ್ ತೆಗೆದು ಹಾಕಿದರೆ ನಿಮ್ಮ ಉದ್ದೇಶ ಏನೂ ಕೆಡುವುದಿಲ್ಲ. Your purpose will be served, even if you delete these provisions. Tell me in what way these provision will come in the way of...

ಶ್ರೀ ಡಿ.ಬಿ. ಇನಾಂದಾರ್ : ಮಾನ್ಯ ಛೇರ್ಮನ್‌ರವರೆ, ನ್ಯಾಷನಲ್ ಹೈವೆ ಅಥಾರಿಟಿ ಆಕ್ಟ್...

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಸಚಿವರು ಈ ವಿಷಯವನ್ನು ಬಿಟ್ಟು ನ್ಯಾಷನಲ್ ಹೈವೇಗೆ ಏಕೆ ಹೋಗುತ್ತಿದ್ದಾರೆ?

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಛೇರ್ಮನ್‌ರೆ, ದಯವಿಟ್ಟು ನೀವು ಕುಳಿತುಕೊಳ್ಳಿ ನೀವು ಎರಡು ಉದಾಹರಣೆಯನ್ನು ಕೊಡುತ್ತಿದ್ದೀರಿ ಕೆಪಿಟಿಸಿಎಲ್ ಲೈನ್ ಹಾಕುವುದಕ್ಕೆ ಕಂಬಗಳನ್ನು ನೆಡುವುದಕ್ಕೆ ನೀವು ಕೋರ್ಟಿಗೆ ಹೋಗುವುದಕ್ಕಾಗುವುದಿಲ್ಲವೆಂದು ಹುಚ್ಚರು ಕೋರ್ಟಿಗೆ ಹೋಗುತ್ತಾರೆ ಅಷ್ಟೆ ನ್ಯಾಷನಲ್ ಹೈವೆನಲ್ಲಿ ಇರತಕ್ಕಂಥ ರೋಡ್‌ನ್ನು ವೈಡನ್ ಮಾಡತಕ್ಕಂಥ ಸಂದರ್ಭದಲ್ಲಿ ಕೋರ್ಟಿಗೆ ಹೋಗುವುದಕ್ಕಾಗುವುದಿಲ್ಲ ಎನ್ನುವುದರ ಬಗ್ಗೆ ಇವರು ಪ್ರಾವಿಷನ್ ಹೇಳಿದ್ದಾರೆ. ಮಾನ್ಯ ಶಿವಶಂಕರರೆಡ್ಡಿಯವರು ಇದರಲ್ಲಿ ಅರ್ಥಮಾಡಿ ಕೊಳ್ಳಬೇಕು. 135 ಸ್ಕ್ವೆಯರ್ ಕಿಲೋಮೀಟರ್ ಜಾಗವನ್ನು ಇವರು ಇಲ್ಲಿ ಆಕ್ರಮಿಸಿ ಕೊಳ್ಳುತ್ತಿರುವುದು, 10, 20, 30 ಎಕರೆ ಆದರೆ ಪರವಾಗಿಲ್ಲ. ಅದರ ಮೇಲೆ ಯಾರಾದರು ರೈತರು ಕೋರ್ಟಿಗೆ ಹೋಗುವಂತಿಲ್ಲ, see the whole question is, ಕೋರ್ಟಿಗೆ ಹೋಗುವುದಕ್ಕೆ ನೀವು ಅಥಾರಿಟಿ ಕೊಡಿ, ಮಾನ್ಯ ಇನಾಂದಾರ್‌ರವರೆ, ನಾನು ಹೇಳುತ್ತೇನೆ ಕೇಳಿ, I don't find any malafide intention from your side. But definitely this has not been properly legally scrutinised by the Law Department. ನನಗೆ ಗೊತ್ತಿದೆ ಬಿಲ್‌ನ್ನು ಇಂಟ್ರಡ್ಯೂಸ್ ಮಾಡಬೇಕಾದರೆ ಲಾ ಡಿಪಾರ್ಟ್‌ಮೆಂಟ್ ನೋಡಬೇಕು, ಅದು ಆದಮೇಲೆ ಕ್ಯಾಬಿನೆಟ್‌ಗೆ ಬರಬೇಕು, I don't think this has been scrutinised and I will tell you. even if you pass this, ನಿಮಗೆ ಮೆಜಾರಿಟಿ ಇದೆ, ಕೊನೆಯ ದಿವಸ ನಾವು ಧರಣಿ ಮಾಡುತ್ತೇವೆ ನೀವು ಬಿಲ್‌ನ್ನು ಪಾಸು ಮಾಡಿಕೊಳ್ಳುತ್ತೀರಿ ಮಾನ್ಯ ಅಧ್ಯಕ್ಷರೆ, ಇದು ಏನಾಗುತ್ತದೆಂದರೆ ಇದು ಕೋರ್ಟ್ ಮುಂದೆ ನಿಲ್ಲುವುದಿಲ್ಲ. We are going to question this

ಶ್ರೀ ಡಿ.ಬಿ. ಇನಾಂದಾರ್ : ಇದು ಅದರ್ ಬಿಡಿಎ, ಎಕ್ಸೈಸ್, ಕೋಆಪರೇಟಿವ್ ಆಕ್ಟ್‌ನಲ್ಲಿ ಇದು ಇದೆ.

ಶ್ರೀ ಎಸ್. ಸುರೇಶ್ ಕುಮಾರ್ : ಸನ್ಮಾನ್ಯ ಅಧ್ಯಕ್ಷರೇ, Let us not get mis-lead. ಬಿಡಿಎ ನಲ್ಲಿ ಎಲ್ಲಿದೆ, ಕೋರ್ಟಿಗೆ ಹೋಗಬಾರದು, ಸ್ಟೇ ಸಿಗಬಾರದೆಂದು ಎಲ್ಲಿದೆ?

ಶ್ರೀ ಡಿ.ಬಿ. ಇನಾಂದಾರ್ : ಸನ್ಮಾನ್ಯ ಅಧ್ಯಕ್ಷರೇ Acquisition, common facilities are not that. The only intention is that the plan has been prepared and we don't want that plan to be violated, and a beautiful township to come near Bangalore. Instead of unplanned development, unnecessary hurdles should be avoided.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಮಾನ್ಯ ಸಚಿವರು ಹೇಳಿದರು, ಇದರ ಮೇಲೆ ಹೈಕೋರ್ಟಿಗೆ ಹೋಗಬಹುದೆಂದು, ತಾವೂ ಕೂಡ ಲಾಯರ್ ಇದ್ದೀರಿ, ವ್ಯಾಲಿಡಿಟಿ ಯನ್ನೇ ಚ್ಯಾಲೇಂಜ್ ಮಾಡಲಿಕ್ಕೆ ನಾವು ಹೈಕೋರ್ಟಿಗೆ ಹೋಗಬಹುದು. ಅಕ್ವಿಜಿಷನ್ ಪ್ರೊಸಿಡಿಂಗ್ಸ್ ಹೈಕೋರ್ಟಿನಲ್ಲಿ ನಾವು ಹೊಗಿ ಸ್ಟೇ ಮಾಡುವುದಕ್ಕಾಗುವುದಿಲ್ಲ.

ಶ್ರೀ ಡಿ.ಬಿ. ಇನಾಂದಾರ್ : ಒಂದು ವಿಷಯವನ್ನು ಇಲ್ಲಿ ಮಾತನಾಡಿದವರು, ಕಾಂಪೆನ್‌ಶೇಷನ್ ಬಗ್ಗೆ, that we are paying lesser price, ಅಕ್ವಾಯರ್ ಮಾಡಿಕೊಳ್ಳುತ್ತಾರೆ ಎಂದು, ಅದರ ಬಗ್ಗೆ, anyone can question it. That is not a question at all.

ಶ್ರೀ ಕೆ.ಬಿ. ಮಲ್ಲಿಕಾರ್ಜುನ (ಬೀರೂರು) : ಮಾನ್ಯ ಛೇರ್ಮನ್‌ರೆ, ಸೆಕ್ಷನ್ 31ರಲ್ಲಿ ಕೊಟ್ಟಿರುವುದನ್ನು ಓದಬೇಕಾಗುತ್ತದೆ, ಯಾವುದೇ ನ್ಯಾಯಾಲಯದಲ್ಲಿ ಯಾವುದೇದಾವೆಯಲ್ಲಿ ಅಥವಾ ಅರ್ಜಿಯಲ್ಲಿ ಪ್ರಶ್ನಿಸತಕ್ಕದ್ದಲ್ಲ; ಅಂದರೆ ಏನರ್ಥ? ಅಂದರೆ ಯಾವ ಕೋರ್ಟಿಗೆ ಹೋಗುವಂತಿಲ್ಲ, ಯಾವ ಅರ್ಜಿಯನ್ನೂ ಹಾಕುವಂತಿಲ್ಲ, ದಾವೆಯನ್ನೂ ಕೂಡ ಹೂಡುವಂತಿಲ್ಲ ಎನ್ನುವುದರ ಬಗ್ಗೆ ಸ್ಪಷ್ಟವಾಗಿ ಹೇಳಿದ್ದಾರೆ. ಇದರ ಮೇಲೆ ಬಿಲ್ ಪಾಸು ಮಾಡಿಕೊಂಡರೂ ಸಹಿತ ನಾಳೆ ಇದು ಹೈಕೋರ್ಟಿನಲ್ಲಿ ಬಿದ್ದು ಹೋಗುತ್ತದೆ. ಇದನ್ನು ನಾವು ಹೇಗೆ ಪಾಸು ಮಾಡಿಕೊಡುವುಕ್ಕಾಗುತ್ತದೆ? ಸೆಕ್ಷನ್-2ರಲ್ಲಿ ಸದ್ಭಾವನೆ ಎಂದು ಹೇಳಿದ್ದಾರೆ, ಅದು ಏನು ಎನ್ನುವುದರ ಬಗ್ಗೆ ಸ್ಪಷ್ಟವಾಗಿ ಹೇಳಲಿ, ಇದನ್ನು ಇವತ್ತು ಅರ್ಜೆಂಟಾಗಿ ಪಾಸು ಮಾಡಿಕೊಂಡು ಹೋಗಬೇಕು ಎನ್ನುವಂಥದ್ದು ಏನಿದೆ? ಇದನ್ನು ಮುಂದೆ ಯಾರಾದರೂತರಲಿ, ಯಾವುದಕ್ಕೂ ಕ್ಲಾರಿಫಿಕೇಶನ್ ಕೊಡದೆ ಎಲ್ಲಾ ಸರಿ ಇದೆ ಎಂದು ಹೇಳಿದರೆ ಏನು ಮಾಡುವುದಕ್ಕಾಗುತ್ತದೆ ಹೇಗೆ ಪಾಸು ಮಾಡುವುದಕ್ಕಾಗುತ್ತದೆ. ತಾವೇ ಇದನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಸರ್ಕಾರವನ್ನು ಕೇಳಬೇಕಾಗುತ್ತದೆ. ಒಂದು ಒಳ್ಳೆಯ ಆದೇಶವನ್ನು ಮಾಡಿ, In view of the arguments, ವಿರೋಧ ಪಕ್ಷದವರ ವಾದವನ್ನು ನೀವು ಕೇಳಿದ ಮೇಲೆ, ಇದನ್ನು ವಾಪಸ್ಸು ತೆಗೆದುಕೊಳ್ಳುವುದು ಸೂಕ್ತ ಎಂದು ನೀವು ಆದೇಶವನ್ನು ಕೊಡಬೇಕಾಗುತ್ತದೆ.

SRI B. SOMASHEKAR : You are a fire brand MLA and a legal ruminary.

ಶ್ರೀ ಕೆ. ಎನ್. ಸುಬ್ಬಾರೆಡ್ಡಿ : ಮಾನ್ಯ ಛೇರ್ಮನ್‌ರ್, ತಾವೂ ಕೂಡ ವಕೀಲರಾಗಿದ್ದೀರಿ, ಮಾನ್ಯ ಸೋಮಶೇಖರ್‌ಜಿ ಒಂದು ನಿಮಿಷ, ಇಂತಹ ಪ್ರಾವಿಷನ್, what Mr. Suresh Kumar said draconian, ಇದರ ಬಗ್ಗೆ ಲ್ಯಾಂಡ್ ರಿಫಾರ್ಮ್ಸ್ ಆಕ್ಟ್‌ನಲ್ಲಿ ಕೂಡ ಇದೆ. ಅದನ್ನು ಚ್ಯಾಲೇಂಜ್ ಮಾಡಿ ಹೈಕೋರ್ಟಿನಲ್ಲಿ ಕೊನೆಗೆ, you can move the court ಎಂದು ಹೇಳಿ, ಇದರ ಬಗ್ಗೆ [illegible] ಆಗಿ, for a long time, in Land Reforms Act, no court's

jurisdiction is barred. ಆದರೆ ಇಲ್ಲಿ ಇದನ್ನು ಮಾಡಬೇಕಾದರೆ, ನಾವು ತೆಗೆದುಕೊಳ್ಳುವುದು; Validity of this section may be challenged. That is different. But, why you should include in this and what Mr. Suresh Kumar said is very clear.

SRI D.B. INAMDAR : Local Injunction ಬರಬಾರದು. ಇದಕ್ಕೆ Appellate authority ಕೊಟ್ಟಿದ್ದೀರಿ. You can still challenge under fundamental right, under Article 226. ಎನ್ನುವ ದೃಷ್ಟಿಯಿಂದ ಹೇಳುತ್ತಾ ಇದ್ದೇವೆ. Then there are quite a number of Acts, which had this provision. This is not single piece of legislation, which has this act. There are other Acts, which have this provision.

ಶ್ರೀ ಎಸ್. ಸುರೇಶ್ ಕುಮಾರ್ : ನಾನು ಈ ಗುಡ್‌ಫೇತ್‌ನಲ್ಲಿ ಈ ಕೆಲಸವನ್ನು ಮಾಡಿದ್ದೇಟಿಜಿ, ನಾನು ಏನು ಮಾಡಿದರೂ ಕೂಡ ನಾನು ಹೇಳಿಕೊಳ್ಳಲೇ ಬೇಕು. ನನ್ನ whims and fancies ಗೆ, ನನ್ನ like and dis-likeಗೆ ನಾನು ಮಾಡಿದ ಮೇಲೆ ನಾನು ಗುಡ್‌ಫೇತ್ ಎಂದು ಹೇಳಿಯೇ ಹೇಳುತ್ತೇನೆ.

ಶ್ರೀ ಡಿ.ಬಿ. ಇನಾಂದರ್ : ಅಲ್ಲಿ ಒಂದು ಏನು ನಡೆದಿದೆ ಎಂದರೆ There is a lot of unhapezard development taking place. That is the reason why we want to stop it.

ಶ್ರೀ ಎಸ್.ಸುರೇಶ್ ಕುಮಾರ್ : ನಾವು ಈಗ ಹೇಳುತ್ತೇವೆ, We are on that specific issue. Protection of action taken under this Act and bar of suits ಒಂದು ನೀವು ಗುಡ್‌ಫೇತ್‌ನಲ್ಲಿ ಏನು ತೆಗೆದುಕೊಂಡರೂ ಕೂಡ ಯಾರು ಚ್ಯಾಲೇಂಜ್ ಮಾಡುವಂತಿಲ್ಲವೆಂದರೆ ಏನರ್ಥ ಅದು?

SRI D.B. INAMDAR : Under Article 226, you can challenge in the High Court.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ವ್ಯಾಲಿಡಿಟಿ ಚ್ಯಾಲೇಂಜ್ ಮಾಡುತ್ತೀರಾ? ಲ್ಯಾಂಡ್ ಅಕ್ವಿಜಿಶನ್ ತೆಗೆದುಕೊಂಡು ಹೋಗಿ ಹೈಕೋರ್ಟಿಗೆ ಹಾಕುತ್ತೀರಾ?

SRI D.B. INAMDAR : For public purpose, land can be acquired under the Land Acquisition Act. The only question is whether adequate compensation has been paid or not paid.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಲ್ಯಾಂಡ್ ಅಕ್ವಿಜೇಶನ್ ಆದೇಶವನ್ನು ಹೈಕೋರ್ಟ್‌ನಲ್ಲಿ ಆರ್ಟಿಕಲ್ 226 ಅದನ್ನು ಚ್ಯಾಲೇಂಜ್ ಮಾಡಲಿಲ್ಲ. I have good faith in you.

ಶ್ರೀ ಡಿ.ಬಿ. ಇನಾಂದರ್ : ಸನ್ಮಾನ್ಯ ಅಧ್ಯಕ್ಷರೇ, If adequate compensation is paid, you can acquire land under the Land Acquisition Act. All the laws can tell us this. I have lost lot of land under Malaprabha project. I know the provisions of this act very well.

ನಾನೂ ಕೂಡ ಮಲಪ್ರಭಾ ಪ್ರಾಜೆಕ್ಟ್‌ನ್ನು ಬಂದ್ ಮಾಡಿಸಬೇಕೆಂದು ಹೈಕೋರ್ಟಿಗೆ ಹೋಗಿದ್ದೆ, because I was losing valuable land. But could not stop it.

SRI B. SOMASHEKAR : Suppose, sufficient compensation is not paid according to the land owner, we cannot question the action of the officer.

SRI D.B. INAMDAR : You can go to the High Court.

SRI B. SOMASHEKAR : No, he cannot go to the High Court.

SRI D.B. INAMDAR : We have got provision in this act, to fix compensation in their land.

ಶ್ರೀ ಕೆ. ಜಯಪ್ರಕಾಶ್ : ಕಾಂಪೆನ್‌ಶೇಷನ್ ಬಗ್ಗೆ ಇವರು ಹೈಕೋರ್ಟಿಗೆ ಹೋಗಬೇಕಾಗಿರುವುದು ಯಾವಾಗ? ಲ್ಯಾಂಡ್ ಅಕ್ವಿಜೇಶನ್ ಪ್ರೊಸೀಡಿಂಗ್ಸ್ ಕಂಪ್ಲೀಟ್ ಆಗಿ ಡೆಪ್ಯುಟಿ ಕಮಿಷನರ್‌ರವರು ಕಾಂಸೆಪೆನ್‌ಶೇಷನ್ ಫಿಕ್ಸ್ ಮಾಡಿ ಹೈಕೋರ್ಟಿಗೆ ಹೋಗುವಂಥದ್ದು. ಲ್ಯಾಂಡ್‌ಎಕ್ವಿಜೇಶನ್ ಅಕ್ವಾಯರ್ ಮಾಡುವ ಪರ್‌ಪಸ್ ಯಾವುದು?

SRI D.B. INAMDAR : This act does not provide for acquisition of land. It is only to regulate this corridor to see that there is planned development.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಕೊನೆಯ ದಿವಸ ಇರಲಿ, ಇದರ ಬಗ್ಗೆ ತಾವು ಒಂದು ರೂಲಿಂಗ್‌ಕೊಟ್ಟುಬಿಡಿ.

MR CHAIRMAN : Mr.Subbareddy, would you like to enlighten?

SRI K.N. SUBBA REDDY : Mr Inamdar was not a Lawyer. Anyway you are a Lawyer. You know this provision, you cannot move any court. you have made it very clear in section. 31...

ಶ್ರೀ ಡಿ.ಬಿ. ಇನಾಂದಾರ್ : ನಾವು ಪಾರ್ಕ್ ಎಂದು ಹೇಳಿರುತ್ತೇವೆ, We say it is a park. ಮಾನ್ಯ ಸಿಂಧ್ಯಾರವರು ಮಾತನಾಡತಕ್ಕಂಥ ಸಂದರ್ಭದಲ್ಲಿ ಡೀನೋಟಿಫೈ ಮಾಡಿರುವಂಥದ್ದರಲ್ಲಿ ಎಲ್ಲಿಯೂ ಗ್ರೀನ್‌ಬೆಲ್ಟ್ ಉಳಿದಿಲ್ಲವೆನ್ನುವ ಮಾತನ್ನು ಹೇಳಿದರು.

SRI K.N. SUBBA REDDY : No order passed or proceedings taken by the Authority or an officer or the Authority...

SRI D.B. INAMDAR : Here, it is for the planned development, where everything will be, whether it is place of work, whether it is the commercial area, whether it is the residential area, whether it is the part, whether it is recreation facility, roads, everything will be taken into consideration. This is what the plan is, it is a planned project,

SRI K. JAYAPRAKASH HEDGE : Definitely we have no objection, as for as this is concerned. We have bothered about these two sections.

ಶ್ರೀ ಎಸ್. ಸುರೇಶ್ ಕುಮಾರ್ : ಈ ಅಕ್ಟ್‌ನಲ್ಲಿ ಲ್ಯಾಂಡ್ ಅಕ್ವಿಜೇಶನ್ನೇ ಬರುವುದಿಲ್ಲ, ಸ್ವಾಮಿ ಸೆಕ್ಷನ್-11 ನೋಡಿ, The Authority shall have the power to do such activities as it may consider necessary or expedient for the purposes of carrying out its functions under this Act. ಅದರಲ್ಲಿ ಸಬ್ ಸೆಕ್ಷನ್-2, Without prejudice to the generally of the foregoing provisions such power shall include the power, -(i) to acquire and hold such movable and immovable property as it may deem necessary and, subject to such restrictions, ತಾವು ಒಂದು ಕಡೆ ಹೇಳುತ್ತೀರಿ ಲ್ಯಾಂಡ್ ಅಕ್ವಾಯರ್ ಮಾಡಿಕೊಳ್ಳುವುದಿಲ್ಲವೆಂದು ಹೇಳುತ್ತೀರಿ ಸೆಕ್ಷನ್-11, ಸಬ್ ಸೆಕ್ಷನ್-2 ಏನು ಹೇಳುತ್ತದೆ.

SRI D.B. INAMDAR : Acquisition means not under that. But under the Land Acquisition Act, we will acquire. There are two provisions here. Acquisition means, This authority will acquire land under the Land Acquisition Act, where you can challenge the compensation.

ಶ್ರೀ ಎಸ್. ಸುರೇಶ್ ಕುಮಾರ್ : ನಿಮ್ಮ ಹೊಸ ಅಥಾರಿಟಿ ಏನು ಮಾಡುತ್ತದೆ, ಅವರು ಮಾಡಿದ್ದನ್ನು, ಇಲ್ಲಿ ಬರೀ ಕಾಂಪೆನ್‌ಶೇಷನ್ ಪ್ರಶ್ನೆ ಮಾತ್ರ ಅಲ್ಲ, ಬೇರೆ ಬೇರೆ ವಿಷಯಗಳು ಬರುತ್ತವೆ. ಅದನ್ನು ಕೋರ್ಟಿನಲ್ಲಿ ಚ್ಯಾಲೇಂಜ್ ಮಾಡಬಾರದು, ಗುಡ್‌ಫೇತ್‌ನಲ್ಲಿ ನಾವೆಲ್ಲಾ ಮಾಡುವುದು, ನಾವು ಇರುವುದೇ ಹರಿಶ್ಚಂದ್ರರು ಎಂದು ತಿಳಿದುಕೊಂಡು ಬಿಟ್ಟರೆ ಬಹಳ ಕಷ್ಟವಾಗುತ್ತದೆ. ಈ ಅಥಾರಿಟಿಯಲ್ಲಿ ಬರುವವರೆಲ್ಲರೂ ಹರಿಶ್ಚಂದ್ರರಲ್ಲ.

ಶ್ರೀ ಡಿ.ಬಿ. ಇನಾಂದರ್ : ಈ ಏರಿಯಾದಲ್ಲಿ ಕೆಲಸ ಮಾಡತಕ್ಕಂಥ ಸ್ಥಳ, ಇದು ರೆಷಿಡೆನ್ಸಿಯಲ್ ಸ್ಥಳ, ಇದು ಪಾರ್ಕ್, ಇದು ಕಮರ್ಷಿಯಲ್ ಸ್ಥಳ, ಎನ್ನುವಂಥ ಒಂದು ಪೂರ್ತಿಯಾದ ಪ್ಲಾನ್ ಮಾಡಿ, ಇಲ್ಲಿ ರಸ್ತೆ ಬರಬೇಕು, ಎನ್ನುವುದರ ಬಗ್ಗೆ ಎಲ್ಲವನ್ನೂ ಮಾಡಿದ್ದೇವೆ ಅದನ್ನು ಮಾಡಬೇಡಿ ಎಂದರೆ, Actually, you are helping haphazard development of the city.

5.30 ಪಿ.ಎಂ

ಶ್ರೀ ಬಿ. ಸೋಮಶೇಖರ್ : ಮಾನ್ಯ ಇನಾಂದಾರ್‌ರವರೇ ಕೇಳಿ, ಲ್ಯಾಂಡ್ ಅಕ್ವಿಜಿಷನ್ ಆಕ್ಟ್ ಅಕ್ವೈರ್ ಮಾಡಿಕೊಳ್ಳುತ್ತೇವೆ. ಅದನ್ನು ಕೋರ್ಟಿನಲ್ಲಿ ಚಾಲೇಂಜ್ ಮಾಡಬಹುದು ಎಂದು ಹೇಳುತ್ತಾರೆ. Suppose that acquisition is quashed. Here in this section. ಸೆಕ್ಷನ್ 30(9) ಏನು ಹೇಳಿದ್ದೀರಿ ಕೇಳಿ, Nothingt in this section shall debar subsequent acquisition of the land concerned by the Authority, if such acquisition is considered necessary for the purposes of this land. Even if the acquisition is quashed by the High Court, nothing in this section shall debar subsequent acquisition.. ಅಂದರೆ ಅರ್ಥ, ಸಬ್‌ಸ್ವಿಕೆಂಟ್ ಅಕ್ವೈರ್ ಮಾಡಿಕೊಳ್ಳಬಹುದು.

ಶ್ರೀ ಡಿ.ಬಿ. ಇನಾಂದಾರ್ (ಮಾಹಿತಿ ತಂತ್ರಜ್ಞಾನ ಸಚಿವರು) : ಮಾನ್ಯ ಸೋಮಶೇಖರ್ ರವರೆ, ತಾವು ರೆವಿನ್ಯೂ ಮಂತ್ರಿಗಳಾಗಿದ್ದೀರಿ, ಈಗ ನನಗೆ ಮಲಪ್ರಭಾ ಪ್ರಾಜೆಕ್ಟ್ ಆಗಬಾರದಾಗಿತ್ತು, Because I lost very valuable land. I went to the court asked them to stop this project. I mean, I am not telling this thing, but went to the court but they said no. You cannot stop public project because of individual hardship. When there is to be a planned development, I think everyone has to agree. There are people who are going there and getting various clearances and doing haphazard development. We want to put a stop to that.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಮಾನ್ಯ ಛೇರ್ಮನ್‌ರವರೆ, ಅವರು ಕೋರ್ಟಿಗೆ ಹೋದಾಗ ಅವರು ನೋ ಎಂದು ಹೇಳಿದರು ಎಂದು ಮಾನ್ಯ ಸಚಿವರು ಹೇಳಿದರು. If the court has said no, why do you want this section? ಅಲ್ಲಿ ಪ್ರಸಿಡೆಂಟ್ ಇದೆಯೆಂದು ಆಯಿತಲ್ಲಾ,

ಶ್ರೀ ಡಿ.ಬಿ. ಇನಾಂದಾರ್ : ಮಲಪ್ರಭಾ ಪ್ರಾಜೆಕ್ಟ್‌ನ್ನು ಕಟ್ಟಬಾರದು ಎಂದು ಹೇಳಿದ್ದಕ್ಕೆ ನೋ ಎಂದು ಹೇಳಿದರು. You can go to the court. For example I said, you can go to the court. You can question everything as far as compensation is concerned. Later on when, I was not paid adequate compensation, I went to the court and it was enhanced.

ಶ್ರೀ ಎಸ್. ಸುರೇಶ್ ಕುಮಾರ್ : ನಾವು ಅಥಾರಿಟಿಯ ಜೊತೆ ಡೀಲ್ ಮಾಡುವಾಗ ಅನೇಕ ಸಂಗತಿಗಳು ಬರುತ್ತವೆ. ಅಲ್ಲಿ ಅನೇಕ ಅನ್ಯಾಯಗಳು ಆಗೇ ಆಗುತ್ತದೆ. ಇಲ್ಲಿ ಅನುಭವವಿದೆ. ಆ ಅನ್ಯಾಯಗಳ ವಿರುದ್ಧ ಕೋರ್ಟಿನಲ್ಲಿ ಕೇಸ್ ಹಾಕಬೇಡಿ ಎಂದರೆ ವ್ಯಾಲ್ಯುವೇಶಷನ್ ಏನು? Compensation is not the only issue. So ದಯವಿಟ್ಟು ಸೆಕ್ಷನ್ 29–30ನ್ನು ತೆಗೆದುಹಾಕಬೇಕು, ಹಾಗೆ ಮಾಡಿದರೆ ಮಾತ್ರ ನಾವು ಎಲ್ಲರೂ ಸೇರಿಕೊಂಡು ಬಿಲ್‌ನ್ನು ಪಾಸು ಮಾಡಿಕೊಡುತ್ತೇವೆ.

ಶ್ರೀ ಡಿ.ಬಿ. ಇನಾಂದಾರ್ : ಇದನ್ನು ನಾವು ಸ್ಪೆಷಲ್ ಆಗಿ ತರುತ್ತಿಲ್ಲ. It is there in other acts also.

ಶ್ರೀ ಎಸ್. ಸುರೇಶ್ ಕುಮಾರ್ : ಬೇರೆಯದರಲ್ಲಿ 108 ಇರಬದುದು, ಒಂದು ಹೊಸ ಬಿಲ್ ತರುತ್ತೇನೆ, ಎಂದರೆ How can we allow?

ಶ್ರೀ ಡಿ.ಬಿ. ಇನಾಂದರ್ : ಮಾನ್ಯ ಛೇರ್ಮನ್‌ರವರೆ, if we can plan everything, then what he has expressed of changing later on that can happen if this provision is not there.

ಶ್ರೀ ಬಿ.ಸೋಮಶೇಖರ್ : ನಾವು ಕಂಡುಕಂಡು ಜನರು ನಮ್ಮನ್ನು ಸುಮ್ಮನೆ ಬಿಡುವುದಿಲ್ಲ. ನಾವು ವಿರೋಧಪಕ್ಷದಲ್ಲಿ ಕುಳಿತುಕೊಂಡು ಇಷ್ಟೆಲ್ಲಾವಾದ ಮಾಡಿದರೂ ಸರ್ಕಾರದವರು ಇಷ್ಟೊಂದು ಹಠಮಾರಿತನವನ್ನು ತೋರಿಸುತ್ತಿರುವುದನ್ನು ನೋಡಿದರೆ ದುರುದ್ದೇಶ ಇದೆ ಎಂಬುದು ಗೊತ್ತಾಗುತ್ತದೆ.

ಇದನ್ನು ತಾವು ದಯವಿಟ್ಟು ವಾಪಸ್ಸು ತೆಗೆದುಕೊಳ್ಳಬೇಕು. Nothing will happen in another two months time.

ಶ್ರೀ ಡಿ.ಬಿ. ಇನಾಂದಾರ್ : ಸದಸ್ಯರಿಗೆ ಹೇಳಬೇಕಾಗಿತ್ತೆಂದರೆ infact amount of clearances ಅಲ್ಲಿ ಕೊಡುತ್ತಿರುವುದನ್ನು ನೋಡಿದರೆ there will not be any land or any authority. ಅದು ಯಾವುದಕ್ಕೂ ಕೂಡ ಬರುವುದಿಲ್ಲ. ಆ ಪರಿಸ್ಥಿತಿ ಉದ್ಭವವಾಗುತ್ತದೆ. ಬೆಂಗಳೂರು to-day has crossed even silicon valley as far as the number of I.T parks is concerned. ಅಲ್ಲಿ 1 ಲಕ್ಷ 20 ಸಾವಿರ ಇದ್ದರೆ ಇಲ್ಲಿ 1 ಲಕ್ಷದ 60 ಸಾವಿರ ಇರುತ್ತದೆ. ನ್ಯಾಸ್‌ಕಾಂ ರಿಪೋರ್ಟ್ ಏನು ಹೇಳಿದೆ ಎಂದರೆ, 50 Billion dollars exports. If we have our present share, it will be about 18-20 Billion dollars worth of export will be out of Bangalore.

ಶ್ರೀ ಬಿ. ಸೋಮಶೇಖರ್ : ಆಯಿತಪ್ಪಾ, I can understand it.

SRI D.B. INAMDAR : If, we have our present share, it will be about 18-20 Billion dollars worth of export will be out of Bangalore.

ಶ್ರೀ ಬಿ. ಸೋಮಶೇಖರ್ : ಸನ್ಮಾನ್ಯ ಅಧ್ಯಕ್ಷರೇ, I agree all his arguments. Your purpose will not be hindered by deleting there sections.

ಶ್ರೀ ವಿ. ಸೋಮಣ್ಣ : ಮಾನ್ಯ ಛೇರ್ಮನ್‌ರವರೆ, ಇದು ಬೆಂಗಳೂರಿನದು, ಬೀರೂರಿನವರು ಮಾತನಾಡುತ್ತಾರೆ, ಮಳವಳ್ಳಿಯವರು ಮಾತನಾಡುತ್ತಾರೆ, ಆದರೆ ನಾವು ಏತಕ್ಕಾಗಿ ಮಾತನಾಡಬಾರದು?

ಛೇರ್ಮನ್ : ಸೋಮಣ್ಣನವರೆ ತಾವು ಸ್ವಲ್ಪ ತಾಳಿ ಸೋಮಶೇಖರ್‌ರವರು ಮಾತನಾಡುತ್ತಿದ್ದಾರೆ.

ಶ್ರೀ ಬಿ. ಸೋಮಶೇಖರ್ : ಇದನ್ನು ತಾವು ತೆಗೆದುಹಾಕಿ. Your purposr will be served. If you delete these two sections; I think this will not come in the way of your.....

SRI D.B. INAMDAR : We would like to stick to that plan.

ಶ್ರೀ ಬಿ. ಸೋಮಶೇಖರ್ : ಸೆಕ್ಷನ್ 29, 30, 31 ತೆಗೆಯಿರಿ You can go ahead with your plan. ತೊಂದರೆ ಏನು ಆಗುತ್ತದೆ?

ಶ್ರೀ ಎಸ್. ಸುರೇಶ್‌ಕುಮಾರ್ : ಕೋರ್ಟಿಗೆ ಹೋಗುವಂತಹ ವ್ಯಕ್ತಿಯನ್ನು ತಡೆಯುವುದರಿಂದ ನಿಮಗೇಸುಲಾಭ? ಆ ಹಕ್ಕನ್ನು ಕೊಡುವುದರಿಂದ ನಿಮಗೇನು ತೊಂದರೆ? That means you don't believe in rule of law.

ಶ್ರೀ ಡಿ.ಬಿ. ಇನಾಂದಾರ್ : ಹಕ್ಕನ್ನು ನಾವು ತೆಗೆದಿಲ್ಲ,

SRI S. SURESH KUMAR : What does it mean?

ಶ್ರೀ ಡಿ.ಬಿ. ಇನಾಂದಾರ್ : ಫಂಡಮೆಂಟಲ್ ರೈಟ್ಸ್ ಕೆಳಗಡೆ ಯಾರಾದರೂ ಕೂಡ ಹೈಕೋರ್ಟಿಗೆ ಹೋಗಬಹುದು.

ಶ್ರೀ ಎಸ್. ಸುರೇಶ್ ಕುಮಾರ್ : ಹಾಗಿದ್ದಮೇಲೆ ಸೆಕ್ಷನ್ 31 ತೆಗೆದುಹಾಕಿ.

SRI D.B. INAMDAR : Anyone can go to High Court under Article 26.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಸಚಿವರೇ ತಾವು ಕಾಂಪನ್‌ಸೇಷನ್ ವಿಚಾರ ಬಿಟ್ಟುಬಿಡಿ. ಸೆಕ್ಷನ್ 31ನ್ನು ತೆಗೆದುಹಾಕಿ.

MR.CHAIRMAN : I will come to your rescue. ಒಂದು ನಿಮಿಷ ತಾಳಿ ಮಲ್ಲಿಕಾರ್ಜುನ್‌ರವರೆ, as I remember ಸುಬ್ಬರೆಡ್ಡಿಯವರೆ, you were the President of the Bar council ಆಸೋಸಿಯೇಷನ್‌ಗೆ ತಾವು ಪ್ರೆಸಿಡೆಂಟ್ ಆಗಿದ್ದೀರಿ. ಲ್ಯಾಂಡ್ ರಿಫಾರ್ಮ್ಸ್ ಆ್ಯಕ್ಟ್‌ನ್ನು ಪಾಸು ಮಾಡಿದಾಗ the total act was barred from the review by the court. Even then, the act was passed. ಆದರೂ ಸಹ ಹೈಕೋರ್ಟಿನಲ್ಲಿ ರಿಟ್ ಪಿಟಿಷನ್ಸ್ ಬೇಕಾದಷ್ಟು ಬಿದ್ದವು. ಆಗ ಪ್ರಿವೆಂಟ್ ಆಗಲಿಲ್ಲವಲ್ಲಾ? The bar was not there. That is one thing. No. Two. Englighten me a enlighten the House also. If I remember correctly, military ಪರ್‌ಪಸ್‌ಗೋಸ್ಕರ ಡಿಫೆನ್ಸ್ ಪರ್‌ಪಸ್‌ಗೋಸ್ಕರ, ಎಸೆನ್‌ಷಿಯಲ್ ಅರಪ್ಪರ್‌ನೋಸ್ಕರ್ ಜಮೀನನ್ನು ಕೊಂಡುಕೊಳ್ಳುವುದಕ್ಕೆ ಪ್ರೊಸೀಡಿಂಗ್ಸ್‌ನ್ನು there is a bar in some section of the act that, it should not approach the court ಎಂದು ಹೇಳಿ. ಅದು ಹೇಗೆ ಸಾಧ್ಯವಾಯಿತು? ಸುಬ್ಬಾರೆಡ್ಡಿಯವರೆ, come on tell me it now. When that is barred in the interest of public, ಬೆಂಗಳೂರನ್ನು ಐ.ಟಿ. ಇಂಪಾರ್ಟ್‌ಟೆಂಟ್ ಸೆಂಟರ್ ಮಾಡಬೇಕೆಂದು ಹೇಳಿ ಏನೋ ಉತ್ಸಾಹದಿಂದ ಮಾಡುತ್ತಾ ಇರಬಹುದು. ಮಾಡುವಂತಹ ಸಂದರ್ಭದಲ್ಲಿ ಕೆಲವೊಂದು ತಪ್ಪುಗಳು ಆಗಿರಬಹುದು But intention of the Act ಮತ್ತು ಈ ಆ್ಯಕ್ಟ್‌ನ್ನು ನಾವು ಈಗಾಗಲೇ ಮಾಡಿದ್ದೇವಲ್ಲಾ......

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಆ ಬುಕ್‌ಗಳೆಲ್ಲವನ್ನೂ ತರಿಸೋಣ.

ಛೇರ್ಮನ್ : ಅದು ಸರಿ, ಎಲ್ಲರೂ ಕೂಡ ಬರೀ ಇಂಗ್ಲೀಷ್ ವರ್ಷನ್ ಅನ್ನೇ ಕೊಂಡಿದ್ದೀರಲ್ಲಾ ಕನ್ನಡವನ್ನು ಬಿಟ್ಟೇಬಿಟ್ಟಿದ್ದೀರಲ್ಲಾ ಏಕೆ?

ಶ್ರೀ ಕೆ. ಜಯಪ್ರಕಾಶ ಹೆಗಡೆ : ಮಾನ್ಯ ಛೇರ್ಮನ್‌ರವರೆ, ಈಗ ತಾವು ಏನು ಹೇಳಿದ್ದೀರಿ, ಆಯಿತು ಅದರ ಬಗ್ಗೆ ಡಿಬೇಟ್‌ನ್ನು ಮಾಡೋಣ. ಲ್ಯಾಂಡ್ ರಿಫಾರ್ಮ್ಸ್ ಆ್ಯಕ್ಟ್ ಜಾರಿಗೆ ತಂದಾಗ ಯಾಕೆ ಬಾರ್ ಮಾಡಿದರು ಏತಕ್ಕಾಗಿ ಡಿಫೆನ್ಸ್‌ದ್ದು ಬಾರ್ ಮಾಡಿದರು ಅದರ ಬಗ್ಗೆಯೂ ಕೂಡ ಚರ್ಚೆಯಾಗಲಿ. ಇದರ ಬಗ್ಗೆ ಎಲ್ಲವನ್ನೂ ಇಟ್ಟುಕೊಂಡು ಚರ್ಚೆ ಮಾಡೋಣ. ಮುಂದಿನ ವಿಧಾನಸಭೆಗೆ ಹೊಸದಾಗಿ ಬಂದಾಗ ಬರಲಿ.

ಛೇರ್ಮನ್ : ಇನಾಂದಾರ್‌ರವರು ಹೇಳಲಿ ಬಿಡಿ. Let the Government explain.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಅವರು ಎಕ್ಸ್‌ಪ್ಲೇನ್ ಮಾಡಲಿ.

ಶ್ರೀ ಬಿ.ಆರ್. ಯಾವಗಲ್ : ಮಾನ್ಯ ಛೇರ್ಮನ್‌ರವರೆ, ನನಗೆ ಮಾತನಾಡಲು ಒಂದೆರಡು ನಿಮಿಷ ಅವಕಾಶವನ್ನು ಕೊಡಿ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ : ಅದು ಗ್ರಾಮೀಣ ಪ್ರದೇಶದ್ದು ಅದರಲ್ಲಿ ದುಡ್ಡಿನ ವ್ಯವಹಾರವಿಲ್ಲ. ಇದರಲ್ಲಿ ದುಡ್ಡಿನ ವ್ಯವಹಾರ ನಡೆಯುತ್ತದೆ. ಅದಕ್ಕೋಸ್ಕರವೇ ನಾವು ಹೇಳುತ್ತಿರುವುದು. ಆ ತರಹ ಅನ್ಯಾಯವಾದರೆ ಕೋರ್ಟಿಗೆ ಹೋಗತಕ್ಕಂತಹ ಅವಕಶವಿರಬೇಕು ಎನ್ನುವುದು ಮೊದಲನೆಯದು.

ಇನ್ನು ಎರಡನೇಯದು ಈ ಸದ್ಭಾವನೆ ಎಂದು ಇದೆಯಲ್ಲಾ ಇದನ್ನು ಸ್ಪಷ್ಟಪಡಿಸದೆ ನಾವು ಇದನ್ನು ಬಿಲ್‌ನ್ನು ಪಾಸು ಮಾಡಿದರೆ ಇದೊಂದು ಕರಾಳ ವಿಧೇಯಕಕ್ಕೆ ನಾವು ಅನುಮೋದನೆಯನ್ನು ಕೊಟ್ಟಂತೆ ಆಗುತ್ತದೆ. ನಾವು ಹೋಗತಕ್ಕಂತಹ ಸಂದರ್ಭದಲ್ಲಿ ಈ ಕರಾಳ ವಿಧೇಯಕಕ್ಕೆ ಅನುಮೋದನೆ ಕೊಡಿಸಕ್ಕಂತಹ ಕೆಲಸವನ್ನು ನಾವೂ ಮಾಡಬಾರದು, ನಿಮ್ಮಿಂದಲೂ ಕೂಡ ಆಗಬಾರದು ಎಂಬುದು ನನ್ನ ಮನವಿ.

ಶ್ರೀ ವಿ. ಸೋಮಣ್ಣ (ಬಿನ್ನಿಪೇಟೆ) : ಮಾನ್ಯ ಛೇರ್ಮನ್‌ರವರೆ, ನಮಗೆ ಮಾತನಾಡಿ ಎಂದು ತಾವು ಹೇಳುವುದೇ ಇಲ್ಲವಲ್ಲಾ.

ಛೇರ್ಮನ್ : ಮಾನ್ಯ ಸೋಮಣ್ಣನವರೇ, ತಾವು ಮಾತನಾಡಿ.

ಶ್ರೀ ವಿ. ಸೋಮಣ್ಣ : ನೀವು ನನಗೆ ಮಾತನಾಡಲು ಹೇಳುತ್ತೀರೆಂದರೆ, ಹೇಳುವುದೇ ಇಲ್ಲವಲ್ಲಾ.

ಛೇರ್ಮನ್ : ಸೋಮಣ್ಣನವರಿಗೆ ಸ್ಕೋಪ್ ಕೊಟ್ಟಿದ್ದೀವೆ, ಮೂರು ಇಷ್ಯೂ‌ಗಳನ್ನು ಸಭೆಯ ಮುಂದಿಟ್ಟಿದ್ದೇವೆ. ಎನ್‌ಲೈಟ್‌ನ್ ಮಾಡಿ ಹೌಸ್‌ಗೆ. Let the Minister reply.

ಶ್ರೀ ವಿ. ಸೋಮಣ್ಣ : ಮಾನ್ಯ ಛೇರ್ಮನ್‌ರವರೆ, ಈಗ ನಾವೆಲ್ಲರೂ ಬೆನ್ನುತಟ್ಟಿಕೊಳ್ಳುತ್ತೇವೆ ಜೈವಿಕ ತಂತ್ರಜ್ಞಾನ, ಮಾಹಿತಿ ತಂತ್ರಜ್ಞಾನ ಇಡೀ ರಾಷ್ಟ್ರದಲ್ಲಿ ಬೆಂಗಳೂರನ್ನು ನೋಡುತ್ತಿದ್ದೇವೆಂದು ದಿನ ಪತ್ರಿಕೆಗಳಲ್ಲಿ ಓದುತ್ತೇವೆ. ಬೆಳಿಗ್ಗೆ ಮಾನ್ಯ ಸದಸ್ಯರಾದ ಶ್ರೀಮಾನ್ ಸಿಂಧ್ಯಾರವರು ಮಾತನಾಡಿ ಮುಖ್ಯಮಂತ್ರಿಗಳು ಹೈಟೆಕ್ ಅಂದರೆ ಖುಷಿ ಪಡುತ್ತಾರೆಂಬ ಮಾತನ್ನು ಹೇಳಿದರು. ಇದರಲ್ಲಿ ರೈತರಿಗೆ ಅನ್ಯಾಯ ಮಾಡುವುದಾಗಲಿ, ಬಡವರಿಗೆ ಅನಾನುಕೂಲ ಮಾಡುವುದಾಗಲಿ ಉದ್ದೇಶವಲ್ಲ. ಇವತ್ತು ನಾವು ಇಲ್ಲಿ ಏನು ಮಾತನಾಡಿದ್ದೇವೆ. ಇನ್ನು 15–20 ದಿವಸಗಳಲ್ಲಿ ಅಲ್ಲಿ 100 ಅಥವಾ 200 ಹಟ್ಸ್ ಹಾಕುತ್ತಾರೆ, ಉದ್ದೇಶ ನನಗೆ ತಿಳಿದಿರುವ ಮಾಹಿತಿ ನೋಡಿದರೆ 130 ಎಕರೆಯೋ 132 ಎಕರೆಯೋ ಒಂದು ಸರಿಯಾದ ಒಳ್ಳೆಯ ಪಾರ್ಕ್‌ನ್ನು ಮಾಡಿ, ಅದನ್ನು ಮಾಡುವ ಉದ್ದೇಶವೇನು, ಇಡೀ ರಾಷ್ಟ್ರದಲ್ಲಿ ಬೆಂಗಳೂರಿನಂತಹ ದೊಡ್ಡನಗರದಲ್ಲಿ ಈ ತರಹ ಆಗಬಹುದು. ಸಣ್ಣಪುಟ್ಟ. ಬೇರೆ ಬೇರೆಯ ರೂಪದಲ್ಲಿ ನಾವು ಎಲ್ಲೋ ಒಂದೊಂದು ಸಾರಿ ಹೇಳುತ್ತೇವೆ. ಅಳಿಯ ಅಲ್ಲಾ ಮಗಳ ಗಂಡ, ಮಗಳ ಗಂಡ ಅಲ್ಲಾ ಅಳಿಯ ಎಂದು ಹೇಳುತ್ತೇವೆ. ಏನಾದರೂ ಮಾಡಬೇಕೆಂದಾಗ ಉದ್ದೇಶಕ್ಕಿಂತ ಹೆಚ್ಚಾಗಿ ಮಾಡತಕ್ಕಂತಹ ಕೆಲಸದ ಬಗ್ಗೆ ನಾವು ಚಿಂತನೆಯನ್ನು ಮಾಡಬೇಕಾಗುತ್ತದೆ. ಬೆಂಗಳೂರು ನಗರವು ಇಷ್ಟೆಲ್ಲಾ ಬೆಳೆಯುವಾಗ ಒಂದು ಜೈವಿಕ ತಂತ್ರಜ್ಞಾನದ ಪಾರ್ಕ್‌ನ್ನು ಮಾಡುವಾಗ ಇಡೀ ವಿಶ್ವಕ್ಕೆ ಕಣ್ಣನ್ನು ತೆರೆಸುವಂತಹ ಕೆಲಸವನ್ನು ಮಾಡುವಾಗ ಅಲ್ಲಲ್ಲಿ ಕೆಲವು ರೆವಿನ್ಯೂ ಪಾಕೇಟ್‌ಗಳು ಇರುವುದು ಸತ್ಯ. ಒಂದು ಲಕ್ಷ ಮನೆಗಳನ್ನು ನಾವು ಸಕ್ರಮಗೊಳಿಸಿದೆವು, 56 ಸಾವಿರ ಅನ್ ಅಥಾರೈಸ್ಡ್ ನಲ್ಲಿಗಳನ್ನು ಸಕ್ರಮಗೊಳಿಸಿದೆವು. ಈ ಜಾಗಗಳೂ ಕೂಡ ಅದೇ ರೀತಿಯಾದಾಗ ನಿಮ್ಮ ಉದ್ದೇಶವೇನು ಇದೆ, ಅ ಉದ್ದೇಶ ಮಾಡುವುದಕ್ಕೆ ಆಗುತ್ತದೆಯೇ? ಇದರೊಳಗಡೆ ರೈತರಿಗೆ ಅನ್ಯಾಯ ಮಾಡುವುದಾಗಲಿ, ಮತ್ತೊಂದಾಗಲಿ ಇಲ್ಲ. ಇವತ್ತು ನಮ್ಮ ಎಲ್ಲಾ ಸದಸ್ಯರ ಕಳಕಳಿ ಏನಿದೆ ಅದನ್ನು ಅರ್ಥ ಮಾಡಿಕೊಂಡು ಸರಿಪಡಿಸಿ ಆದರೆ ಇರತಕ್ಕಂತಹ ಕೆಲವು ಕ್ಲಾಜ್‌ಗಳನ್ನು ತೆಗೆದುಹಾಕಬೇಕು, ಅದನ್ನು ನಾನು ಮತ್ತೊಮ್ಮೆ ಏತಕ್ಕಾಗಿ ಹೇಳುತ್ತೇನೆಂದರೆ, ಇದನ್ನು ಮಾಡಲಿಲ್ಲವೆಂದರೆ ನಾಳೆ ತೊಂದರೆಯಾಗುತ್ತದೆ. ಚುನಾವಣೆ ಮತ್ತೊಂದಕ್ಕೆ ಮಗದೊಂದು ನಾವು ಸಜ್ಜಾಗಿದ್ದಾಗ ದಿಢೀರನೇ ಬೆಳೆಯುತಕ್ಕಂತಹ ಕೆಲವು ದುಷ್ಟಶಕ್ತಿಗಳು ಬೆಂಗಳೂರಿನಲ್ಲಿ ಮಾಫೀಯಗಳು ಇವೆ, ಇದನ್ನು ಅವರು ತೆಗೆದುಕೊಳ್ಳುತ್ತಾರೆ. ಆಗ ಏನು

ಮಾಡುತ್ತಾರೆಂದರೆ ಮತ್ತೆ ಡೀನೋಟಿಫಿಕೇಷನ್‌ಗೆ ಮಾಡುತ್ತಾರೆ. ಮತ್ತೆ ಮಗದೊಂದು ಆಗುತ್ತದೆ, ಆಗ ಭ್ರಷ್ಟಾಚಾರ ಆಗುವುದಿಲ್ಲವೇ? ಇವೆಲ್ಲಾ ಮಾಡುವಾಗ, ಕಾನೂನನ್ನು ಎಲ್ಲೋ ಒಂದು ಕಡೆ ಸರಳ ಮಾಡುವಾಗ ಇಂಥ ಒಂದು ಕೆಲಸ ತೆಗೆದುಕೊಳ್ಳುವಾಗ ಸ್ವಲ್ಪ ಜವಾಬ್ದಾರಿರನ್ನು ಸರ್ಕಾರ ಹೊಂದಿರಬೇಕಾಗುತ್ತದೆ ಎಂಬುದರ ಬಗ್ಗೆ ಚಿಂತನೆ ಮಾಡಬೇಕು. ನಾವಿದ್ದಾಗಲೂ ಇದೇ ಅಧಿಕಾರಿಗಳು, ಇವರಿದ್ದಾಗಲೂ ಇದೇ ಅಧಿಕಾರಿಗಳು, ಯಾರೇ ಬಂದರೂ ಅಧಿಕಾರಿಗಳು ತಮ್ಮದೇ ಆದಂತಹ ಒಪೀನಿಯನ್ ಕೊಡುತ್ತಾರೆ. ಆದರೆ ಕೊನೆಯ ಹಂತದಲ್ಲಿ ಯಾರು ಮಾಲೀಕ ಅಥವಾ ಜಮಿನುದಾರ ಇರುತ್ತಾನೆ ಅವನಿಗೆ ಅನಾನುಕೂಲವಾಗದ ಹಾಗೆ ನೋಡಿ ಕೊಳ್ಳಬೇಕು ನಾಳೆ ಬೆಳೆಗ್ಗೆ ಹೋಗುತ್ತಾನೆ ಯಾರಾದರೂ ಅವನ ಹತ್ತಿರ ಜಿ.ಪಿ.ಎ. ತೆಗೆದುಕೊಳ್ಳುತ್ತಾನೆ, 5 ಅಥವಾ 10 ಲಕ್ಷ ರೂ. ಗಳಿಗೆ ಮಾರಿಕೊಳ್ಳುತ್ತಾನೆ. ಅವನು 30 ಅಥವಾ 50 ಲಕ್ಷ ರೂ. ದುಡ್ಡು ಮಾಡುತ್ತಾನೆ. ಇಂತಹ ಲ್ಯಾಂಡ್ grabberಗಳಿಗೆ ಮಾಫಿಯಾದವರು, ಇದರಿಂದ ಅನುಕೂಲವಾಗುವುದು ಮಧ್ಯವರ್ತಿಗಳಿಗೆ. ಆದರೆ ಇದು ಒಳ್ಳೆಯದು, ಆದರೆ ದಯವಿಟ್ಟು ಒಂದು ಸತ್ಯ, ನಮ್ಮ ಅನುಭವಿ ಸದಸ್ಯರು ಹೇಳಿದ ಹಾಗೆ ಮಾನ್ಯ ಸಚಿವರು ಎಲ್ಲೋ ಒಂದು ಕಡೆ ಒರಿಜಿನಲ್ ಓನರ್ಸ್ ಇರುತ್ತಾರೆ, ಅಂಥವರಿಗೆ ಅನ್ಯಾಯವಾಗದ ಹಾಗೆ ಇದರಲ್ಲಿ ಸಣ್ಣಪುಟ್ಟ ಬದಲಾವಣೆಗಳಿದ್ದರೆ ಮಾಡಿ, ಇದನ್ನು ನೀವು ಏನಾದರೂ ಬಿಟ್ಟರೆ ಮತ್ತೆ ಮೂರು ಸಾವಿರ ಎಕರೆ, ಏನು ನಮ್ಮ ಸಿಂಧ್ಯಾ ಸಾಹೇಬರು ಹೇಳುತ್ತಾರೆ, ಇನ್ನೊಂದು ಆರು ತಿಂಗಳು ಬಿಟ್ಟುಕೊಂಡು ಹೋದರೆ ಮತ್ತೆ ಅಲ್ಲಿ ಸಾವಿರ ಅಲ್ಲ ಮುನ್ನೂರು ಎಕರೆ ಕೂಡ ಇರುವುದಿಲ್ಲ. ಎಲ್ಲಾ ಕಡೆಯೂ ಯಾರ್‍ಯಾರೋ ಸಣ್ಣಪುಟ್ಟ ಮನೆಗಳನ್ನು ಕಟ್ಟುತ್ತಾರೆ, ಅವರೇ ಬರುತ್ತಾರೆ ಡೀನೋಟಿಫಿಕೇಷನ್‌ಗೆ, ಯಾರದೋ ಇನ್‌ಫ್ಲೂಯೆನ್ಸ್ ತರುತ್ತಾರೆ, ಮತ್ತೊಂದು ಮಾಡುತ್ತಾರೆ, ಇವತ್ತು ನಮ್ಮ ಉದ್ದೇಶವೇನಿದೆ, ಅದು ಈಡೇರುವುದಿಲ್ಲ. ಎಲ್ಲಾ ಪತ್ರಿಕೆಗಳಲ್ಲಿ ನಾವು ಓದಿಕೊಳ್ಳುತ್ತೇವೆ ಮತ್ತೆ ಅದಾದ ಮೇಲೆ ಮರೆಯುತ್ತೇವೆ. ಏನಾದರೂ ಲೋಪದೋಷಗಳಿದ್ದರೆ ಅದನ್ನು ಒರಿಜಿನಲ್ ಆಗುತ್ತದೆನ್ನುವ ಉದ್ದೇಶವಿದ್ದರೆ, ದಯಮಾಡಿ ಮಾನ್ಯ ಸಚಿವರು ಅದರ ಬಗ್ಗೆ ಚಿಂತನೆ ಮಾಡಿ ಈಗ ತಂದಿರುವ ಕಾಯಿದೆ ಏನಿದೆ, ಇದು ನಿಜವಾಗಿಯೂ ಅದು ಬೆಂಗಳೂರಿಗೆ ಅಲ್ಲ, ಎಲ್ಲೋ ಒಂದು ಕಡೆ ನಾವು ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ನಾವು ಕಾಂಪಿಟೇಷನ್ ಮಾಡುತ್ತೇವೆಂದರೆ ಇದರ ಅವಶ್ಯಕತೆಯನ್ನು ಮಾತ್ರ ನೋಡಬೇಕೇ ವಿನ: ಸಣ್ಣಪುಟ್ಟ ತಪ್ಪುಗಳನ್ನೂ ನೋಡತಕ್ಕಂಥದ್ದು ಅಷ್ಟು ಸಮಂಜಸವಲ್ಲ. ಆದರೆ ಬಡ ಬೋರೇಗೌಡ ರೈತನಿಗೆ ಅನ್ಯಾಯವಾಗದ ಹಾಗೆ ಕಾನೂನಿನಲ್ಲಿ ಎಲ್ಲೋ ಒಂದು ಕಡೆ ಅವನಿಗೆ ಅನುಮತಿಯನ್ನು ನೀಡುವುದು ಸೂಕ್ತ.

ಶ್ರೀ ಡಿ.ಬಿ. ಇನಾಂದಾರ್ : ಈ ಆಕ್ಟ್‌ನ ಉದ್ದೇಶವೇ ಹಾಗೆ ಇದೆ, ಏನೆಂದರೆ ಅನ್ ಪ್ಲಾನ್ಡ್ ಡೆವಲಪ್‌ಮೆಂಟ್ ಆಗಬಾರದು ಎನ್ನುವ ದೃಷ್ಟಿಯಿಂದ ಲ್ಯಾಂಡ್ grabbers ಕಡೆ ಹೋಗತಕ್ಕದ್ದು ಆಗಬಾರದೆನ್ನುವ ದೃಷ್ಟಿಯಿಂದ ಇದನ್ನು ಮಾಡುತ್ತಿದ್ದೇವೆ.

ಶ್ರೀ ಸಿ. ಚೆನ್ನಿಗಪ್ಪ : ಮಾನ್ಯ ಛೇರ್‌ಮನ್‌ರವರೇ, ಈಗ ಬಡ ರೈತರು ಜಮೀನನ್ನು ತೆಗೆದುಕೊಳ್ಳಬೇಕು, ಬೆಂಗಳೂರನ್ನು ಸಿಂಗಪೂರ್ ಮಾಡಬೇಕು, ಮಾಡಲಿ, ನಾವು ಅದನ್ನು ಸ್ವಾಗತಿಸುತ್ತೇವೆ. ಆದರೆ ಬಡ ರೈತರ ಜೀವನ ನೆಲಸಮವಾದಾಗ ಅವನಿಗೆ ಸರ್ಕಾರ ಏನು ಕೊಡುತ್ತದೆಯೇ? ಸಾಧ್ಯವಿದೆಯೇ, ಬಿ.ಡಿ.ಎ. ನವರು ಇವತ್ತು ಜಮೀನು ಅಕ್ವಿಸಿಷನ್ ಮಾಡಿಕೊಂಡು ಅದನ್ನು 8 ಲಕ್ಷ ರೂ. ಗಳಿಗೆ ತೆಗೆದುಕೊಂಡು ಅದನ್ನು 2 ಕೋಟಿ ರೂಪಾಯಿಗಳಿಗೆ ಮಾರುತ್ತಾರೆ. ಅಂದರೆ 1.94 ಕೋಟಿ ರೂ ಲಾಭ ಸರ್ಕಾರಕ್ಕೆ ಸಿಗುತ್ತದೆ, ರೈತನಿಗೆ ಕಮೀಷನ್ ಏನಾದರೂ

ಕೊಡುತ್ತಾರೆಯೇ? ದಯಮಾಡಿ ಮಾನ್ಯ ಸಚಿವರು ಈ 28-29-30 ಅನ್ನು ತಿದ್ದುಪಡಿ ಮಾಡಿ, ಕೋರ್ಟಿಗೆ ಹೋಗುವಂತಹ ಅವಕಾಶವನ್ನು ನಿಗದಿಪಡಿಸಿ ಆ ಬಿಲ್ಲನ್ನು ಪಾಸ್ ಮಾಡಿದರೆ ಆಗ ಅದಕ್ಕೆ ಜನರ, ದೇವರ ಬೆಲೆ ಸಿಗುತ್ತದೆ. ಇಲ್ಲದಿದ್ದರೆ ಸರ್ಕಾರವು ಒತ್ತಾಯದಿಂದ ಆ ಬಿಲ್ಲನ್ನು ತಂದರೆ ಆ ಮಹಾಪಾಪದ ಹೊರೆಯನ್ನು ಹೊರಬೇಕಾಗುತ್ತದೆ.

ಮಾನ್ಯ ಛೇರ್‌ಮನ್ : ಯಾವಗಲ್ ರವರೇ ಹೇಳಿ.

ಶ್ರೀ ಬಿ.ಆರ್. ಯಾವಗಲ್ : ಈಗ ಈ ಕಾನೂನು ಏನು ಪಾಸ್ ಮಾಡುತ್ತಿದ್ದೀರಿ, ಇದು legal entity ಯನ್ನು create ಮಾಡುವಂತಹ ಒಂದು ಕಾನೂನು. ಪಬ್ಲಿಕ್ ಅಥಾರಿಟಿ ಆಗಲಿ, ಬೇರೆ ಬೋರ್ಡ್‌ಗಳಾಗಲೀ ಹಾಗೆ ಇದು ಒಂದು. ಆ ಸ್ಪೆಸಿಫಿಕ್ ವಿಶೇಷವಾದಂತಹ ಕೆಲಸಕ್ಕಾಗಿ ಇದನ್ನು ಕ್ರಿಯೇಟ್ ಮಾಡುತ್ತಿದ್ದಾರೆ. ಪ್ರಾರಂಭದಿಂದ ಅದರ ಅಬ್ಜೆಕ್ಟ್‌ಗಳನ್ನು ಹಿಡಿದುಕೊಂಡು ಅದರ ಕಾರಣಗಳನ್ನು ನೋಡಿದಾಗ ತಾವು ಒಂದೊಂದು ಹೇಳುತ್ತಾ ಹೋಗಿದ್ದೀರಿ, ಅಧಿಕಾರಿಗಳು ಇರಬಹುದು, definition ಇರಬಹುದು, ಅವರ ಅಧಿಕಾರಿಗಳನ್ನು ಹೇಳುತ್ತಾ, ಮತ್ತೊಂದು ಅವರ ಅಕೌಂಟ್ಸ್ ಎಲ್ಲವನ್ನೂ ಹೇಳುತ್ತಾ, ಕೊನೆಗೆ ಮಾನ್ಯ ಸ್ನೇಹಿತರು ಸೆಕ್ಷನ್ 29 ಮತ್ತು 30ಕ್ಕೆ ರೆಫರ್ ಮಾಡುತ್ತಿದ್ದಾರೆ. 29 ಏನೆಂದರೆ ಗುಡ್ ಫೇತ್ ನಲ್ಲಿ ಏನಾದರೂ ಮಾಡಿದಂತಹ ಕ್ರಮ, ಅದನ್ನು ಕೋರ್ಟ್ ಆಫ್ ಲಾ ನಲ್ಲಿ ಪ್ರಶ್ನೆ ಮಾಡಬಾರದು. ಯಾವುದರ ಬಗ್ಗೆ ಕ್ರಿಮಿನಲ್ ಇನ್‌ಟೆನ್‌ಷನ್‌ನಿಂದ ಮಾಡಿದ್ದಲ್ಲ. ಇದು ಸಾಮಾನ್ಯ ನಿಯಮದಲ್ಲಿ ಇಲ್ಲಾ ಆಕ್ಟ್‌ನಲ್ಲಿರುತ್ತದೆ. ಅಲ್ಲಿ ಬರುವ ಅಧಿಕಾರಿಗಳು, ಬೋರ್ಡ್‌ನವರೂ ಎಲ್ಲರೂ ಸೇರಿ ನಿಯಮವನ್ನು ಮಾಡಿರುವುದರಿಂದ ಆ ಚೌಕಟ್ಟಿನಲ್ಲಿ ಮಾಡಿರುವುದನ್ನು ಪ್ರತಿಯೊಂದು ಚಾಲೆಂಜ್ ಮಾಡುವಂತಹ ಅಧಿಕಾರವನ್ನು ಕೊಟ್ಟಿಲ್ಲ. ಇನ್ನೊಂದು ಸೆಕ್ಷನ್ 31ರ ಬಗ್ಗೆ ರೆಫರ್ ಮಾಡುತ್ತಿದ್ದಾರೆ, ದಾವೆಗಳು ಮುಂತಾದವುಗಳ ನಿಷೇಧ ಇದರ ಬಗ್ಗೆ ಸಹ ಅವರು ಪ್ರೊಡಕ್ಷನ್ ಹಾಗೂ ದಾವೆಗಳಿಲ್ಲ ಎಂದು ಹೇಳಿದ್ದಾರೆ. ಆದರೆ ಇದನ್ನು ವಿಶೇಷವಾದ ಪ್ರದೇಶವೆಂದು ಘೋಷಣೆ ಮಾಡಿ ಅಥಾರಿಟಿ ಮಾಡಿದಂಥದ್ದಕ್ಕೆ, ಪ್ರತಿಯೊಂದಕ್ಕೂ ಮತ್ತೆ ಆ ಜಮೀನು ಬೇಕು, ಪೊನೆಸ್ ಮಾಡಲಿಕ್ಕೆ ಇವರಿಗೆ ಅಥಾರಿಟಿ ಬಂತು, ಇದೊಂದು entity ಆಯಿತು. ಆ ಆಸ್ತಿಯನ್ನು ಹೊಂದಬಹುದು, ಅಧಿಕಾರವನ್ನು ಚಲಾವಣೆ ಮಾಡಬಹುದು. ಬ್ಯಾಂಕ್‌ನಲ್ಲಿ ಅಕೌಂಟ್ ಓಪನ್ ಮಾಡಬಹುದು. ತನ್ನ ಕಾರ್ಯಕೆಲಸವನ್ನು ಮಾಡಬಹುದು, ಆದರೆ ಅದಕ್ಕೆ ಬೇಕಾಗುವ ಜಮೀನು ಇರಬಹುದು, ಮತ್ತೊಂದು ಸೆಕ್ಯೂರಿಟಿ, ಇವೆಲ್ಲವನ್ನೂ ಮಾಡಲಿಕ್ಕೆ ಬೇರೆಯಾದ ಸ್ಪೆಸಿಫಿಕ್ ಕಾನೂನುಗಳಿವೆ. ಇದರಲ್ಲಿ ಭಯಪಡುವಂತಹ interpret ಮಾಡುವಂಥ ಅವಶ್ಯಕತೆಯಿಲ್ಲ. ಈ ಕಾನೂನು ಬಹಳ ಸೂಕ್ತವಾದುದು, ಇದನ್ನು ಗಮನಿಸಬೇಕು.

ಶ್ರೀ ಡಿ.ಬಿ. ಇನಾಂದಾರ್ : ಸೆಕ್ಷನ್ 30ರ ಬಗ್ಗೆ ಮಾತನಾಡುತ್ತಿದ್ದರು; Section 30 is for levying of taxes; so that authority should sustain

ಶ್ರೀ ಕೆ. ವಿಜಯಕುಮಾರ್ ಶೆಟ್ಟಿ : ನಮ್ಮ ಕರ್ನಾಟಕ ರಾಜ್ಯದಲ್ಲಿ, ಲ್ಯಾಂಡ್ ಅಕ್ವಿಸಿಷನ್ ಬಗ್ಗೆ ಕೈಗಾರಿಕಾ ಕ್ಷೇತ್ರದಲ್ಲಿ ಬಹಳ ಅಭಿವೃದ್ಧಿಯಾಗುತ್ತಿದೆ. ನಮ್ಮಲ್ಲಿ ನಾನು ತಿಳಿದ ಹಾಗೆ ಒಂದು ನಿಶ್ಚಿತವಾದ ಲ್ಯಾಂಡ್ ಅಕ್ವಿಸಿಷನ್ ಕಾನೂನು ಇಲ್ಲ. ನಾವು ಪ್ರತಿ ಸಲ ಲ್ಯಾಂಡ್ ಅಕ್ವೈರ್ ಆಗುವ ಸಂದರ್ಭದಲ್ಲಿ sea-bird, MRPL, Airport ಅನ್ನು ತುಲನೆ ಮಾಡುತ್ತೇವೆ; ಇದನ್ನು ತರುವುದೇನೋ ಒಳ್ಳೆಯದೇ, ಆದರೆ ಇದರಲ್ಲಿ ಸಂಪೂರ್ಣ ಮಾಹಿತಿ ಇಲ್ಲ. ಗುಜರಾತಿನಿಂದ, ತಮಿಳುನಾಡಿನಿಂದ, ಒರಿಸ್ಸಾದಿಂದ ಎಲ್ಲಾ ಬಂದು ಇಲ್ಲಿ ಕೆಲಸವನ್ನು ಪಡೆದುಕೊಳ್ಳುತ್ತಾರೆ, ಆದರೆ ಇಲ್ಲಿ ಜಾಗ ಕೊಟ್ಟ ನಮ್ಮ ಜನಕ್ಕೆ ಕೆಲಸ

ಸಿಗುತ್ತಿಲ್ಲ. ನಿಶ್ಚಿತವಾದ ಕಾನೂನನ್ನು ಯಾರು ನಿರ್ವಸದಿದಾರರಾಗುತ್ತಾರೆ ಅವರಿಗೆ ಕಾಂಪೆನ್‌ಸೇಷನ್ ಕೊಡುವುದರ ಜೊತೆಯಲ್ಲಿ ಅವರಿಗೆ ಒಂದು ಉದ್ಯೋಗವನ್ನು ಕೊಡುವಂತಹ ಕೆಲಸ ಆಗಬೇಕು... ಅವರ ಯೋಗ್ಯತೆಗೆ ತಕ್ಕ ಹಾಗೆ, ಎಸ್.ಎಸ್.ಎಲ್.ಸಿ. ಆದವನಿಗೆ ಇಂತದೇ ಕೆಲಸ, ಬಿ.ಕಾಂ. ಆದವನಿಗೆ ಇಂತಹ ಕೆಲಸ ಅಂಥ ಕೊಡಿ, ಇದು ಬಹಳ ಪ್ರಮುಖವಾದ ವಿಷಯ. ನಮ್ಮಲ್ಲಿ ಅನೇಕ ನಿರುದ್ಯೋಗಿ ಯುವಕರಿದ್ದಾರೆ. ಕೆಲಸಕ್ಕಾಗಿ ಅವರು ಎಲ್ಲೆಲ್ಲೋ ಹುಡುಕಿಕೊಂಡು ಹೋಗಬೇಕಾಗುತ್ತದೆ. ಹೊರ ಊರಿನಿಂದ, ಕೇರಳ, ಗುಜರಾತ್, ಒರಿಸ್ಸಾದಿಂದ ಬಂದವರು ಇಲ್ಲಿ ಕೆಲಸಕ್ಕೆ ನಿಲ್ಲುತ್ತಿದ್ದಾರೆ. ನಮ್ಮವರು ಎಲ್ಲಿ ಹೋಗುವುದು? ಲ್ಯಾಂಡ್ ಅಕ್ವಿಸಿಷನ್ ಮಾಡಿ, ಅಕ್ಟ್ ಬೇಕು, ನಿಶ್ಚಿತವಾಗಿ ನೀವು ಅಕ್ಟ್ ತರುವುದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ. ಎಲ್ಲದಕ್ಕೂ ನಾವು ರೆಫರೆನ್ಸ್ ಕೊಡುತ್ತಿದ್ದೇವೆ. ಏರ್‌ಪೋರ್ಟ್‌ಗೆ, ಸೀಬರ್ಡ್‌ಗೆ ಈ ರೀತಿ ಅಕ್ವೈರ್ ಮಾಡಿದ್ದೇವೆ, ಅದೇ ರಿತಿ ಇದಕ್ಕೂ ಕೊಡೋಣ. ಹಾಗಾಗಿ ನಿಶ್ಚಿತವಾದ ಒಂದು ಕಾನೂನು ಬೇಕು, ಆದರೆ ಇದು ಅರ್ಧದಲ್ಲೇ ನಿಲ್ಲಬಾರದು. ಸಂಪೂರ್ಣವಾಗಬೇಕು, ಇದು ಈಗ ಅರ್ಧ ಮಾತ್ರವಿದೆ. ನಿರ್ವಸದಿದಾರರಿಗೆ ಕೆಲಸವನ್ನು ಕೊಡುವಂಥಾದ್ದು ಆಗಬೇಕು. ದಯವಿಟ್ಟು ಇದನ್ನು ಸೇರಿಸಬೇಕೆಂದು ನಾನು ವಿನಂತಿಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಇದು ನೋಡುವಷ್ಟು ಸಿಂಪಲ್ ಆಗಿ ಈ carridor project ಇಲ್ಲ ಮಾನ್ಯ ಚೇರ್‌ಮನ್‌ರವರೇ. ಇದನ್ನು ನಾನು ತಪ್ಪು ತಿಳಿದುಕೊಂಡಿದ್ದೆ. ಇದರಲ್ಲಿ intentionsನಲ್ಲಿ statement and objective and reasons ಇದರಲ್ಲಿ ಏನು ಹೇಳಿದ್ದಾರೆಂದರೆ the Information Technology corridor site stretches from Electronic City in the South to old Madras road to the Northeast, encompassing an area of about 138.6 Sq.Kms 138 ಕಿ.ಮೀ. ಉದ್ದ, 138 ಕಿ.ಮೀ. ಅಗಲ it is more than 6000-7000 acres of land. It is not 100 acres. We are not understanding. This is the problem. 6 ಸಾವಿರ ಎಕರೆ ಜಮೀನು ಆನೇಕಲ್ ತಾಲೂಕಿನಲ್ಲಿ ಅಂದರೆ, ಅಗ್ರಿಕಲ್ಚರ್ ಲ್ಯಾಂಡ್ ಇರುವುದೇ 20–25 ಸಾವಿರ ಎಕರೆಯಷ್ಟು ಜಮೀನು; ಇಲ್ಲಿ ಏನು ಹೇಲಿದ್ದಾರೆಂದರೆ, ನೀವು ನಮ್ಮ ಮಾತನ್ನು ಇವತ್ತು ಕೊನೆಯ ದಿವಸ ಇದನ್ನು ತಡೆ ಹಿಡಿಯುತ್ತೀರಿ, ಯೋಚನೆ ಮಾಡುತ್ತೀರಿ ಎನ್ನುವ ದೃಷ್ಟಿಯಿಂದ ಹೇಳಿದರೆ ತಾವು ಅರ್ಥ ಮಾಡಿಕೊಳ್ಳದಿರುವುದು, ಅಂದರೆ ಸೆಕ್ಷನ್ 29 ರಲ್ಲಿ ಏನು ಹೇಳಿದ್ದಾರೆಂದರೆ, ನಿನ್ನೆ ಇದನ್ನು ವಿವರವಾಗಿ ಓಡಲಿಕ್ಕೆ ಆಗಲಿಲ್ಲ. ಬಜೆಟ್‌ಗಾಗಿ ತಯಾರಾಗುತ್ತಿದ್ದೆ. 30 ರಲ್ಲಿ ಏನು ಹೇಳಿದ್ದಾರೆಂದರೆ, ಬೆಟರ್‌ಮೆಂಟ್ ಟ್ಯಾಕ್ಸ್‌ಗೆ ಕೊಟ್ಟಿದ್ದಾರೆ, ಲ್ಯಾಂಡ್ ಪ್ರಾಪರ್ಟಿಗೆ ವ್ಯಾಲ್ಯೂ ಮಾಡಲಿಕ್ಕೆ ಕೊಟ್ಟಿದ್ದಾರೆ. ಹಾಗಾದರೆ ಅಲ್ಲಿರುವ ಹಳ್ಳಿಗಳನ್ನು, ಬಿಲ್ಡಿಂಗ್‌ಗಳನ್ನು ತಾವು ಬುಲ್ಡೋಜರ್ ತೆಗೆದುಕೊಂಡು ಒಡೆದು ಹಾಕುತ್ತೀರಾ? ಏನು ಅಂಥ ಅರ್ಜೆನ್ಸಿ ನಿಮಗೆ? ಆ ರೀತಿ ನೀವು ಮಾಡಲೇಬೇಕೆಂದರೆ ಸೆಲೆಕ್ಟ್ ಕಮಿಟಿ ಮುಂದೆ ಇಡಿ. I will tell you. This is another fraud, if you are going to do this in hurry. And as Mr.Somanna and Mr.Vijayakumar Shetty have said, nobody is opposed to this. ನಾವು ಇದಕ್ಕೆ ಅಪೋಸ್ ಮಾಡಿಲ್ಲ. We are for this. ಈ ತರಹದ ಕಾರಿಡಾರ್ ಬರಬೇಕೆಂದು ಹೇಳತಕ್ಕಂಥವರು but the way in which, you are going is not good. ಮತ್ತೊಂದು ಏನು ಹೇಳುತ್ತಿದ್ದೀರಿ ನೀವು ಅಂದರೆ, ಸಿವಿಲ್, ಮತ್ತೊಂದು ಕೋರ್ಟ್‌ಗೆ ಹೋಗಲಿಕ್ಕೆ ಆಗುವುದಿಲ್ಲವೆಂದು. ಡೈರೆಕ್ಟ ಆಗಿ ಹೈಕೋರ್ಟ್‌ಗೆ ಹೋಗಿ ಅಂತ ಹೇಳುತ್ತಿದ್ದೀರಿ. See, it is all simple. ಯಾವಗಲ್ ಸಾಹೇಬರೇ,

ತಾವು ದಯವಿಟ್ಟು ಇದನ್ನು ಅರ್ಥ ಮಾಡಿಕೊಳ್ಳಿ, ಇದು ಬನ್ನೇರುಘಟ್ಟಪಾರ್ಕ್, ನ್ಯಾಷನಲ್ ಪಾರ್ಕ್ ಅಂತ ಹೇಳಿಕೊಂಡು ಆನೇಕಲ್, ಕನಕಪುರ ತಾಲ್ಲೂಕಿನ ಜೀವವನ್ನು ಜನ ತೆಗೆದರು. ಈಗ ಉಳಿದಿರುವ 20,000 ಎಕರೆ ಜಮೀನನ್ನು ನೀವು ತೆಗೆದುಕೊಂಡು ಬಿಟ್ಟರೆ, ಆನೇಕಲ್‌ನ ಜನ ಎಲ್ಲಿ ನೇಣು ಹಾಕಿಕೊಳ್ಳಲಿಕ್ಕೆ ಹೋಗಬೇಕು? See all these problems are there ಅದಕ್ಕೆ ನಾವೇನು ಹೇಳುತ್ತಿದ್ದೇವೆಂದರೆ, ಇದನ್ನು ಪಾಸ್ ಮಾಡುವಂತಹದು ನಾಳೆಯೇ ಆಗಿಬಿಡುವುದಿಲ್ಲ. ಇದರಲ್ಲಿ ಏನು ಹೇಳಿದ್ದಾರೆಂದರೆ, ಇನ್‌ಟೆನ್‌ಷನ್ಸ್ ಹೇಲುವಾಗಲೇ ಏನು ಹೇಳಿದ್ದಾರೆಂದರೆ: To ensure speedy and efficient implementation, it is imperative to implement this plan immediately as new developments are taking place rapidly in the area ear-marked for the Information Technology carridor. ಏನು ಇದರ ಅರ್ಥ? ಇದರ ಅರ್ಥ ಏನೆಂದು ಹೇಳಿದರೆ ಈಗಾಗಲೇ ತಾವು ಹೇಳಿದ ಹಾಗೆ ಮಾಫಿಯಾದವರು ಎಂಟರ್ ಆಗಿದ್ದಾರೆ ಎನ್ನತಕ್ಕಂಥ ಉದ್ದೇಶ ಇದೆ. ಆದ್ದರಿಂದ ನಾವು ಇದನ್ನು ಯೋಚನೆ ಮಾಡುವುದಿಲ್ಲ. ನೀವು ನಿನ್ನೆ ಮಾತ್ರ ಇದನ್ನು ಇಟ್ಟಿದ್ದೀರಿ. ಇವತ್ತೇ ನಾವು ಇದನ್ನು ಪಾಸ್ ಮಾಡಿಬಿಡಬೇಕು ಎಂದರೆ ಇದಕ್ಕೆ ಏನು ಅರ್ಥ ಇದೆ?

ಶ್ರೀ ಬಿ.ಸೋಮಶೇಖರ್ : ಮಾನ್ಯ ಸಭಾಧ್ಯಕ್ಷರೇ, ನಾನು ಮೊದಲೇ ಹೇಳಿದೆ. ಈ ಟಾಸ್ಕ್‌ಫೋರ್ಸ್‌ನವರು ಈ ಪ್ರಾಜೆಕ್ಟ್‌ನನು ತಯಾರು ಮಾಡುವುದಕ್ಕೆ ಸುಮಾರು ಏಳೆಂಟು ಸಾವಿರ ಎಕರೆ ಅಂತ ಹೇಳಿದ್ದೀರಲ್ಲಾ, ಈ ದೇವಿಕಾರಾಣಿ ಎಸ್ಟೇಟ್ ಇದೆಯಲ್ಲಾ, ಅದರಲ್ಲಿ ಸುಮಾರು ಆರುನೂರು–ಏಳುನೂರು ಎಕರೆ ಜಮೀನು ಬರುತ್ತದೆ. ಅದರ ವ್ಯಾಲ್ಯೂ ಎಷ್ಟು ಕೋಟಿ ರೂ ಆಗುತ್ತದೆ ಎಂಬುದು ತಮಗೆ ಗೊತ್ತಿದೆ. ಈ ಏರಿಯಾದಲ್ಲಿ ದೇವಿಕಾ ರಾಣಿಯವರ ಎಸ್ಟೇಟ್ ಕವರ್ ಆಗುತ್ತದೆ. ನೀವು ಹಾಕಿಕೊಂಡಿರತಕ್ಕಂಥ ಪ್ರಾವಿಶನ್‌ನನ್ನು ನೋಡಿದರೆ ದೇವಿಕಾರಾಣಿಯವರ ಎಸ್ಟೇಟ್‌ನ್ನು ಅಕ್ವೈರ್ ಮಾಡಿಕೊಂಡು ಅವರಿಗೆ ಯಾವುದೇ ಟ್ಯಾಕ್ಸ್ ಅಥವಾ ಅಸೆಸ್‌ಮೆಂಟ್‌ನ್ನು ಸರಿಯಾಗಿ ಮಾಡದಿದ್ದರೂ ಅವರು ಕೋರ್ಟಿಗೆ ಹೋಗುವಹಾಗಿಲ್ಲ. ದೊಡ್ಡ ದೊಡ್ಡ ಖಾಸಗಿಯವರು ಸೇರಿಕೊಂಡು ಇದನ್ನು ಮಾಡಿಕೊಳ್ಳಬಹುದು. ಇದಂತೂ ಇಂತಹ ಒಂದು ಮರಣ ಶಾಸನ ಈ ಇತಿಹಾಸದಲ್ಲೇ ಬಂದಿಲ್ಲ. ಅದರಲ್ಲೂ ಅಧಿವೇಶನದ ಕೊನೆದಿನ ತರುತ್ತಾ ಇರತಕ್ಕಂಥದ್ದು ನೋಡಿದರೆ ನಿಜವಾಗಿಯೂ ನಿಮ್ಮ ಮುಖ್ಯಮಂತ್ರಿಗಳು ಇದರಲ್ಲಿ ಏನೋ ಒಂದು ದುರುದ್ದೇಶವನ್ನು ಇಟ್ಟುಕೊಂಡು ತಂದಿದ್ದಾರೆ. ಇದನ್ನು ತರುವುದಾದರೆ ನಮ್ಮ ಹೆಣದ ಮೇಲೆ ಇವರು ತೆಗೆದುಕೊಂಡುಹೋಗಲಿ. ನಾವು ನಿಂತುಕೊಳ್ಳಬೇಕಾಗುತ್ತದೆ. ಆದ್ದರಿಂದ ದಯವಿಟ್ಟು ಇದನ್ನು ಒಪ್ಪಬೇಡಿ, ಇದನ್ನು ಹಿಂದಕ್ಕೆ ತೆಗೆದುಕೊಳ್ಳಿ. ಇಲ್ಲದಿದ್ದರೆ ನಿಮ್ಮ ಸರ್ಕಾರ ಇದುವರೆಗೆ ಏನು ಒಳ್ಳೆಯ ಕೆಲಸ ಮಾಡಿದ್ದೇವೆ ಎಂದು ಹೆಮ್ಮೆಪಟ್ಟುಕೊಂಡಿದ್ದೀರಿ, ಇದೊಂದು ಬಿಲ್‌ನಿಂದ ಎಲ್ಲಾ ನಿಮ್ಮ ಮುಖವಾಡ ಕಳಚಿವಿದ್ದು ಹೋಗುತ್ತದೆ. ಖಂಡಿತವಾಗಿಯೂ ದೊಡ್ಡ ಅನ್ಯಾಯವಾಗುತ್ತದೆ. ಇದು ಸಾಧಾರಣವಾದ ಬಿಲ್ ಅಲ್ಲ. ಆದ್ದರಿಂದ ಇದನ್ನು ನಾವು ಒಪ್ಪಿಕೊಳ್ಳುತ್ತಿಲ್ಲ....

SRI D.B. INAMDAR : Within the C.D.P. it will regulate the land used in this area ಎನ್ನತಕ್ಕಂಥ ದೃಷ್ಟಿ ಇದರ ಉದ್ದೇಶ. ಇನ್ನು ಅಥಾರಿಟಿ ಏನು ಮಾಡುತ್ತದೆ? The I.T. Secretary will be the Chairperson of the Authority. Five members nominated by the Government will be the Members of the

Authority. It is these people who are going to take the decision. Planned development ಆಗಬೇಕು ಎನ್ನುವ ದೃಷ್ಟಿಯಿಂದ ಮಾಡಿದ್ದೇವೆ. otherwise land grabbers will take charge of these lands.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಇದು ಬೇರೆಬೇರೆ ಕಡೆ ಡಿಸ್ಟ್ರಿಬ್ಯೂಟ್ ಮಾಡಿ. ಪಾರ್ಕ್‌ನ್ನು ಏಕೆ ಒಂದೇ ಕಡೆಯಲ್ಲಿ ಮಾಡಬೇಕು? ಬೇರೆಬೇರೆ ಜಿಲ್ಲೆಗಳಿಗೆ ತೆಗೆದುಕೊಂಡುಹೋಗಿ. ನಾನು ಆಗಲೇ ಸಲಹೆ ಮಾಡಿದೆ. ಪೀಣ್ಯದಲ್ಲಿ ಇಂಡಸ್ಟ್ರಿಯಲ್ ಎಸ್ಟೇಟ್ ಇದೆ, ಹಾಗೆ ಎಲ್ಲೆಲ್ಲಿ ಇಂಡಸ್ಟ್ರಿಯಲ್ ಎಸ್ಟೇಟ್‌ಗಳು ಇವೆ , ಎಲ್ಲಿ ಏನೂ ಉತ್ಪಾದನೆ ಆಗುತ್ತಿಲ್ಲ, ಅದನ್ನು ಟೇಕ್‌ಓವರ್ ಮಾಡಿ. ಆದರೆ ಅಧ್ಯಕ್ಷರೇ, ಇದಕ್ಕೆ ಅವಕಾಶವನ್ನು ಕೊಡಬಾರದು.

SRI D.B. INAMDAR : The amount of growth that is going to take place for I.T. is phenomenal. We have the market share of 35% of all India exports till now and we have to maintain it. For that.... ನಮಗೆ ಬೇಕು. ಅದು ಬೆಳವಣಿಗೆ ಆಗುತ್ತಿದೆ. ಮಾನ್ಯ ಸುರೇಶ್‌ಕುಮಾರ್ ರವರೇ ನೀವೇ ಹೇಳಿದ್ದೀರಿ. ನಾಲ್ಕುನೂರು ಮಿಲಿಯನ್ ಡಾಲರ್ಸ್ ಅಂತ ಯಾರು ಮಾತನಾಡಿದ್ದಾರೋ ಗೊತ್ತಿಲ್ಲ. ಆದರೆ ಎಕ್ಸ್‌ಪೋರ್ಟ್ ಆಗತಕ್ಕಂಥಾದ್ದು– for every one I.T. job created, 5.5 other jobs will be created ಈ studies have shown us. ಆ ದೃಷ್ಟಿಯಿಂದ ಇವತ್ತು ಇದನ್ನು ಬರೇ ರಿಸ್ಟ್ರಿಕ್ಟ್ ಮಾಡುವುದಕ್ಕೆ ತಂದಿದ್ದು ಲ್ಯಾಂಡ್ ಗ್ರಾಬರರ್ಸ್ ಖರೀದಿ ಮಾಡತಕ್ಕಂಥಾದ್ದು ಅಲ್ಲ. ಆ ದೃಷ್ಟಿಯಿಂದ let us freezed this plan-ಎನ್ನತಕ್ಕಂಥ ದೃಷ್ಟಿಯಿಂದ ಈ ಅಥಾರಿಟಿಯನ್ನು ಎಸ್ಟಾಬ್ಲಿಶ್ ಮಾಡುತ್ತಿದ್ದೇವೆ. ಬೇರೆ ಯಾವ ದೃಷ್ಟಿಯಿಂದಲೂ ಅಲ್ಲ. ಕಾಮನ್ ಫೆಸಿಲಿಟೀಸ್ ಬಿಲ್ಡ್ ಮಾಡುವುದಕ್ಕೆ ಮಾಡುತ್ತಿದ್ದೇವೆಯೇ ಹೊರತಾಗಿ ಬೇರೆ ಯಾವ ಕಾರಣದಿಂದಲೂ ಅಲ್ಲ. This plan is on till 2022. It is not that 135SqKms. of land is going to be acquired tomorrow. or 135 Sq.Kms. is going to be denotified as per what you are all saying tomorrow. ಅದ್ಯಾವುದನ್ನೂ ಮಾಡುತ್ತಿಲ್ಲ. ಆದರೆ ಸರಿಯಾದ ರೀತಿಯಿಂದ ಪ್ಲಾನ್ಡ್‌ಡೆವಲಪ್‌ಮೆಂಟ್ ಆಗಲಿ, ಅನ್‌ಪ್ಲಾನ್ಡ್ ಆಗಿ, ಮಾನ್ಯ ಸೋಮಣ್ಣನವರು ಹೇಳಿರತಕ್ಕಂಥ ರೀತಿಯಲ್ಲಿ ಒಂದು ಲಕ್ಷ ಮನೆಗಳನ್ನು ಏನು ಅನಧಿಕೃತವಾಗಿ ಕಟ್ಟಿಕೊಂಡಿದ್ದರು ಅದನ್ನು ರೆಗ್ಯುಲರೈಸೆ ಮಾಡಿದ್ದಾರೆ. ಅದನ್ನು ಮಾಡಿದ್ದೇವೆ ಎಲ್ಲವನ್ನೂ ಕೂಡ ಮಾಡಿಕೊಂಡು ಹೊರಟರೆ ಇಲ್ಲಿ ಕೂಡ ಬಹಳಷ್ಟು ಅನಧಿಕೃತ ನಿರ್ಮಾಣಗಳು ಬರುತ್ತವೆ ಮತ್ತು ಅವುಗಳನ್ನೂ ಸಹ ರೆಗ್ಯುಲರೈಸ್ ಮಾಡಿಕೊಂಡು ಹೋಗತಕ್ಕಂಥ ಮಾತು ಬರುತ್ತದೆ. ಕಲ್ಕತ್ತಾ ಬಹಳ ಒಳ್ಳೆಯ ಸಿಟಿ ಇತ್ತು, ಅದಕ್ಕೆ ಬೇರೆ ಏನೋ ಹೆಸರು ಬಂತಲ್ಲಾ, ಆ ಹೆಸರು ನಮ್ಮ ಬೆಂಗಳೂರು ನಗರಕ್ಕೆ ಬರಬಾರದು ಎನ್ನತಕ್ಕಂಥ ಮಾತನ್ನು ನಾನು ಹೇಳುತ್ತಿದ್ದೇನೆ. ಆದ್ದರಿಂದ ದಯವಿಟ್ಟು ಇದನ್ನು ಒಪ್ಪಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನಾನು ಮಾನ್ಯ ಖರ್ಗೆಯವರಲ್ಲಿ ಮತ್ತೊಮ್ಮೆ ಮನವಿ ಮಾಡಿಕೊಳ್ಳುತ್ತೇನೆ. ದಯವಿಟ್ಟು ಇದನ್ನು ಮುಂದಿನ ಅಧಿವೇಶನದಲ್ಲಿ ಇಡಿ. ನಮ್ಮ ಪಾಯಿಂಟ್ಸ್ ಒಂದಕ್ಕೂ ಸಹಿತ ಅವರು ಕನ್ವಿಂಟ್ ಮಾಡುತ್ತಿಲ್ಲ. ಅವರು ಯಾವುದನ್ನೂ ಕನ್ವಿನ್ಸ್ ಮಾಡದೆ ನೀವು ಪಾಸ್ ಮಾಡಿ ಎಂದು ಹೇಳಿದರೆ ಇದರ ಅರ್ಥ ಏನಿದೆ? ಇದೇನು ನೂರು ಎಕರೇನಾ, ಇನ್ನೂರು ಎಕರೇನಾ, ಮುನ್ನೂರು ಎಕರೇನಾ? ಇದು 137 ಚದರ ಕಿಲೋಮೀಟರ್ ಇದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಈಗಾಗಲೇ ಅವರು ವಿವರಣೆ ನೀಡಿದ ಹಾಗೆ ಯಾವುದೇ ಒಂದು ಕಾರಿಡಾರ್ ಮಾಡಬೇಕು ಅಥವಾ ಪ್ರಾಜೆಕ್ಟ್ ಮಾಡಬೇಕು ಅಂದರೆ– certain area they have to select, like industrial estate. ನೀವು ಒಂದು ನಾಲ್ಕುನೂರು ಎಕರೆ, ಐದುನೂರು ಎಕರೆ ಅಥವಾ ಸಾವಿರ ಎಕರೆಯಲ್ಲಿ ಒಂದು ಕಡೆ ಮಾಡುತ್ತೀರಿ. ಈಗ ನಾವು ಮೊನ್ನೆ ಇಂಟರ್‌ನ್ಯಾಷನಲ್ ಏರ್‌ಪೋರ್ಟ್ ಮಾಡ್ತಿದೇವೆ. ಅದಕ್ಕೆ ನಾಲ್ಕು ಸಾವಿರ ಎಕರೆಯನ್ನು ನಾವು ಅಕ್ವೈರ್ ಮಾಡಿಕೊಂಡಿದ್ದೇವೆ. ಸಹಜವಾಗಿ ಇಲ್ಲಿಯೂ ಕೂಡ ಗೊತ್ತಿರುವ ಹಾಗೆ ಐ.ಟಿ. ಹಬ್ ಅಂತ ಅಂದಮೇಲೆ ಒಂದೇ ಸೈಡ್‌ನಲ್ಲಿ ಪ್ಲಾನ್ಡ್ ಡೆವಲಪ್‌ಮೆಂಟ್ ಮಾಡಬೇಕು. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಹೂಡಿಕೆದಾರರನ್ನು ಆಕರ್ಷಿಸುವುದಕ್ಕೆ ಅವರಿಗೆ ಒಂದೇ ಕಡೆಯಲ್ಲಿ ಟೆಕ್ನಾಲಜಿಯನ್ನು ಪ್ರೊವಾಯ್ಡ್ ಮಾಡಬೇಕು ಅಥವಾ ಅವರನ್ನು ಅಟ್ರಾಕ್ಟ್ ಮಾಡಬೇಕಾದರೆ we have to create some good atmosphere. ತಮಗೆ ಗೊತ್ತಿರುವಂತೆ ಇವತ್ತು ಹೈದರಾಬಾದ್‌ನಲ್ಲಿ ರಾಮೋಜಿಯವರು ಬರೇ ಒಂದು ಫಿಲ್ಮ್ ಸ್ಟುಡಿಯೋಗೆ ಐದುನೂರು–ಆರುನೂರು ಎಕರೆಗಿಂತಲೂ ಹೆಚ್ಚು ಜಾಗವನ್ನು ಅಕ್ವೈರ್ ಮಾಡಿಕೊಂಡು ಒಂದು ಸುಸಜ್ಜಿತ ಫಿಲ್ಮ್ ಸ್ಟುಡಿಂಹೋವನ್ನು ನಿರ್ಮಾಣ ಮಾಡಿದ್ದಾರೆ. ಹಾಗಿರುವಾಗ ಈಗಾಗಲೇ ನಮ್ಮಲ್ಲಿ ಐ.ಟಿ.ಗೆ ಒಂದು ಇಂಪಾಟೆನ್ಸ್ ಬಂದಿದೆ. ಆ ಇಂಪಾಟೆನ್ಸ್ ಅನ್ನು ಕಳೆದುಕೊಳ್ಳಬಾರದು ಮತ್ತು ಬೇರೆಯವರನ್ನೂ ಕೂಡ ಅಟ್ರಾಕ್ಟ್ ಮಾಡಬೇಕು ಎನ್ನತಕ್ಕಂಥ ದೃಷ್ಟಿಯಿಂದ ಇದನ್ನು ಮಾಡಿದ್ದೇವೆ. ಇದು ಕೆಲವು ಏರಿಯಾವನ್ನು ಡಿಮಾರ್ಕೇಟ್ ಮಾಡಿದರೆ ಬೇರೆಯವರು ಅಲ್ಲಿಗೆ ಬರುವುದಕ್ಕೆ ಆಗುವುದಿಲ್ಲ. ಇಲ್ಲದಿದ್ದರೆ ಕೆಲವು ಜನ ಶಾಲೆಗಳನ್ನು ತೆರೆಯಬಹುದು, ಇಂಜಿನಿಯರಿಂಗ್ ಕಾಲೇಜು ಬರಬಹುದು, ಮೆಡಿಕಲ್ ಕಾಲೇಜುಗಳು ಬರಬಹುದು; ಮತ್ತು ಬೇರೆಬೇರೆ ಫಾರ್ಮ್ ಹೌಸ್‌ಗಳು ಬರಬಹುದು. ಅದಕ್ಕಾಗಿ ಇದನ್ನು ಇಯರ್‌ಮಾರ್ಕ್ ಮಾಡಿ ಇಡುತ್ತಿದ್ದೇವೆ. ಇನ್ನೊಂದು ತಾವು ಇದಕ್ಕೆ ಸರಿಯಾದ ಮಾರ್ಕೆಟ್ ರೇಟ್ ರೈತರಿಗೆ ಸಿಕ್ಕುವುದಿಲ್ಲ, ಅವರಿಗೆ ನಷ್ಟವಾಗುತ್ತದೆ ಎನ್ನತಕ್ಕಂಥ ಮಾತನ್ನು ತಾವು ಹೇಳಿದ್ದೀರಿ. ಆದರೆ ಒಂದು ಪ್ರಾವಿಶನ್‌ನ್ನು ಅದರೊಳಗೆ ಮಾಡಿದ್ದಾರೆ. ಅದು ಏನು ಪ್ರಾವಿಶನ್ ಎಂದರೆ ಏನಾದರೂ ಅನ್ಯಾಯವಾದರೆ they can go to the court ಎನ್ನತಕ್ಕಂಥಾದ್ದು ಇದೆ. ಸರ್ಕಾರಕ್ಕೂ ನೋಟೀಸ್ ಕೊಡಲೇಬೇಕು, ಇದು ಮೂವತ್ತು ದಿವಸಗಳಲ್ಲಿ ಆಗಿದೆ ಎಂದು ಹೇಳಬೇಕು. ಆದ್ದರಿಂದ ಕೋರ್ಟಿಗೆ ಹೋಗಲಿಕ್ಕೆ ಕೂಡ ಅವಕಾಶ ಇದೆ. ಇಷ್ಟೊಂದು ಒಳ್ಳೆಯ ಕೆಲಸ ಇದಾಗಿದ್ದು, ಇದರಲ್ಲಿ ದುರುದ್ದೇಶ ಏನೂ ಇಲ್ಲ. ನಾವು ನೀವು ಸೇರಿ ಸಿಂಗಾಪೂರ್ ಪಾರ್ಕ್ ಮಾಡಿದ್ದೇವೆ. ಈಗ ಅದರಲ್ಲಿ ಪಾರ್ಟ್ ಪಾರ್ಟ್ ಕೊಡುತ್ತಿಲ್ಲವೇನು? ಯಾರ್‍ಯಾರು ಮುಖ್ಯವಾದ ಕೈಗಾರಿಕೋದ್ಯಮಿಗಳು ಬರುತ್ತಾರೋ ಅವರೆಲ್ಲರಿಗೂ ಕೂಡ ಕೆಲವು ಚದರ ಅಡಿ ಅಂತ ಅಥವಾ ಇಷ್ಟೊಂದು ಏರಿಯಾ ಅಂತ ಹೇಳಿ ನಾವು ಅಲಾಟ್‌ಮೇಂಟ್ ಮಾಡುತ್ತಿದ್ದೇವೆ. ಹಾಗೆಯೇ ಇದೊಂದು ದೊಡ್ಡ ಪ್ರಮಾಣದಲ್ಲಿ ಮಾಡುವಾಗ, ಇಂತಹ ಒಂದು ಒಳ್ಳೆಯ ಕೆಲಸಕ್ಕೆ ನಿಮ್ಮ ಸಪೋರ್ಟ್ ಇಲ್ಲವೆಂದರೆ ಕಷ್ಟವಾಗುತ್ತದೆ. ಇದು ಒಂದು ಸರ್ಟನ್ ಏರಿಯಾಅಂತ ಇದೆ.

ಶ್ರೀ ಡಿ.ಬಿ. ಇನಾಂದರ್ : ತಾವು ಓದಿರಬಹುದು. ಮೊನ್ನೆ ಗುಜರಾತ್‌ನಲ್ಲಿ ಸುಪ್ರೀಂ ಕೋರ್ಟ್ ಜಸ್ಟೀಸ್ ವಿರುದ್ಧ ಇಂಜೆನ್‌ಶನ್ ಕೊಟ್ಟಿದ್ದರು. ಆ ರೀತಿ ಆಗಬಾರದು ಎನ್ನರಕ್ಕಂಥ ದೃಷ್ಟಿಯಿಂದ ತಂದಿದ್ದೇವೆ.

ಶ್ರೀ ಎಸ್. ಸುರೇಶ್‌ಕುಮಾರ್ : ಸನ್ಮಾನ್ಯ ಸಭಾಧ್ಯಕ್ಷರೇ, ಸುಪ್ರೀಂ ಕೋರ್ಟ್ ಚೀಫ್ ಜಸ್ಟೀಸ್‌ಗೆ ವಾರೆಂಟ್ ಕೊಡುವುದು, ಪ್ರೆಸಿಡೆಂಟ್‌ಗೆ ವಾರೆಂಟ್ ಕೊಡುವುದು ಎಂದು ಹೇಳಿ ಅದಕ್ಕೋಸ್ಕರ ಇಲ್ಲಿ ಕೋರ್ಟಿಗೆ ಹೋಗಬಾರದು ಎಂದು ಹೇಳುವುದು ಏನಿದೆ ಇದಕ್ಕೆ ಏನು ಹೇಳಬೇಕೆಂದರೆ ಇದು Senseless relationship. ಅದು ಯಾವುದು ಇದ್ದರೂ lan You can't relate.ಈಗ ಮಾನ್ಯ ಖರ್ಗೆಯವರು ಒಂದು ಮಾತನ್ನು ಹೇಳಿದರು; ನಾವೇನೂ ಈ ಬಿಲ್‌ನ್ನು ದುರುದ್ದೇಶದಿಂದ ತರುತ್ತಿಲ್ಲ ಎಂದು. ನಾವೂ ಕೂಡ ವಿರೋಧವನ್ನು ದುರುದ್ದೇಶದಿಂದ ಮಾಡುತ್ತಿಲ್ಲ. ನಮಗೂ ಕೂಡ ನಮ್ಮ ರಾಜ್ಯ ಐ.ಟಿ. ಸೆಕ್ಟರ್‌ನಲ್ಲಿ ಮುಂದೆ ಬಂದಿರುವುದರ ಬಗ್ಗೆ ಹೆಮ್ಮೆ ಇದೆ. ಅದು ಇನ್ನೂ ಮುಂದೆ ಬರಬೇಕೆಂದು ಆಸೆ ಇದೆ. At the same time, ಆ ಐ.ಟಿ. ಹೆಸರಿನಲ್ಲಿ ಆಗಬಹುದಾದ ಅನಾಹುತ ಅದು ಇನಾಂದಾರ್ ಅವರು ಊಹೆ ಮಾಡುವುದಕ್ಕೆ ಆಗುವುದಿಲ್ಲ, ನಾನೂ ಊಹೆ ಮಾಡುವುದಕ್ಕೆ ಆಗುವುದಿಲ್ಲ. ಅಲ್ಲಿ ಯಾರು ಇರುತ್ತಾರೋ ಅವರು ಅನ್ಯಾಯ ಮಾಡುತ್ತಾರೆ. ಆ ಅನ್ಯಾಯ ಆಗುವಾಗ ಆ ಅಸಹಾಯಕ ವ್ಯಕ್ತಿಗೆ, ಆ ಸಾಮಾನ್ಯ ವ್ಯಕ್ತಿಗೆ ನಾವು ಈ ಒಂದು ಬಿಲ್‌ನಲ್ಲಿಯೇ ಸಹಾಯವನ್ನು ಒದಗಿಸಬೇಕು. ಅದು ಬಿಟ್ಟು ಅವನಿಗಿರುವ ವಾಯ್ಸ್ ಅನ್ನೂ ನಾವು ಕಿತ್ತುಕೊಂಡುಬಿಟ್ಟು, ಅವನ ಶಕ್ತಿಯನ್ನೇ ಕಿತ್ತುಕೊಂಡುಬಿಟ್ಟು ನಾವು ಇರುವುದೇ ನಿನ್ನ ಭೂಮಿಯನ್ನು ಕಿತ್ತುಕೊಳ್ಳುವುದಕ್ಕೆ, ನೀನೇನೂ ಮಾತನಾಡುವಹಾಗಿಲ್ಲ, ನೀನು ಕೋರ್ಟಿಗೆ ಹೋಗುವಹಾಗಿಲ್ಲ. ಹುಶಾರ್, ನಾವೆಲ್ಲಾ ಮಾಡುವುದು ಗುಡ್‌ಫೇತ್‌ನಲ್ಲೇ, ನಿನ್ನನ್ನು ನೇಣು ಹಾಕುವುದು ಕೂಡ ಗೊಡ್‌ಫೇತ್‌ನಲ್ಲೇ ಅಂತ ಅಂದರೆ It is inhuman. ಅದಕ್ಕೆ at the risk of repetition ನಾವು ಕೇಳುತ್ತಿರುವುದು. Remove those two clauses; happily we will agree for this Bill. ನೀವು ಒಪ್ಪಿಗೆಯನ್ನು ಪಡೆದು ತಕ್ಷಣ ಕೌನ್ಸಿಲ್‌ಗೆ ಓಡಿಹೋಗಬಹುದು.

ಶ್ರೀ ಡಿ.ಬಿ. ಇನಾಂದರ್ : ಇದು ಎಷ್ಟೊಂದು ನಡೆದಿದೆ ಎನ್ನುವುದು ನಿಮಗೆ ಗೊತ್ತಿದೆ. You know much than me. I don't have any lands here. Neither do I have any interest here. I can tell you about that.

ಶ್ರೀ ಎಸ್. ಸುರೇಶ್‌ಕುಮಾರ್ : ನಾವು ಅಲಿಗೇಶನ್ ಎಲ್ಲಿ ಮಾಡಿದ್ದೇವೆ?

SRI D.B. INAMDAR : I can tell you. Why the urgency, you asked me. Urgency is, there are lot of deals that are taking place. This will put a stop to that. Permissions are being given, it will put a stop to that ಎನ್ನುವ ಒಂದು ದೃಷ್ಟಿಯಿಂದ–we are trying to do this.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾಲ್ಕು ವರ್ಷಗಳಿಂದ ಹೈಟೆಕ್ ಸರ್ಕಾರವನ್ನು ನಡೆಸುತ್ತಿರುವ ನೀವು ಲಾಸ್ಟ್ ಇನ್ನಿಂಗ್ಸ್‌ನಲ್ಲಿ ಲಾಸ್ಟ್ ಬಾಲ್ ಆಗಿ ಇದನ್ನು ಏತಕ್ಕೆ ತೆಗೆದುಕೊಂಡು ಬಂದಿದ್ದೀರಿ/ ಇದನ್ನು ದಯವಿಟ್ಟು ವಿವರಿಸಿ. ಹದಿನಾರನೇ ತಾರೀಖಿಗೆ ಅಸೆಂಬ್ಲಿ ಡಿಸಾಲ್ವ್ ಆಗುತ್ತಿದೆ. ಇವತ್ತು ಅಧಿವೇಶನದ ಕೊನೆಯ ದಿನ. ಕೊನೆಯ ಆಗು ಗಂಟೆಯಲ್ಲಿ ಈ ಬಿಲ್‌ನ್ನು ನೀವು ತೆಗೆದುಕೊಂಡು ಬಂದಿದ್ದೀರಿ, ಯಾಕೆ if there is no hurry. ನಿನ್ನೆಯಿಂದಲೇ ಶುರುವಾಯಿತೇನು ಎನ್‌ಕ್ರೋಚ್ ಮಾಡುವುದಕ್ಕೆ, ಗುಡಿಸಲುಗಳನ್ನು ಹಾಕುವುದಕ್ಕೆ? ಆರು ಸಾವಿರ ಎಕರೆಯಲ್ಲಿ ಓವರ್‌ನೈಟ್ ಗುಡಿಸಲುಗಳನ್ನು ಹಾಕಿಬಿಡುತ್ತಾರಾ ಸ್ವಾಮಿ?

6.00 ಪಿಎಂ

ನಾವೂ ಸಹ ನಿಮ್ಮ ಹಾಗೆಯೇ ರಾಜ್ಯದ ಅಭಿವೃದ್ಧಿಯ ಬಗ್ಗೆ ಯೋಚನೆ ಮಾಡಿರತಕ್ಕಂಥವರು. ನಾವು ಆ ಕಡೆ ಇದ್ದಾಗ ನಿಮ್ಮ ಸಹಕಾರವನ್ನು ಕೇಳಿದ್ದೇವೆ. ನೀವು ಹೇಳಿದ್ದನ್ನೆಲ್ಲಾ ನಾವೂ ಸಹ ಜಾಯಿಂಟ್ ಸೆಲೆಕ್ಟ್ ಕಮಿಟಿಗಳಿಗೆ ಕೊಟ್ಟಿದ್ದೇವೆ. ಅನೇಕ ಸಂದರ್ಭಗಳಲ್ಲಿ ಈಗ ನಾವು ಜಾಯಿಂಟ್ ಸೆಲೆಕ್ಟ್ ಕಮಿಟಿಯನ್ನು ಕೇಳುತ್ತಿಲ್ಲ. ಏಕೆ ಜಾಯಿಂಟ್ ಸಲೆಕ್ಟ್ ಕಮಿಟಿಗೆ ಕೇಳುತ್ತಿಲ್ಲವೆಂದರೆ ಈ ಹೌಸ್ ಡಿಸಾಲ್ವ್ ಆಗುವಂತಹ ಸಂದರ್ಭಗಳು ಇವೆ ಎನ್ನುವುದನ್ನು ನಾವು ಕೇಳಿದ್ದೇವೆ. ಆದ್ದರಿಂದ ನಮ್ಮ ವಾಯ್ಸ್‌ನ್ನು ನಾವು ಹೇಳುವುದಕ್ಕೆ ಆಗುವುದಿಲ್ಲ. ಇಲ್ಲದೇ ಇದ್ದರೆ ಇದನ್ನು ಸೆಲೆಕ್ಟ್ ಕಮಿಟಿಗೆ ಕೊಡಿ ಸೆಲೆಕ್ಟ್ ಕಮಿಟಿ ಇದನ್ನು ನೋಡಲಿ ಎಂದು ಹೇಳುತ್ತಿದ್ದೆವು. ನಾವು ಎನು ಕೇಳುತ್ತಿದ್ದೇವೆ ಈ 45 ದಿವಸದಲ್ಲಿ ಏನಾಗುತ್ತದೆ? ಸ್ವಾಮಿ, ನಾನು ಹೇಳುತ್ತೇನೆ ತಾವೂ ಸಹ ವಕೀಲರು ಇದ್ದೀರಿ ಓದಿರತಕ್ಕಂಥವರು ತಾವೇ ಇದನ್ನು ಓದಿ. ತಾವು ಎಕ್ಸ್‌ಪ್ಲೇನ್ ಮಾಡಿ. ಎಲ್ಲಿ ಕೋರ್ಟಿಗೆ ಹೋಗುವುದಕ್ಕೆ ಅವಕಾಶ ಇದೆ ಜಮೀನು ಕಳೆದುಕೊಂಡಿರತಕ್ಕಂಥವರು? ಬಿಲ್ಡಿಂಗ್ ಇರತರಕ್ಕಂಥವರು ಅಂತ ಹೇಳಿ ಎಲ್ಲಾದರೂ ಒಂದು ಕಡೆ ಪ್ರಾವಿಜನ್ ಮಾಡಿದ್ದರೆ ಅಲ್ ರೈಟ್ ಮಾಡಲಿ ಎಂದು ನಾವು ಹೇಳಬಹುದಾಗಿತ್ತು. ಮತ್ತು ಈಗ ಇನ್ನೊಂದು ತಪ್ಪು ಎನು ಇದೆ ಅಂತ ಹೇಳಿದರೆ ನಮ್ಮ ಮಾನ್ಯ ವಿಜಯಕುಮಾರ್‌ರವರೂ ಸಹ ಭಾಗವಹಿಸಿದ್ದರು, ನಾನು ಬಹಳ ಸಂತೋಷ ಪಡುತ್ತೇನೆ. ಈಗ ಇದರಲ್ಲಿ ನಾವು ಐ ಟಿ ಕಾರಿಡಾರ್ ಮಾಡಿದ ತಕ್ಷಣವೇ ಆ ಯಶವಂತಪುರದಲ್ಲಿ ನೂರಾರು ಎಕರೆ ತೆಗೆದುಕೊಂಡು ಮಾಡಿರತಕ್ಕಂಥವರು ಅಲ್ಲಿಗೆ ಶಿಫ್ಟ್ ಮಾಡುವುದಕ್ಕೆ ಹೋಗುವುದಿಲ್ಲ. ಇನ್‌ಫ್ಯೋಸಿಸ್‌ನವರು ಶಿಫ್ಟ್ ಮಾಡುವುದಕ್ಕೆ ಹೋಗುವುದಿಲ್ಲ. ಸಿಂಗಾಪುರ ಟೆಕ್ನಾಲಜಿ ಪಾರ್ಕ್‌ನವರು ಶಿಫ್ಟ್ ಮಾಡುವುದಕ್ಕೆ ಹೋಗುವುದಿಲ್ಲ. This is entirely a new thing. ಹೊಸದಾಗಿ ಜನಗಳು ಬರಬೇಕಾಗುತ್ತದೆ. ಹೊಸ ಹೊಸದಾಗಿ ಬೇರೆ ರಾಷ್ಟ್ರಗಳಿಂದ ರಾಜ್ಯಗಳಿಂದ ಬರಬೇಕಾಗುತ್ತದೆ. ನಮ್ಮ ರಾಜ್ಯದವರೂ ಕೊಳ್ಳಬಹುದು. ಒಂದೇ ಕಡೆ ಇರತಕ್ಕಂಥ ಒಂದು ಸ್ಯಾಟ್‌ಲೈಟ್ ಟೌನ್ ಇದು. ನೀವು ಈ ರೀತಿ ಮಾಡಲೇಬೇಕು ಎಂದು ಹೇಳುವುದಾದರೆ ಈಗ ನಮ್ಮ ಬೆಂಗಳೂರು ವಿಮಾನಯಾನದ್ದು ಹೇಳಿದರು. ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ್ದು ಸುಮಾರು ಸಾವಿರಾರು ಎಕರೆ ಜಮೀನು ಸರ್ಕಾರ ಜಮೀನು. ಸರ್ಕಾರದ ವಶದಲ್ಲಿ ಇದ್ದದ್ದು ನಾವು ಕೇಂದ್ರಸರ್ಕಾರದ ಎರ್‌ಪೋರ್ಟ್ ಅಥಾರಿಟಿಗೆ ಕೊಟ್ಟಿರತಕ್ಕಂಥಾದ್ದು ನಾವು ಅಕ್ವೇರ್ ಮಾಡಿರತಕ್ಕಂಥಾದ್ದು ಬಹಳ ಕಡಿಮೆ ಅದರಲ್ಲಿ 2000 ಸಾವಿರ ಎಕರೆ ಅಷ್ಟೆ ಅವರು ಕೊಟ್ಟಿರತಕ್ಕಂಥಾದ್ದು 20 ಸಾವಿರ ಎಕರೆ. ಇಂಟರ್‌ನ್ಯಾಷನಲ್ ಏರ್‌ಪೋರ್ಟ್‌ಗೋಸ್ಕರ ನಾವು ತೆಗೆದುಕೊಂಡಿರುವುದು ಎರಡು ಸಾವಿರ ಎಕರೆ. Completely this is a new Bangalore. ನೀವು ಆ ರೀತಿ ಮಾಡಬೇಕೆಂದು ಇದ್ದರೆ ಒಂದು 30 ಕಿಲೋಮೀಟರ್ ದೂರದಲ್ಲಿ ಮಾಡಿ. ಯಾರು ಬೇಡವೆಂದು ಹೇಳುತ್ತಾರೆ. ಆಗ ನಾವು ಹೇಳುತ್ತೇವೆ. ಸಾರ್, ಇದು ನಿಮಗೆ ಅರ್ಥವಾಗುವುದಿಲ್ಲ ನೀವು ಬೇಜಾರು ಮಾಡಿಕೊಳ್ಳಬೇಡಿ, ರಂಗನಾಥ್‌ರವರೇ, ಈ ರಿಯಲ್ ಎಸ್ಟೇಟ್ ಈ ಡಿಲಿಂಗ್ಸ್ ಇವೆಲ್ಲಾ ನಿಮಗೆ ಬಹಳ ದೂರ ಇರತಕ್ಕಂಥವರು ಯಾವ ರೀತಿ ಹಣ ಬದಲಾವಣೆ ಆಗುತ್ತದೆಂದು ತಮಗೆ ಅರ್ಥವಾಗುವುದಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಅವರು ಹೇಳಿದ ಮಾತು ನೆನಪು ಬರುತ್ತಿದೆ. ಮಾನ್ಯ ಮುಖ್ಯಮಂತ್ರಿಗಳಿಗೆ ಚುಚ್ಚಿ ಚುಚ್ಚಿ ಮಾತನಾಡಿದಿರಲ್ಲಾ ಅದೇ ರೀತಿ ಈಗ ಮಾನ್ಯ ಇನಾಂದರ್ ಅವರಿಗೆ ಹೇಳುತ್ತಿದ್ದೀರಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನಾನು ಇನಾಂದಾರ್‌ರವರಿಗೆ ಹೇಳಿದ್ದು. ನಿಮಗೆ ಹಾಗೆ ಹೇಳುವುದಿಲ್ಲ.

ಶ್ರೀ ಕೆ.ಎಚ್. ರಂಗನಾಥ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಿಂಧ್ಯಾರವರು ಪ್ರಸ್ತಾಪ ಮಾಡಿದರು. ಸ್ಟೇಟ್‌ಮೆಂಟ್ ಅಂಡ್ ಅಬ್ಜೆಕ್ಟ್ ಅಂಡ್ ರೀಜನ್ಸ್ ಅನ್ನು ನಾನು ನೋಡಿದೆ. ನಾನು ಬಂದಾಗ ಮಾನ್ಯ ಸುರೇಶ್ ಕುಮಾರ್‌ರವರು ಸೆಕ್ಷನ್ 11 ಅನ್ನು ಪ್ರಸ್ತಾಪ ಮಾಡುತ್ತಿದ್ದರು. ಸೆಕ್ಷನ್ 30 ಅನ್ನು ಪ್ರಸ್ತಾಪ ಮಾಡಿದರು. ಸೆಕ್ಷನ್ 11 ನಲ್ಲಿ it is only an enabling provision. ನನಗೆ ಅದು ಅರ್ಥವಾಗುವುದಿಲ್ಲವೆಂದು ಮಾನ್ಯ ಸಿಂಧ್ಯಾರವರು ಹೇಳಿದರು. ನನಗೂ ಲಾ ಅರ್ಥವಾಗುತ್ತದೆ. This is law only. ಅಬ್ಜೆಕ್ಟ್ ಎನು ಇದೆ ಸ್ವಾಮಿ? Haphazard ಆಗಿ ಬೆಳೆದಿದೆ, ಇದನ್ನು ಒಂದು ವ್ಯವಸ್ಥೆಯಲ್ಲಿ ತರಬೇಕು ಎಂದು ಸೆಕ್ಷನ್ 30 ಇದು, ಭೂಮಿ ಬೇಕಾಗುತ್ತದೆ. ಸೆಕ್ಷನ್ 11 it is only an enabling provision. ಬೇಕಾದರೆ ಇದಕ್ಕೆ ಲ್ಯಾಂಡ್ ಅಕ್ವಿ ಜೇಷನ್ ಅಕ್ಟ್ ಸಹ ಅನ್ವಯಿಸುತ್ತದೆ. ಸೆಕ್ಷನ್ 24ರಲ್ಲಿ ಇದೆ. It is a contingency provision. ಬೇಕಾಗತಕ್ಕಂಥ ಪರಿಸ್ಥಿತಿ ಬಂದರೆ Any land required by the Authority for carrying out its functions under the Act shall be deemed to be required for a public purpose. That is the intention ಅಂತ ಹೇಳಿದ ಮೇಲೆ Land, if any, required by the Authority may be got acquired under the provisions of the Land Acquisition Act. ಆ ಪ್ರಕಾರ 30 ಮತ್ತು 31 ಅದೇ ಆಗುತ್ತದೆ. ಪರಿಹಾರ ಇಲ್ಲದೇ ಮಾಡುವುದಕ್ಕೆ ಬರುವುದಿಲ್ಲ. ಸೆಕ್ಷನ್ 11 it is only an enabling probvision. It says, the Authority shall have the power to do such activities as it may consider necessary or expedient for the purposes of carrying out its functions under this Act. ಇದರ functions ಏನು, (i) to acquire and hold such movable and immovable property... Any Authority will have these provisions, ಜನರಲ್ ಪ್ರಾವಿಜನ್ ಇದ್ದ ಹಾಗೆ ಇದೆ. It is only an enabling provision. I do not know how this affects the Constitution. Ultra-virus ಯಾವ ತರಹ ಇದೆ? Section 11, General powers of Authority-what are the powers? The Authority shall have the power to do such activities as it may consider necessary or expedient for the purposes of carrying out its functions under this Act.ಯಾವ್ಯಾವುದು-to acquire and hold such properties...ಕೋಆಪರೇಟೀವ್ ಆಕ್ಟ್‌ನಲ್ಲಿ ಇದೆ; ಎಲ್ಲಾ ಅಕ್ಟ್‌ನಲ್ಲೂ ಇದೆ. ಬೇಕಾದರೆ ಮಾಡುತ್ತೇವೆಂದು. ಮತ್ತೆ ಸ್ವಾಮಿ ತಾವು ಬೆಟರ್‌ಮೆಂಟ್ ಲೆವಿ ಬಗ್ಗೆ ತಾವು ಪ್ರಸ್ತಾಪ ಮಾಡಿದಿರಿ. ಮಾನ್ಯ ಸಿಂಧ್ಯಾರವರು. ಈಗ ಇರಿಗೇಶನ್ ಅಕ್ಟ್‌ನಲ್ಲೂ ಕೂಡ ಬೆಟರ್‌ಮೆಂಟ್‌ಲೆವಿ ಮಾಡುತ್ತೇವೆ. ಏತಕ್ಕೆ ಸರ್ಕಾರದ ದುಡ್ಡಿನಿಂದ ಆ ಚಾನಲ್ ವಗೈರೆ ಮಾಡುವುದರಿಂದ ಅದನ್ನು ಬಳಸತಕ್ಕಂಥದ್ದರಿಂದ ಅವನ ಭೂಮಿ ಬೆಲೆ ಜಾಸ್ತಿಯಾಗುವುದರಿಂದ it has been done at the cost of the Government. Therefore, you have got a right to pay the betterment tax ಎನ್ನತಕ್ಕಂಥಾದ್ದೇ ಉದ್ದೇಶ. ಅದು ನಾಳೆ ಜಾಸ್ತಿಯಾಗಬಹದು ಕಡಿಮೆಯಾಗಬಹುದು ಈ ತರಹ ಇದೆ. ತಾವು ಹೇಳಿದ್ದನ್ನು ಕನ್ಸಿಡರ್ ಮಾಡುವುದು ಮಾನ್ಯ ಸಚಿವರಿಗೆ

ಬಿಟ್ಟಿದ್ದು ಆ ಮಾತುಬೇರೆ. ಆದರೆ how is this ultra-virus?ಎಲ್ಲಿದೆ ಪ್ರಾವಿಜನ್? It is only an enabling provision. Section 11 only explains the functions. ಒಂದು ವೇಳೆ ಬೇಕು ಎಂದು ಹೇಳುವುದಾದರೆ ಅಲ್ಲಿ ವ್ಯವಸ್ಥಿತವಾಗಿ ಮಾಡತಕ್ಕಂಥಾದ್ದಕ್ಕೆ ಲ್ಯಾಂಡ್ ಅಕ್ವಿಜೇಶನ್ ಅಕ್ಟ್ ಸೆಕ್ಷನ್ 2 ನಲ್ಲಿ ಸ್ಪೆಸಿಪಿಕ್ ಆಗಿ ಹೇಳಿದ್ದಾರೆ. ತಾವು ಪ್ರಸ್ತಾಪ ಮಾಡಿದಿರಿ ನಾನು ನೋಡಿದೆ. ಮತ್ತೆ 30ರ ಬಗ್ಗೆ ಕೂಡ ಮಾನ್ಯ ಸುರೇಶ್‌ಕುಮಾರ್‌ರವರು ಹೇಳುತ್ತಿದ್ದರು.

ಶ್ರೀ ಸುರೇಶ್ ಕುಮಾರ್ : ಸೆಕ್ಷನ್ 29, 31 ನೋಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಸನ್ಮಾನ್ಯ ಅಧ್ಯಕ್ಷರೇ, Section 29 invariably ಎಲ್ಲಾ ಆಕ್ಟ್‌ಗಳಲ್ಲೂ ಇರುತ್ತದೆ. Because of good faith...

SRI K.H. RANGANATH : Section 28-Officers and servants of the Authority to be public servant ಅಂತ ಹೇಳಿದ್ದಾರೆ. Section 29-Protection of action taken under this Act. Any Government servant supposing he does it unless bonafide is proved, everything done by the public servant is with good intention ಎಂದು ಲಾ ಇರತಕ್ಕಂಥಾದ್ದು. The basic thinking of law. ಇಲ್ಲ ಎಂದು ಹೇಗೆ ಹೇಳುತ್ತೀರಿ?

ಶ್ರೀ ಬಿ. ಸೋಮಶೇಖರ್ : ಮಾನ್ಯ ಅಧ್ಯಕ್ಷರೇ ಅವರು ಕೊನೆಯಲ್ಲಿ ಬಂದರು. ಅವರು ಈ ಪ್ರಾವಿಜನ್ಸ್ ಓದಲಿಲ್ಲ ಎಂದು ಕಾಣುತ್ತದೆ. ಒಂದು ತಾವು ಎನು ಹೇಳಿದಿರಿ. ಜನರಲ್ ಲ್ಯಾಂಡ್ ಅಕ್ವಿಜೇಶನ್ ಅಕ್ಟ್ ಪ್ರಕಾರವೇ ಸೆಕ್ಷನ್ 1984 (16) ಏನು ಇದೆಯಲ್ಲಾ ಅದರ ಪ್ರಕಾರವೇ ಮಾಡುತ್ತಾರೆ ಆದರಿಂದ that Law is applicable to this Act.

SRI K.H. RANGANATH : If the Authority required any land to be acquired, it has got powers under Section 11.

SRI B. SOMASHEKAR : Suppose under this provision, if the land acquisition is quashed, you see sub-section 9 0f Section 30. Nothing in this section shall debar subsequent acquisition of the land concerned by the Authority, if such acquisition is considered necessary for the purposes of this Act.

SRI K.H. RANGANATH : If the earlier acquition is held valid nothing will debar. That is only...

SRI B. SOMASHEKAR : Nothing in this section shall debar subsequent acquisition means if that earlier acquisition is quashed..

SRI K.H. RANGANATH : Supposing for arguments' sake, anybody were to question the earlier acquisition and if it is held valid...ಅಥವಾ ಒಂದು ವೇಳೆ set aside ಆಯಿತು, valid ಎಂದು ಆಯಿತು...

SRI B.SOMASHEKAR : In Section 31-Bar of suits etc. No order passed or proceedings taken by the Authority or an officer of the

Authority under this Act, shall be called in question in any court...

SRI K.H. RANGANATH : That is because he is a Government Servant.

SRI B. SOMASHEKAR : Can he do anything and everything?

SRI K.H. RANGANATH : No. How can that be?

SRI MALLIKARJUNA KHARGE : You take any Act. This is a common sentence and common section. To give protection to the government servant, who acts in a good faith the protection is given under the Act, not only in this Act, even in Cr.P.C., even in Land Reforms Act, Revenue Act, all Acts. Section 29.

SRI K. JAIPRAKASH HEGDE : Not against the officer. ಅಕ್ವಿಸಿಷನ್‌ನ್ನೇ ಚಾಲೆಂಜ್ ಮಾಡಬಾರದು ಎಂದು ಹೇಳಿರುವಂಥಾದ್ದು ಇದು. ಲ್ಯಾಂಡ್ಸ ಓನರ್‌ಗೆ ಅಕ್ವಿಸಿಷನ್ ಚಾಲೆಂಜ್ ಮಾಡುವುದಕ್ಕೆ ಅವಕಾಶ ಇಲ್ಲ.

ಶ್ರೀ ಡಿ.ಬಿ. ಇನಾಂದಾರ್ : ಅಕ್ವಿಸಿಷನ್ ಲ್ಯಾಂಡ್ ಚಾಲೆಂಜ್ ಮಾಡುವುದಕ್ಕೆ ಸೆಕ್ಷನ್ 31 ನೋಡಿ....Under Land Acquisition Act, you can acquire land.

SRI K.H. RANGANATH : Protection is given to the government officers or the authority of the officer. Supposing it is held valid, unless the bonafide is proved......

SRI B. SOMASHEKAR : Please see Section 31(3);

> ``(3) No officer or servant of the Authority shall be liable in respect of any such act in any civil or criminal proceeding it the if the act was done in good faith in the course of execution of duties or the discharge of the functions imposed by or under this Act."

what is good faith? If an officer takes any decision unilaterally, it cannot be questioned in any Court of law ಎಂದು ಅರ್ಥ ಬರುತ್ತದೆ. ಯಾವ ಆಕ್ಟ್‌ನಲ್ಲೂ ಈ ಪ್ರಾವಿಷನ್ ಇಲ್ಲ. ಆಮೇಲೆ ಇನ್ನೊಂದು,

> ``(2) No suit, prosecution or other proceeding shall lie against any officer or servant of the State Government for any act done or purported to be done under this Act. Without the previous sanction of the State government."

ಸರ್ಕಾರದ ಅಧಿಕಾರಿಗಳು ತಪ್ಪು ಮಾಡಿದರೂ, ಅವರ ಮೇಲೆ ಕ್ರಮ ತೆಗೆದುಕೊಳ್ಳದೇ ಹೋದರೆ ಮತ್ತೆ ಪರ್ಮಿಷನ್ ಕೇಳಬೇಕು.

In Section 31(5)

``(5) In the case of an intended suit against any officer or servant of the Authority under sub-section (2), the person intending to sue shall be bound to give the officer or servant, as the case may be, at least one month's notice of the intended suit with sufficient description of the cause of action failing which such suit shall be dismissed." ಅಂದರೆ,

He can first inform the State Government narrating the reasons. Suppose the Government turn down the request-the Government can turn down his request- he cannot go the court. ಇಲ್ಲ, ಈ ತರಹ ಯಾವುದರಲ್ಲೂ ಆಗಿಲ್ಲ.

SRI MALLIKARJUNA KHARGE : He can go to the Court.

SRI B. SOMASHEKAR : ಇದು ತಪ್ಪಾಗುತ್ತದೆ.

ಶ್ರೀ ಡಿ.ಬಿ. ಇನಾಂದಾರ್ : ಮಾನ್ಯ ಅಧ್ಯಕ್ಷರೇ, ದಯವಿಟ್ಟು ಈ ಬಿಲ್‌ನ್ನು ಪಾಸ್ ಮಾಡಿಕೊಡಬೇಕಾಗಿ ಕೇಳಿಕೊಳ್ಳುತ್ತೇನೆ.

SRI B. SOMASHEKAR : Don't put the Bill into vote. No. Please. Don't embarrass the Government. Don't embarrass the Opposition also. This will create an unpleasant atmosphere in the entire State.

ಶ್ರೀ ಡಿ.ಬಿ. ಇನಾಂದಾರ್ : ಮಾನ್ಯ ಅಧ್ಯಕ್ಷರೇ, ಈ ಪ್ರಾವಿಷನ್ ಇದ್ದಂಥ ಸಾಕಷ್ಟು ಬಿಲ್‌ಗಳನ್ನು ಪಾಸ್ ಮಾಡಿದೆ. where office is have been given the protection for discharging their duties. But, it should not appear that we are giving room for somebody to create haphazard development because time is given. ಇದನ್ನು ಪ್ರಾರಂಭ ಮಾಡಿದ್ದು 2001 ರಲ್ಲಿ. 2003 ರಲ್ಲಿ ಜೆ.ಟಿ.ಸಿ.ಐ. ನವರು ಸರ್ವೆ ಮಾಡಿದ್ದಾರೆ. After that, 16 ಡಿಪಾರ್ಟ್‌ಮೆಂಟ್‌ಗಳಿಗೆ ಹೋಗಿ ಒಪೀನಿಯನ್ ತೆಗೆದುಕೊಂಡು ಬಂದು ಈ ಆಕ್ಟ್ ತಯಾರಾಗಿದೆ. ಇವತ್ತು ಸದನದ ಮುಂದೆ ಬಂದಿದೆ. ದಯವಿಟ್ಟು, The best thing that could be done to protect this, I think this House should pass this unanimously.

SRI B. SOMASHEKAR : The very fact that the Government is placing this controversial Act at the fag end of the Sesssion, gives room

for suspicion and this House should not agree for this. ಇದನ್ನು ನೀವು 2–3 ವರ್ಷಗಳ ಹಿಂದೆಯೇ ತರಬಹುದಿತ್ತು. ದಯವಿಟ್ಟು ನಾವು ಇದನ್ನು ಒಪ್ಪುವುದಕ್ಕಾಗುವುದಿಲ್ಲ. ಬೇಕಾದರೆ ನಾವು ಧರಣಿ ಮಾಡುತ್ತೇವೆ. ನೀವು ಏನಾದರೂ ಮಾಡಿಕೊಳ್ಳಿ. (ಎ.ಬಿ.ಪಿ.ಜೆ.ಡಿ. ಸದಸ್ಯರು ಮತ್ತು ಜನತಾ ದಳ (ಎಸ್) ಸದಸ್ಯರು ಹಾಗು ಬಿ.ಜೆ.ಪಿ. ಸದಸ್ಯರು ಸಭಾಧ್ಯಕ್ಷರ ಪೀಠದ ಮುಂದೆ ಧರಣಿ ನಡೆಸಲು ಬಂದರು.)

MR. CHAIRMAN : Please sit down.I will enlighten the Government, I say.

SRI D.B. INAMDAR : In section 68(B) of the Karnataka Excise Act, it says:

> ``Bar of jurisdiction of Civil Courts- No Civil Court shall have jurisdiction in respect of any matter which any excise officer or other authority empowered by or under this Act has to determine and no injunction shall be granted by any Court in respect of any action taken or to be taken by such excise officer or authority in pursuance of any power conferred by or under this Act."

ಗೊಂದಲ

MR. CHAIRMAN : Let me enlighten. ಇನ್ನೂ ಪರೀಕ್ಷೆಯೇ ಆಗಿಲ್ಲ, ಪರೀಕ್ಷೆಯಲ್ಲಿ ಪಾಸ್ ಆಯಿತು ಎಂದು ಯಾರು ಹೇಳುವುದಕ್ಕೆ ಹೋಗುತ್ತಾರೆ? Sri Inamdar, kindly enlighten this much to the House.

(ಸನ್ಮಾನ್ಯ ಅಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶ್ರೀ ಡಿ.ಬಿ. ಇನಾಂದಾರ್ : ಆಯಿತು. ಮುಂದಿನ ಅಧಿವೇಶನದಲ್ಲಿ ಈ ಬಿಲ್‌ನ್ನು ತೆಗೆದುಕೊಳ್ಳಲಾಗುವುದು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮುಂದೆಯೂ ನಮ್ಮ ಸರ್ಕಾರ ಬರುತ್ತದೆಂಬುದು ನಿಮಗೆ ಅರ್ಥವಾಯಿತಲ್ಲಾ. ನಾವು ಕಾನ್‌ಫಿಡೆಂಟಾಗಿ ಅದನ್ನು ಮುಂದಕ್ಕೆ ಹಾಕಿದ್ದೇವೆ.

(ಎ.ಬಿ.ಪಿ.ಜೆ.ಡಿ., ಜೆ.ಡಿ.(ಎಸ್) ಮತ್ತು ಬಿ.ಜೆ.ಪಿ. ಸದಸ್ಯರುಗಳು ಧರಣಿಯನ್ನು ಹಿಂದಕ್ಕೆ ತೆಗೆದುಕೊಂಡರು)

ಶ್ರೀ ಹೆಚ್. ವಿಶ್ವನಾಥ್ : ಸನ್ಮಾನ್ಯ ಅಧ್ಯಕ್ಷರೇ,...

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನಾವು ಇವತ್ತು ಬೆಳಿಗ್ಗೆ 8–30 ಗಂಟೆಗೆ ಮನೆ ಬಿಟ್ಟಿದ್ದೇವೆ. ಈಗಾಗಲೇ 6 ಗಂಟೆಯಾಗಿದೆ. ಇನ್ನೂ ನಾಲ್ಕು ಬಿಲ್ಲುಗಳಿವೆ. ಜೊತೆಗೆ. ನಾವು ನಿಮಗೆಲ್ಲರಿಗೂ ಥ್ಯಾಂಕ್ಸ್ ಹೇಳಬೇಕಾಗಿದೆ. ಕಳೆದ ನಾಲ್ಕೂವರೆ ವರ್ಷಗಳಲ್ಲಿ ಬಹಳ ಒಳ್ಳೆಯ ಕೆಲಸ ಮಾಡಿದ್ದೀರಿ. ಇವತ್ತು ಸದನವನ್ನು ಮುಂದೆ ಹಾಕಿ, ನಾಳೆ ಉಳಿದ ಬಿಲ್ಲುಗಳನ್ನು ಮಾಡಿಕೊಳ್ಳೋಣ.

ಶ್ರೀ ಎಸ್.ಎಸ್. ಪಾಟೀಲ್ : ಇನ್ನುಎರಡು ತಿಂಗಳಲ್ಲಿ ಏನು ಅನಾಹುತವಾಗುತ್ತದೆ? ಇದನ್ನು ನಿರಶನಗೊಳಿಸಿ, ಆಕಾಶವೇನೂ ಕಳಚಿ ಬೀಳುವುದಿಲ್ಲ. ದಯವಿಟ್ಟು ಇದನ್ನೂ ಮುಂದಕ್ಕೆ ಹಾಕಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಾವು ತಬ್ಬಿಕೊಂಡು ಹೋದರೆ, ನೀವೆಲ್ಲಾ ಹೊಡೆದುಕೊಂಡೇ ಹೋದರೆ ಹೇಗೆ?

ಶ್ರೀ ಎಸ್.ಎಸ್. ಪಾಟೀಲ್ : ಸದ್ಯಕ್ಕೆ ಇದೇನೂ ಅವಶ್ಯ ಇಲ್ಲ. ಸರ್ಕಾರದ ಸೌಹಾರ್ದ ಕಾಯಿದೆಯನ್ನು ಆಗ ನೀವೇ ಪಾಸ್ ಮಾಡಿಕೊಟ್ಟಿರಿ. ಈಗ ಮತ್ತೆ ತಿದ್ದುಪಡಿ ತಂದು ಅಧಿಕಾರಿಗಳಿಗೆ, ಅಧಿಕಾರ ಕೊಡುವುದಕ್ಕೆ ಮಾಡುತ್ತಿದ್ದೀರಿ.

ಶ್ರೀ ಹೆಚ್. ವಿಶ್ವನಾಥ್ : ಸನ್ಮಾನ್ಯ ಅಧ್ಯಕ್ಷರೇ, ಈ ಸೌಹಾರ್ದ ತಿದ್ದುಪಡಿ ಕಾನೂನು ಏನಿದೆ, ಇದು ಮೇಲ್ಮನೆಯಲ್ಲಿ ಪಾಸಾಗಿದೆ. ಮೇಲ್ಮನೆಯಲ್ಲಿರತಕ್ಕ ಹಿರಿಯ ಸಹಕಾರಿಗಳಾದ ನಾಣಯ್ಯನವರು, ವಿ.ಎಸ್. ಆಚಾರ್ಯರವರು, ತಂಗಾರವರು ಇವರ ಜೊತೆ ಸಮಾಲೋಚನೆ ಮಾಡಿ, ಕೆಲಸವನ್ನು ನಾವು ವಾಪಸ್ ತೆಗೆದುಕೊಂಡು, ಪರಿಪೂರ್ಣವಾಗಿ ಅಲ್ಲಿ ಒಪ್ಪಿ, ಇಲ್ಲಿಗೆ ಬಂದಿರುವಂಥಾದ್ದು.

ಶ್ರೀ ಬಿ. ಸೋಮಶೇಖರ್ : ಮಾನ್ಯ ಸಭಾಧ್ಯಕ್ಷರೇ, ವಿಶ್ವನಾಥ್‌ರವರು ತಂದಿರುವುದನ್ನು ನಾವು ಸಂಶಯ ಪಡಬೇಕಾಗಿಲ್ಲ. ಏಕೆಂದರೆ, ಅವರು ಸಾಮಾಜಿಕ ಕಳಕಳಿ ಇಟ್ಟುಕೊಂಡಿರುವವರು. ಒಂದು ವಿಷಯವೇನೆಂದರೆ, ಆ ಪಾರ್ಟಿಯಲ್ಲಿದ್ದುಕೊಂಡು, ನಿಮಗೇನು ಒಳ್ಳೆಯ ಉದ್ದೇಶ ಗಳಿದೆಯೋ, ಅವುಗಳನ್ನು ನೀವು ಸ್ವತ: ಮಾಡುವುದಕ್ಕಾಗುವುದಿಲ್ಲ. ಏನೋ ರಿಸರ್ವೇಶನ್ ತರಬೇಕೆಂದಿರಿ. ನಿಮಗೆ ಬಿಡಲಿಲ್ಲ, ನಿಮ್ಮ ಕಾಲೆಳೆದುಬಿಟ್ಟರು. ಇದನ್ನು ತಂದು ಎರಡು ದಿನವಾಗಿದೆ. ಇವತ್ತು ಬೆಳಿಗ್ಗೆ 8–30ಕ್ಕೆ ಫೋಟೋ ಸೆಷನ್‌ಗೆ ಬಂದು, ಇಲ್ಲಿಯವರೆಗೆ ಆಗಿದೆ. ಆಮೇಲೆ ನಿಮಗೆ ಥ್ಯಾಂಕ್ಸ್ ಬೇರೆ ಹೇಳಬೇಕಾಗಿದೆ. ನಾಳೆ ಬೆಳಿಗ್ಗೆ 11 ಗಂಟೆಗೆ ಸೇರಿ, ದಯವಿಟ್ಟು ಅಡ್ಜರ್ನ್ ಮಾಡಿ; ಆರೂವರೆ ಗಂಟೆಯಾಗಿದೆ.

ಅಧ್ಯಕ್ಷರು : ಹಣಕಾಸಿನ ಬಿಲ್ ಆ ಮನೆಯಲ್ಲಿ ನಡೆಯುತ್ತಾ ಇದೆ. ಅಲ್ಲಿ ಮುಖ್ಯಮಂತ್ರಿಗಳು ಮಾತನಾಡುತ್ತಾ ಇದ್ದಾರೆ. ಅಲ್ಲಿಂದ, ಮೆಸೇಜ್ ಬರುವವರೆಗೂ ನಾವು ಕಾಯಬೇಕಾಗುತ್ತದೆ.

ಶ್ರೀ ಬಿ. ಸೋಮಶೇಖರ್ : ನಾವು ಒಂದು ಕಸ್ಟಮರಿ ಸ್ಪೀಚ್ ಮಾಡಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅಲ್ಲಿ ಪಾಸಾಗದಿದ್ದರೂ, ಇಲ್ಲಿ ಪಾಸಾಗಲಿ. ಅದಕ್ಕೇನೂ ತೊಂದರೆ ಇಲ್ಲ.

ಅಧ್ಯಕ್ಷರು : ಅನೇಕ ಸಲ ನಾವುಗಳು 7–30, 8–00 ಗಂಟೆಗಳ ವರೆಗೂ ಸದನದಲ್ಲಿ ಕುಳಿತು ಕೆಲಸ ಮಾಡಿದ್ದೇವೆ.

ಶ್ರೀ ಬಿ. ಸೋಮಶೇಖರ್ : ನಾವು ಈ ಸದನದಲ್ಲಿ ತಾವುಗಳು ಸದನವನ್ನು ನಾಲ್ಕುವರೆ ವರ್ಷಗಳ ಕಾಲ ಹೇಗೆ ನಡೆಸಿಕೊಂಡು ಬಂದಿದ್ದೀರಿ ಎಂಬ ಬಗ್ಗೆ ನಾಲ್ಕು ಮಾತುಗಳನ್ನು ಕೃತಜ್ಞತಾಪೂರ್ವಕವಾಗಿ ಹೇಳಬೇಕಾಗುತ್ತದೆ. ಕಸ್ಟಮರಿ ರಿಮಾರ್ಕ್ ಮಾಡಬೇಕಾಗಿದೆ. ಅದು ಒಂದು 15–20 ನಿಮಿಷ ಬೇಕಾಗುತ್ತದೆ. ಎಲ್ಲರೂ ಮಾಡಬೇಕಾಗಿದೆ. ಆದುದರಿಂದ ಕಾರ್ಯಕಲಾಪಗಳನ್ನು ಬಹಳ ನಿಧಾನವಾಗಿ ಮಾಡೋಣ. ನಾಳೆ ಒಂದು ದಿನ ತೆಗೆದುಕೊಳ್ಳೋಣ. ನಾವೆಲ್ಲರೂ ಬೆಳಿಗ್ಗೆ 8–30 ಗಂಟೆಗೆ ಬಂದಿದ್ದೇವೆ. ದಯವಿಟ್ಟು ಈಗ ಅಡ್‌ಜರ್ನ್ ಮಾಡಿ..

ಅಧ್ಯಕ್ಷರು : ಖರ್ಗೆಯವರೇ, ಒಂದು ಕೆಲಸ ಮಾಡೋಣ. ಒಂದು ಬಿಲ್ ತೆಗೆದುಕೊಂಡು ಸಿ.ಎಂ. ಅವರಿಗೆ ಹೇಳಿ ಕಳುಹಿಸಿ. ಅವರು ಏನು ಹೇಳುತ್ತಾರೋ ನೋಡೋಣ. ನಾಳೆ ಬೆಳಿಗ್ಗೆ 2–30ರ ವರೆಗೆ ಸಭೆ ಸೇರೋಣವೇ ಎಂದು ಅಭಿಪ್ರಾಯವನ್ನು ಪಡೆದುಕೊಳ್ಳಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ನಾವು ಇನ್ನೂ ಒಂಭತ್ತು ತಿಂಗಳು ಕುಳಿತಿರಬೇಕೆಂದು ಬಂದಿದ್ದೇವೆ. ಮಾನ್ಯ ಶೆಟ್ಟರ್‌ರವರು, ಸುರೇಶ್ ಕುಮಾರ್‌ರವರು ನಮ್ಮನ್ನು ಕುಳಿತ್ತುಕೊಳ್ಳಲು ಬಿಡಲಿಲ್ಲ.

ಶ್ರೀ ಎಸ್.ಎಸ್. ಪಾಟೀಲ್ : ನಿಮ್ಮ ಚರ್ಚೆ ಮತ್ತು ಉತ್ತರ ಅಂದರೆ ರಾತ್ರಿ ಎಂಟು ಗಂಟೆಯಾಗುತ್ತದೆ. ಈಗ ಬೇಕಾದರೆ ಸರಳವಾಗಿರುವ ಬಡ್ಡಿ ಸಂಬಂಧಪಟ್ಟ ಬಿಲ್ಲನ್ನು ತೆಗೆದುಕೊಳ್ಳ ಬಹುದಾಗಿದೆ. ಅದನ್ನು ತರುವಂತಾದ್ದು ಕೂಡ ಯೋಗ್ಯವಾಗಿದೆ.

ಅಧ್ಯಕ್ಷರು : ವಿಶ್ವನಾಥ್‌ರವರು ಒಂದು ಪ್ರಾಮುಖ್ಯವಾದ ಒಂದು ಬಿಲ್ಲನ್ನು ತಂದಿದ್ದಾರೆ. ಒಟ್ಟು ನಾಲ್ಕು ಬಿಲ್‌ಗಳು ಇವೆ.

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು) : ಮಾನ್ಯ ಅಧ್ಯಕ್ಷರೇ, ತಾವುಗಳು ಬಹಳ ಒತ್ತಾಯ ಮಾಡುತ್ತಿರತಕ್ಕಂಥಾದ್ದು ಸೌಹಾರ್ದ ಕಾನೂನಿಗೆ ಸಂಬಂಧಪಟ್ಟಿದ್ದು. ಅದನ್ನು ಮೂರನೇದಾಗಿ ಇಟ್ಟುಕೊಂಡು ಒಂದು ಮತ್ತು ಎರಡು ಸರಳವಾದ ಬಿಲ್‌ಗಳೇನಿವೆ ಅದನ್ನು ತೆಗೆದುಕೊಳ್ಳಲು ಅನುಮತಿಸಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಈಗ ನಮ್ಮಲ್ಲಿ ಸಹಕಾರ ಖಾತೆಗೆ ಸಂಬಂಧಪಟ್ಟ ಎರಡು ಬಿಲ್‌ಗಳಿವೆ. ಅದರಲ್ಲಿ ಬಡ್ಡಿಗೆ ಸಂಬಂಧಪಟ್ಟದ್ದನ್ನು ತೆಗೆದುಕೊಳ್ಳಿ.

ಶ್ರೀ ಹೆಚ್. ವಿಶ್ವನಾಥ್ : ಸನ್ಮಾನ್ಯ ಅಧ್ಯಕ್ಷರೇ, ಕರ್ನಾಟಕ ಸಹಕಾರ ಸಂಘಗಳ ವಿಧೇಯಕ–2004ನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳಬೇಕೆಂದು ವಿನಂತಿಸಿಕೊಳ್ಳುತ್ತೇನೆ. ಒಟ್ಟು ಮೂರು ಬಿಲ್‌ಗಳಿವೆ. ಒಂದು ಕರ್ನಾಟಕ ಸಹಕಾರ ಸಂಘಗಳ ಮೂರನೇ ತಿದ್ದುಪಡಿ ವಿಧೇಯಕ. ಇದರಲ್ಲಿ ಹೈಕೋರ್ಟ್ ಕೆಲವೊಂದು ಅಬ್ಸ್‌ರವೇಶನ್ ಮಾಡಿರುವುದು, ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ, ಮತ್ತು ಭಾರತ ಸರಕಾರ ಅಬ್ಸ್‌ರ್‌ವೇಶನ್ ಮಾಡಿರುವುದರಲ್ಲಿ ಕೆಲವೊಂದು ತಿದ್ದುಪಡಿಗಳನ್ನು ತಂದಿದ್ದೇವೆ. ಎರಡನೇಯದು ಬಡ್ಡಿಯ ಮೇಲೆ ಒಂದು ತಿದ್ದುಪಡಿಯನ್ನು ತಂದಿದ್ದೇವೆ. ಮೂರನೇಯದು ಸೌಹಾರ್ದ ಆಕ್ಟ್‌ನ ಮೇಲೆ ತಿದ್ದುಪಡಿಯನ್ನು ತಂದಿದ್ದೇವೆ. ಇಲ್ಲಿ ಯಾವುದೇ ಕನ್‌ಫ್ಯೂಶನ್ ಬೇಡ. ಸೌಹಾರ್ದ ಬಿಲ್‌ನ್ನು ಕೊನೆಯಲ್ಲಿ ಇಟ್ಟುಕೊಳ್ಳೋಣ. ಮೊದಲ ಎರಡನ್ನು ಮುಗಿಸೋಣ.

ಶ್ರೀ ಎಸ್.ಎಸ್. ಪಾಟೀಲ್ : 59 ಮತ್ತು ಸೌಹಾರ್ದ ಏನಿದೆ ಅದು ಬೇಡ. ಬಡ್ಡಿ ಬಿಲ್‌ನ್ನು ತೆಗೆದುಕೊಳ್ಳಿ. ಉಳಿದುದನ್ನು ಹೇಗಿದ್ದರೂ ಎರಡು ತಿಂಗಳಲ್ಲಿ ನೀವೇ ಅಧಿಕಾರಕ್ಕೆ ಬರುತ್ತೀರೆಂದು ಹೇಳಿದ್ದೀರಿ. ಆಗ ಮಾಡಿಕೊಳ್ಳಿ. ಇವುಗಳು ತುರ್ತು ಎಂದೇನೂ ಇಲ್ಲ. ಅದು ಇಲ್ಲದಿದ್ದರೆ ನಾಳೆ ಆಡಳಿತ ನಡೆಯುವುದಿಲ್ಲವೆಂದೇನೂ ಇಲ್ಲ.

ಶ್ರೀ ಹೆಚ್. ವಿಶ್ವನಾಥ್ : ಈಗಾಗಲೇ ಯಾರು ಸೌಹಾರ್ದಕ್ಕೆ ಹೊರಟು ಹೋಗಿದ್ದಾರೆ, ಅವರು ವಾಪಸ್ ಹಳೆಯ ಸಿಸ್ಟಂಗೆ ಬರುತ್ತಾ ಇದ್ದಾರೆ. ಇದು ಅದಕ್ಕೆ ಅವಕಾಶ ಕೊಡುವಂಥ ತಿದ್ದುಪಡಿಯೇ ಹೊರತು, ಸೌಹಾರ್ದ ಇದಲ್ಲ. ಮೂರನೇಯದು ಸೌಹಾರ್ದ. ಮುಂದೆ ವಿವರವಾಗಿ ಚರ್ಚೆ ಮಾಡೋಣ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ : ಇಲ್ಲಿ ಎಸ್.ಎಸ್. ಪಾಟೀಲರ ಸಮಸ್ಯೆ ಏನೆಂದರೆ, ಇವರು ಮಾಡಿದ ಸೌಹಾರ್ದವನ್ನು ಅವರು ತೆಗೆಯುತ್ತಾ ಇದ್ದಾರೆ. ಅವರು ಮಾಡಿದ ಸೌಹಾರ್ದವನ್ನು ಇವರು ತೆಗೆಯುವುದಕ್ಕೆ ಪ್ರಯತ್ನ ಮಾಡುತ್ತಾ ಇದ್ದಾರೆ.

ಶ್ರೀ ಎಸ್.ಎಸ್. ಪಾಟೀಲ್ : ಅಂಥ ಯಾವ ಉದ್ದೇಶವೂ ಇಲ್ಲ. ನೀವು ಎಲ್ಲಾ ಅಧಿಕಾರವನ್ನು ಅಧಿಕಾರಿಗಳ ಕೈಯಲ್ಲಿ ಕೊಡಲು ಹೊರಟಿದ್ದಾರೆ. ಅವರು ನಿಮಗೂ ಮಿಸ್‌ಗೈಡ್ ಮಾಡಿಬಿಡುತ್ತಾರೆ. ಆದುದರಿಂದ ಮುಂದೆ ನೀವೇ ಸಹಕಾರ ಮಂತ್ರಿಯಾಗಿ ಮಾಡಿ. ಮೇಲ್ಮನೆಯಲ್ಲಿ ಪಾಸ್ ಆಗಿದೆ ಎಂದು ಹೇಳಿದರೂ ಕೂಡ ಇಲ್ಲಿ ಅದನ್ನು ಮಾಡಬೇಕೆಂದೇನೂ ಇಲ್ಲ.

ಶ್ರೀ ಹೆಚ್. ವಿಶ್ವನಾಥ್ : ಮಾನ್ಯ ಅಧ್ಯಕ್ಷರೇ, ಅವರ ಆತಂಕಗಳೇನಿದ್ದುವು, ಸೌಹಾರ್ದದಲ್ಲಿ ಹಲವಾರು ವಿಷಯಗಳನ್ನು ನಾವು ಕಿತ್ತುಕೊಂಡಿದ್ದೇವೆ ಎನ್ನತಕ್ಕಂತಾದ್ದನ್ನು ಭಾವಿಸಿಭಾರದು. ಸರಕಾರಕ್ಕೆ ನಾನು ಹೇಳಿದ್ದೆಲ್ಲಾ ಆಗಬೇಕೆಂಬ ಹಠವೇನೂ ಇಲ್ಲ. ಬಹಳ ಸೌಹಾರ್ದಯುತವಾಗಿ ಮೇಲ್ಮನೆಯಲ್ಲಿ ಹಿರಿಯ ಸದಸ್ಯರುಗಳು ಚರ್ಚೆ ಮಾಡಿ, ಕೆಲವನ್ನು ವಾಪಸ್ ತೆಗೆದುಕೊಂಡಿದ್ದಾರೆ. ಕನ್ಸೀಡ್ ಆಗಿ. ಅದನ್ನು ಬಿಟ್ಟು ತಾವೇನಾದರು ಹೇಳುವುದಿದ್ದರೆ ಹೇಳ ಬಹುದು.

ಶಾಸನ ರಚನೆ

(2) ಕರ್ನಾಟಕ ಗ್ರಾಮ ರಕ್ಷಣಾ ದಳಪತಿಗಳ (ನಿರಸನ) ವಿಧೇಯಕ, 2004..

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು) : ಅಧ್ಯಕ್ಷರೇ, "ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ '2004ನೇ ಸಾಲಿನ ಕರ್ನಾಟಕ ಗ್ರಾಮ ರಕ್ಷಣಾ ದಳಪತಿಗಳ (ನಿರಸನ) ವಿಧೇಯಕ'" ವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವ ಮಂಡಿಸಲ್ಪಟ್ಟಿತು

†ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಅದಕ್ಕಿಂತ ಮುಂಚೆ ಒಂದು ಸಣ್ಣ ರಿಪೀಲ್ ಇದೆ. 1964 ದಳಪತಿಗೆ ಸಂಬಂಧಪಟ್ಟದ್ದು. ಇದರಲ್ಲಿ ಏನೂ ಇಲ್ಲ. ಈಗಾಗಲೇ ದಳಪತಿಗಳನ್ನು ನೇಮಕ ಮಾಡತಕ್ಕಂಥದ್ದಾಗಲಿ, ಹೊಸ ದಳಪತಿಗಳನ್ನು ತೆಗೆದುಕೊಳ್ಳ ತಕ್ಕಂಥಾದ್ದಾಗಲೀ, ಇಲ್ಲ. ಅದಕ್ಕಾಗಿ ಅವರಿಗೆ ಸಂಬಳ ಕೊಟ್ಟು ಇಟ್ಟುಕೊಳ್ಳ ತಕ್ಕದ್ದೂ ಕೂಡ, ಸಾಧ್ಯವಿಲ್ಲ. ಅದಕ್ಕಾಗಿ ಇದು 1993 ರಿಂದ ಇದನ್ನು ರಿಪೀಲ್ ಮಾಡಬೇಕೆಂದು ಹೇಳಿ, ಬರುತ್ತಲೇ ಇದೆ. ಮೇಲ್ಮನೆಯಲ್ಲಿ ಇದು ಪಾಸ್ ಆಗಿದೆ. ಇಲ್ಲಿಯೂ ಕೂಡ ಇದನ್ನು ರಿಪೀಲ್ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ನಾರ್ಮ್ಸ್ ಪ್ರಕಾರ ದಳಪತಿಗಳು ಇವೊತ್ತಿನ ದಿವಸ ನೇಮಕ ಮಾಡುವ ಹಾಗಿಲ್ಲ. ಅನೇಕ ಜನ ಈಗ ಏನು ಹಳೆಯ ದಳಪತಿಗಳಿದ್ದಾರೆ, ಆ ನಾರ್ಮಗಳ ಪ್ರಕಾರ ಕೆಲಸ ಮಾಡುತ್ತಾ ಇಲ್ಲ. ಅದನ್ನು ಗಮನಿಸಿ 1993ರಲ್ಲಿ ಇದನ್ನು ಅಬಾಲಿಶ್ ಮಾಡಬೇಕೆಂದು ಒಂದು ನಿರ್ಣಯವನ್ನು ತೆಗೆದುಕೊಂಡಿದ್ದಾರೆ. ಮುಂದೆ ಇದನ್ನು ತೆಗೆದು ರಿಪೀಲ್ ಮಾಡಬೇಕೆಂದು ಹೇಳಿ, ರೆಕಮಂಡ್ ಮಾಡಿ ಪುನ: ಗವರ್ನರ್‌ರವರ ಹತ್ತಿರವೂ ಹೋಗಿ, ಮೊನ್ನೆ ಬಿಲ್ ಆಗಿ ಬಂದ ಮೇಲೆ, ಇದು ರಿಪೀಲ್ ಮಾಡಬೇಕು, ಇದರ ಉಪಯೋಗವಿಲ್ಲ, ಅನೇಕ ಹಳ್ಳಿಗಳಲ್ಲಿ ದಳಪತಿ ಅಂದರೆ ಪಾಟೀಲ್‌ಗಳ ಮೇಲೆ ದೂರುಗಳು, ಇವರ ಮೇಲೆ ಅವರು ದೂರು ಕೊಡುವುದು, ಮುಂತಾಗಿ ಆಗುತ್ತಿದ್ದು ಅದಕ್ಕಾಗಿ ಈ ವ್ಯವಸ್ಥೆಯು ಸರಿಯಿಲ್ಲ, ಅನ್ನತಕ್ಕಂಥ ದೃಷ್ಟಿಯಿಂದ ಒಂದು ನಿರ್ಣಯಕ್ಕೆ ಬಂದಮೇಲೆ, ಆ ಕಾನೂನನ್ನು ರಿಪೀಲ್ ಮಾಡುತ್ತಾ ಇದ್ದೇವೆ. ಮೇಲ್ಮನೆಯಲ್ಲಿ ಸರ್ವಾನುಮತದಿಂದ ಒಪ್ಪಿಗೆ ಕೊಟ್ಟಿದ್ದಾರೆ. ಇಲ್ಲಿಯೂ ಕೂಡ ಅದನ್ನು ರಿಪೀಲ್ ಮಾಡಲು ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

†ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲಾ) : ಮಾನ್ಯ ಅಧ್ಯಕ್ಷರೇ, ಈ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ದಳಪತಿಗಳ ಒಂದು ಸಮಾವೇಶ ರಾಜ್ಯ ಮಟ್ಟದಲ್ಲಿ

(†ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)